ಸಂಪಾದಕೀಯ

'ಚಿತ್ತವೃತ್ತ'ದ ಇಪ್ಪತ್ತೈದು ಲೇಖನಗಳು ಮಹಿಳೆಯರು ವಿವಿಧ ದೃಷ್ಟಿಕೋನಗಳೊಂದಿಗೆ ಬರೆದ ವೈಚಾರಿಕ ಪ್ರಬಂಧಗಳು. ಇವುಗಳಲ್ಲಿ ಹೆಚ್ಚಿನವುಗಳು ಮಹಿಳೆಯ ಬದುಕಿನ ಸಮಸ್ಯೆ, ಕಂಡುಂಡ ಒಳಿತು, ಕೆಡುಕು, ಆಗಬೇಕಾದ ಬದಲಾವಣೆ, ಸುಧಾರಣೆ, ನೀಗಬೇಕಾದ ಶೋಷಣೆ, ಇದರೊಂದಿಗೆ ತನ್ನನ್ನು ತಾನು ತಿದ್ದಿಕೊಳ್ಳಬೇಕಾದ ಬಗೆ, ತನ್ನ ಮುಖ್ಯ ಕಾರ್ಯಕ್ಷೇತ್ರವೆನಿಸಿದ ಮನೆ, ಮಕ್ಕಳು ಮತ್ತು ಸಮಾಜದೊಂದಿಗೆ ಹೊಂದಾಣಿಕೆ, ಈ ವಿಷಯಗಳನ್ನೇ ಒಳಗೊಂಡಿವೆ. ಸಾಹಿತ್ಯ ಕ್ಷೇತ್ರದಲ್ಲಿ ಯಶಸ್ವೀ ಬರಹಗಾರ್ತಿಯರು ಮತ್ತು ಅನುಭವಿಗಳಿಂದ ತೊಡಗಿ ಇತ್ತೀಚಿನ ಹೊಸ ಮತ್ತು ಎಳೆಯ ಲೇಖಕಿಯರ ಬರಹಗಳೂ ಈ ಪುಸ್ತಕದಲ್ಲಿವೆ. ಅಂತೆಯೇ ಗೃಹಿಣಿಯರು, ಉದ್ಯೋಗಸ್ಥೆಯರು, ಉಪನ್ಯಾಸಕಿಯರು, ವೈದ್ಯೆ, ಶಿಕ್ಷಕಿ ಮುಂತಾದವರ ಲೇಖನಗಳೂ ಇಲ್ಲಿ ಸೇರಿವೆ.

ಸಂದೀಪ ಸಾಹಿತ್ಯ ಮಾಲೆಯಲ್ಲಿ ಬೇರೆಲ್ಲಾ ಪ್ರಕಾರದ ಸಾಹಿತ್ಯ ಪ್ರಕಟಿತವಾಗಿದ್ದರೂ ವೈಚಾರಿಕ ಪ್ರಬಂಧಗಳು ಬೆಳಕು ಕಂಡಿರಲಿಲ್ಲ. ಆ ಕೊರತೆ ಇಲ್ಲಿ ನೀಗಿದೆ. ಇದಕ್ಕಾಗಿ ಸಹಕರಿಸಿದ ಸೋದರಿ ಲೇಖಕಿಯರು ಅಭಿನಂದನಾರ್ಹರು. ಈ ಲೇಖನಗಳ ಕುರಿತಾಗಿ ಓದುಗರು ಮತ್ತು ವಿಮರ್ಶಕರಿಂದ, (ಮಹಿಳೆಯರು ಹಾಗೂ ಮಹನೀಯರು ಸೇರಿ) ಅಭಿಪ್ರಾಯಗಳನ್ನು ತಿಳಿಯಲು ಕಾತರದ ನಿರೀಕ್ಷೆಯಿದೆ. ದಯವಿಟ್ಟು ತಮ್ಮ ವಸ್ತುನಿಷ್ಠ ಅನಿಸಿಕೆಗಳನ್ನು, ವಿಷಯಗಳ ವಿಮರ್ಶೆಯನ್ನು ನಮ್ಮ ಪ್ರಕಾಶನದ ವಿಳಾಸಕ್ಕೆ ಬರೆಯಿರಿ. ಅಂತಹ ಬರಹಗಳನ್ನು ಆಯ್ದು ಮುಂದಿನ ಪುಸ್ತಕದೊಂದಿಗೆ ಪ್ರಕಟಿಸುವ ಇಚ್ಛೆ ನಮ್ಮದು.

ಇಂತು,

ವಂದನೆಗಳೊಂದಿಗೆ–
ಇಂದಿರಾ ಹಾಲಂಬಿ.

'ಸಂದೀಪ'
ಆತ್ರಾಡಿ,
ಉಡುಪಿ, ದ. ಕ.

ಚಿತ್ರವೃತ್ತ

ಧರ್ಮದರ್ಶಿ ಹರಿಕೃಷ್ಣ ಪುನರೂರು
ಅಧ್ಯಕ್ಷರು, ದ. ಕ. ಜಿಲ್ಲಾ ಸಾಹಿತ್ಯ ಪರಿಷತ್ತು
ಸಹಭಾಗಿತ್ವದಲ್ಲಿ ಈ ಪುಸ್ತಕ ಮುದ್ರಿಸಲಾಗಿದೆ.

ಕೃತಜ್ಞತೆಗಳೊಂದಿಗೆ–
ಸಂದೀಪ ಸಾಹಿತ್ಯ ಪ್ರಕಾಶನ.

'ಚಿತ್ತವೃತ್ತಿ'ದ

ಶೋಷಣೆಗೆ ಕೊನೆ ಇದೆಯೆ?

— ಯಶೋದಾ ಜೆನ್ನಿ

ಅನಾದಿಕಾಲದಿಂದಲೂ ತಾನು ಅನುಭವಿಸುತ್ತಾ ಬಂದ ಶೋಷಣೆಯ ಬದುಕಿಗೆ ಕೊನೆಯಿದೆಯೆಂದರೆ ಹೆಣ್ಣಿಗೆ ನಂಬಿಕೆಯಾಗುತ್ತಿಲ್ಲ. ಇದಕ್ಕೆ ಕಾರಣ ಪುರುಷ ಪ್ರಧಾನ ಸಮಾಜ ವ್ಯವಸ್ಥೆ ಎನ್ನಬಹುದಾದರೂ ಸ್ತ್ರೀಯರನ್ನು ಆವರಿಸಿರುವ ಕೆಲವು ದೌರ್ಬಲ್ಯಗಳನ್ನು ಕೊಡಹಿಕೊಳ್ಳದೆ ಸ್ತ್ರೀ ಶಕ್ತಿ ಎಚ್ಚರಗೊಳ್ಳುವುದು ಹೇಗೆ?

— ಸಂ.

"ಅಯ್ಯೋ ಹೆಣ್ಣೇ? ಈ ಬಾರಿಯೂ ಹೆಣ್ಣು ಹುಟ್ಟಿತೇ? ಛೆ! ಪಾಪ!" ಇತ್ಯಾದಿ ಸಹಾನುಭೂತಿಯ ವಿವಿಧ ಉದ್ಗಾರಗಳನ್ನು ಇಂದಿಗೂ ನಾವು ಅಲ್ಲಲ್ಲಿ ಕೇಳುತ್ತಿರುತ್ತೇವೆ. ಮಾತ್ರವಲ್ಲ, ಇಂತಹ ಮಾತುಗಳು ಹೆಚ್ಚಾಗಿ ಸ್ತ್ರೀಯರಿಂದಲೇ ಕೇಳಿ ಬರುತ್ತಿವೆ ಎನ್ನುವುದೂ ನಾವೆಲ್ಲ ತಿಳಿದಿರುವ ಶೋಚನೀಯ ವಿಚಾರ. ಸ್ತ್ರೀ ಸಮಾನತೆ, ಮಹಿಳಾ ವರ್ಷ ಎಂದೆಲ್ಲ ಘೋಷಿಸಿ, ಭಾಷಣಗಳನ್ನು ಮಾಡಿ ಸುಸ್ತಾದ ಮೇಲೆಯೂ ಮಹಿಳೆಯರ ಸ್ಥಿತಿ ಸುಧಾರಿಸಿಲ್ಲವೆನ್ನುವುದಕ್ಕೆ ಮೇಲಿನ ಮಾತುಗಳೇ ಸಾಕ್ಷಿ.

ಏಕೆ ಹೀಗೆ? ಬದುಕಿನ ದುರಂತ ಕಥೆಗಳಿಗೆ ಮುಕ್ತಾಯವೇ ಇಲ್ಲವೇ? ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಪುರುಷರಿಗೆ ಸಮಾನವಾಗಿ ದುಡಿಯುವ, ಹೋರಾಡುವ ಮಹಿಳೆ ಸಂಸಾರ ಜೀವನದಲ್ಲಿ ನಿಕೃಷ್ಟವಾಗಿ ತಾತ್ಸಾರಕ್ಕೊಳಗಾಗುತ್ತಾಳೆ. ಆರ್ಥಿಕವಾಗಿ ಸ್ವಾವಲಂಬಿಯಾಗಿರುವ ಹೆಣ್ಣಿಗೂ ಪುರುಷನಿಗಿರುವ ಸ್ಥಾನಮಾನಗಳಿಲ್ಲ. ಏಕೆ? ಇದಕ್ಕೆ ಕೊನೆಯೆಂದು? ಇತ್ಯಾದಿ ಪ್ರಶ್ನೆಗಳಿಗೆ ಸೂಕ್ತ ಪರಿಹಾರವನ್ನು ಕಂಡುಹಿಡಿದು ಸಮರ್ಪಕವಾದ ದೃಢ ಹೆಜ್ಜೆಯನ್ನಿಟ್ಟು ಮುನ್ನಡೆಯುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಹೆಣ್ಣು ಹುಟ್ಟಿದಂದಿನಿಂದಲೇ ಆರಂಭವಾಗುವ ಹೆತ್ತವರ ಚಿಂತೆ ಅವಳು ಬೆಳೆದಂತೆ ಹೆಚ್ಚುತ್ತಾ ಹೋಗುವುದು ಸಾಮಾನ್ಯ ಸಂಗತಿಯಾಗಿದೆ. ಇಂದಿಗೂ ಅನೇಕ ಮನೆಗಳಲ್ಲಿ ಹುಡುಗಿಯರು ಹುಡುಗರಿಗಿಂತ ಪ್ರತ್ಯೇಕ ರೀತಿಯಲ್ಲಿಯೇ ಪೋಷಿಸಲ್ಪಡುತ್ತಾರೆ. ಹೆಣ್ಣಿಗೆ ಬಾಲ್ಯದಿಂದಲೇ ಹೆಜ್ಜೆ ಹೆಜ್ಜೆಗೂ "ನೀನು ಹೆಣ್ಣು, ಹೀಗೇ ಇರಬೇಕು, ಮನೆಕೆಲಸಗಳನ್ನೆಲ್ಲ ಮಾಡಲು ಕಲಿಯಬೇಕು, ಹುಡುಗರಂತೆ ಹೊರಗೆ ಆಡಲು, ಅಲೆದಾಡಲೂ ಸ್ವತಂತ್ರಳಲ್ಲ," ಇತ್ಯಾದಿ ಅನೇಕ ನಿರ್ಬಂಧಗಳನ್ನು ಹೇರಿ ಎಳೆಯ ಮಿದುಳಲ್ಲಿ ಕೀಳರಿಮೆಯ ಬೀಜವನ್ನು ಬಿತ್ತುತ್ತಾರೆ. ಮನೆಯಲ್ಲಿ ಹನ್ನೆರಡು ವರ್ಷದ ಹುಡುಗನಿಗಿಂತ ಹತ್ತು ವರ್ಷದ ಹುಡುಗಿ ಹೆಚ್ಚಿನ ಕೆಲಸವನ್ನು ಮಾಡಬೇಕು. ಅವನು ತಿಂಡಿ ತಿಂದು ಹೊರಗೆ ಆಡಲು ಓಡಿದರೆ ಇವಳು ತೊಳೆದು ಸ್ವಚ್ಛಗೊಳಿಸುವ ಕೆಲಸವನ್ನು ಮಾಡಬೇಕಾಗುತ್ತದೆ. ಏಕೆಂದರೆ ಅವನು ಗಂಡು ಎನ್ನುವುದೊಂದೇ ಕಾರಣಕ್ಕಾಗಿ ಹೆಚ್ಚಿನ ಸ್ವಾತಂತ್ರ್ಯ, ರಿಯಾಯಿತಿ ಗಳನ್ನು ಹುಟ್ಟಿನಿಂದಲೇ ಪಡೆದಿರುತ್ತಾನೆ. ನಾನು ಶಿಕ್ಷಕಿಯಾಗಿದ್ದ ಶಾಲೆ ಯೊಂದರಲ್ಲಿ ಒಬ್ಬರು ಅಧ್ಯಾಪಕರು ತರಗತಿಯನ್ನು ಗುಡಿಸುವ ಕೆಲಸಕ್ಕೆ ಪ್ರತಿನಿತ್ಯವೂ ಹುಡುಗಿಯರನ್ನೇ ನೇಮಿಸುತ್ತಿದ್ದರು. ಇದು ಎಷ್ಟು ವಿಪರೀತ ರೀತಿ ತಲುಪಿತೆಂದರೆ ಅಕಸ್ಮಾತ್ ಯಾರಾದರೊಬ್ಬ ಹುಡುಗ ತಾನಾಗಿ ಕಸಬರಿಕೆಯನ್ನು ಹಿಡಿದುಕೊಂಡು ಗುಡಿಸುವ ಉತ್ಸಾಹ ತೋರಿದರೆ ಆ ಅಧ್ಯಾಪಕರ ಅಪಹಾಸ್ಯದ ಮಾತುಗಳನ್ನು ಕೇಳ ಬೇಕಾಗುತ್ತಿತ್ತು. ಏಕೆಂದರೆ ಹುಡುಗರು ಅಂತಹ ಕೆಲಸ ಮಾಡುವುದೇ ಅಪಮಾನ ಎನ್ನುವುದು ಅವರ ಅಭಿಪ್ರಾಯವಾಗಿತ್ತು. ಹೆಣ್ಣು ಕಾಲೇಜಿಗೆ ಹೋಗುತ್ತಿರಲಿ, ಅಥವಾ ಉದ್ಯೋಗವನ್ನವಲಂಬಿಸಿರಲಿ, ಮನೆಗೆಲಸದ ಹೆಚ್ಚಿನ ಹೊರೆಯನ್ನು ಅವಳು ಹೊರಬೇಕಾಗುತ್ತದೆ. ಅವಳ ಸಮಾನ ರಾದ ಸೋದರರು ನಿಶ್ಚಿಂತೆಯಿಂದ ರಾತ್ರಿಯವರೆಗೂ ಹೊರಗೆ ಅಲೆದಾಡುತ್ತಾ ಕಾಲಕಳೆಯುವಾಗ ಈಕೆ ಕೆಲಸದ ಒತ್ತಡದಿಂದ ಸೋತು ಬಳಲಿ ನಿಟ್ಟುಸಿರು ಬಿಡುವ ಪರಿಸ್ಥಿತಿ ಉಂಟಾಗುತ್ತದೆ. ಹೀಗೆ ಬಾಲ್ಯದಿಂದ ಯೌವನದವರೆಗೂ ಹಲವು ಸಂಕಷ್ಟ ಸಮಸ್ಯೆಗಳನ್ನೆದುರಿಸಿ ಇದೇ ತನ್ನ

ಬದುಕು ಎಂದು ನಿರ್ಧರಿಸುವಾಗ ಮುಂದೆ ಮತ್ತೊಂದು ಕಠಿಣವಾದ ಪರೀಕ್ಷೆ ಅವಳ ಚಿತ್ತವನ್ನು ಕಲಕುತ್ತದೆ. ಅದೇ ಅವಳ ಬಾಳಿನ ಪ್ರಾಮುಖ್ಯ ಅಧ್ಯಾಯವನ್ನಾರಂಭಿಸುವ ವಿವಾಹ ಯೋಗಕ್ಕಾಗಿ ನಡೆಸುವ ವಧುಪರೀಕ್ಷೆ. ಇದರಲ್ಲಿ ಅವಳು ಎಷ್ಟೋ ಬಾರಿ ಅಪಮಾನ, ನೋವು, ನಿರಾಸೆ ಗಳನ್ನನುಭವಿಸಬೇಕಾಗುತ್ತದೆ. ಎಲ್ಲೋ ಕೆಲವು ಶ್ರೀಮಂತ ಕನ್ಯೆಯರ ವಿವಾಹಗಳು ಹಣದ ಬಲದಿಂದ ಸುಲಭವಾಗಿ ನೆರವೇರಬಹುದು. ಆದರೆ ಹೆಚ್ಚಿನ ಕಡೆ ಹೆಣ್ಣು ಹೆತ್ತವರು ಅನುಭವಿಸುವ ಸಂಕಷ್ಟಗಳು ಹಲವು ಬಗೆಯವು. ಸಾಮಾನ್ಯ ಮಟ್ಟದ ಮಧ್ಯಮ ವರ್ಗದ ಹುಡುಗರೂ ತಾವು ಕೈ ಹಿಡಿಯುವ ಹುಡುಗಿ ಸಕಲ ಗುಣ ಸಂಪನ್ನೆಯೂಗಿರಬೇಕು ಎಂದು ಬಯಸುತ್ತಾರೆ. ಹುಡುಗಿ ಚೆಲುವೆಯಾಗಿರಬೇಕು, ಸದ್ಗುಣಿಯಾಗಿರಬೇಕು, ಜೊತೆಗೆ ಧಾರಾಳ ಸಂಪತ್ತನ್ನು ತರುವವಳಿರಬೇಕು. ಮದುವೆಯ ಮಾರು ಕಟ್ಟೆಯಲ್ಲಿ ಹುಡುಗನ ಅರ್ಹತೆಗಳು ಅಷ್ಟೊಂದು ಪ್ರಾಮುಖ್ಯ ವೆನಿಸುವುದಿಲ್ಲ. ಸೋಜಿಗದ ಸಂಗತಿಯೆಂದರೆ ಕುರೂಪಿಯಾದ ಹುಡುಗನಿಗೂ ಸುಂದರಿಯಾದ ಮಡದಿಯೇ ಬೇಕು. ದುರಭ್ಯಾಸಗಳ ದಾಸನಿಗೂ ಗುಣವತಿಯಾದ ಪತ್ನಿಯೇ ಬೇಕು. ಮದುವೆಯ ಖರ್ಚನ್ನು ಭರಿಸಲಾಗದ ಗಂಡಿಗೂ ವೈಭವದ ವಿವಾಹ ಸಮಾರಂಭವೇ ಬೇಕು. ಆದರೆ ಹೆಣ್ಣಿಗೆ ಮಾತ್ರ ತನ್ನ ಬಾಳಸಂಗಾತಿಯ ಆಯ್ಕೆಯಲ್ಲಿ ಯಾವ ಹಕ್ಕೂ ಇರುವುದಿಲ್ಲ. ಕೆಲವರ ಪಾಲಿಗೆ ವಿವಾಹ ಎನ್ನುವುದು ಒಂದು ಲಾಟರಿಯ ಹಾಗೆ, ಅದೃಷ್ಟ ಚೆನ್ನಾಗಿದ್ದರೆ ಉತ್ತಮ ವರ ದೊರೆಯಲೂ ಬಹುದು. ಇನ್ನು ಹಲವರಿಗೆ ಬದುಕಿನುದ್ದಕ್ಕೂ ಕಣ್ಣೀರು ಹರಿಸುತ್ತಾ ಕೊರಗುವುದೊಂದೇ ಗತಿಯಾಗಬಹುದು. ಜೀವನ ತೀರಾ ಅಸಹನೀಯ ವೆನಿಸಿ ಬಾಳನ್ನೇ ಕೊನೆಗೊಳಿಸುವ ಸಂದರ್ಭಗಳೂ ಒದಗಬಹುದು. ಆದರೂ ಕೂಡಾ ಹೆಚ್ಚಿನ ಹುಡುಗಿಯರು ತಮಗೆ ಇಷ್ಟವಿರಲಿ, ಇಲ್ಲದಿರಲಿ, ಅವಿವಾಹಿತೆಯಾಗಿ ಉಳಿಯುವುದಕ್ಕಿಂತ ವಿವಾಹಿತೆ ಎನಿಸಿಕೊಳ್ಳಲಿಕ್ಕಾದರೂ ಮದುವೆಯಾಗುತ್ತಾರೆ. ಮುಂದೆ ಅದಕ್ಕಾಗಿ ಪಶ್ಚಾತ್ತಾಪದಿಂದ ಕೊರಗುವ ಸಂದರ್ಭಗಳೂ ವಿರಳವಲ್ಲ. ಅತ್ತೆ, ಮಾವ, ನಾದಿನಿಯರಿರುವ ತುಂಬಿದ

ಸಂಸಾರದಲ್ಲಿ ಆಕೆ ಸಂಬಳವಿಲ್ಲದೆ ದುಡಿಯುವ ಆಳಾಗಿ ಬಾಳಬೇಕಾಗುತ್ತದೆ. ಮನೆಯೊಳಗೆ ಗೃಹಿಣಿಯಾಗಿ ಬದುಕುವ ಸ್ತ್ರೀಯರ ಸಂಕಷ್ಟಗಳು ಹಲವು ರೀತಿಯವಾಗಿದ್ದರೆ ಉದ್ಯೋಗವನ್ನವಲಂಬಿಸಿ ಸಂಸಾರ ಸಾಗಿಸುವ ಮಹಿಳೆಯರ ತೊಂದರೆಗಳು ಇನ್ನಷ್ಟು ಭೀಕರವಾಗಿರುತ್ತವೆ. ಉದೋಗಸ್ಥ ಹೆಣ್ಣು ಮನೆಕೆಲಸದ ಹೊಣೆಗಾರಿಕೆಯೊಂದಿಗೆ ಹೊತ್ತಿಗೆ ಸರಿಯಾಗಿ ಹೊರಗಿನ ಕೆಲಸಕ್ಕೂ ಹೋಗಬೇಕಾಗುತ್ತದೆ. ಹಳೆಯ ಸಂಪ್ರದಾಯಗಳ ಅನೇಕ ಮನೆಗಳಲ್ಲಿ ಪುರುಷರು ಮನೆಕೆಲಸವನ್ನು ಮಾಡುವುದು ಅವಮಾನವೆಂದೇ ತಿಳಿದಿದ್ದಾರೆ. ಆದರೆ ಸ್ತ್ರೀಯರು ಹೊರಗೆ ದುಡಿದು ಸಂಪಾದಿಸಲು ಅವರ ರೀತಿ, ನೀತಿಗಳು ಅಡ್ಡ ಬರಲಾರವು. ಏಕೆಂದರೆ ಹಣದ ಮೋಹ ಎಲ್ಲ ವನ್ನೂ ಮೀರಿ ನಿಲ್ಲುತ್ತದೆ. ಇಂತಹ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಮಹಿಳೆಯ ಸ್ಥಿತಿ ಇನ್ನಷ್ಟು ದಯನೀಯವಾಗುತ್ತದೆ. ಮನೆಯಲ್ಲೂ ಹೊರಗೂ ದುಡಿದು ಇಬ್ಬಗೆಯ ಶ್ರಮಪಡುವ ಸ್ತ್ರೀಯರಲ್ಲಿ ಎಷ್ಟೋ ಮಂದಿಗೆ ಆರ್ಥಿಕ ಸ್ವಾತಂತ್ರ್ಯವೂ ಇಲ್ಲ ಎಂದರೆ ಆಶ್ಚರ್ಯವಾಗುತ್ತದೆಯಲ್ಲವೇ? ಕೈ ತುಂಬ ಸಂಬಳ ಪಡೆದು ಪೂರ್ತಿ ಹಣವನ್ನು ಪತಿಯ ಕೈಗೊಪ್ಪಿಸಿ ತನ್ನ ಖರ್ಚಿಗಾಗಿ ಅವನು ನೀಡುವ ಅಲ್ಪ ಮೊತ್ತವನ್ನು ದೈನ್ಯತೆಯಿಂದ ಸ್ವೀಕರಿಸುವ ದುರ್ದೈವಿಗಳ ಸಂಖ್ಯೆಯೂ ಸಾಕಷ್ಟಿದೆ. ಕೆಲವು ಮನೆಗಳಲ್ಲಿ ಮಡದಿ ಖರ್ಚುಮಾಡುವ ಪ್ರತೀ ಪೈಸೆಗೂ ಲೆಕ್ಕ ಕೊಡಬೇಕು. ಪತಿಯ ಒಪ್ಪಿಗೆಯಿಲ್ಲದೆ ತನಗಿಷ್ಟವಾದ ಯಾವುದೇ ಸಣ್ಣ ವಸ್ತುವನ್ನು ಕೊಳ್ಳಲು ಸ್ವಾತಂತ್ರ್ಯವಿಲ್ಲದ ಉದ್ಯೋಗಸ್ಥ ಮಹಿಳೆಯರ ಸಂಖ್ಯೆ ಸಾಕಷ್ಟು ದೊಡ್ಡದಿದೆ. ಪುರುಷರು ತಮ್ಮ ಸಂಪಾದನೆಯ ಹಣವನ್ನು ದುಂದು ವೆಚ್ಚ ಮಾಡಿದರೂ ಹೆಣ್ಣಾದವಳು ಸಹಿಸಿಕೊಳ್ಳಬೇಕು. ಇದಕ್ಕೆ ಕೆಲವು ಬಾರಿ ಹೆಣ್ಣು ಚಿಕ್ಕಂದಿನಿಂದಲೇ ಬೆಳೆಸಿಕೊಂಡು ಬಂದ ಕೀಳರಿಮೆ, ದೋಷ, ದೌರ್ಬಲ್ಯಗಳೇ ಕಾರಣವಾಗಿರುವುದು ಸುಳ್ಳಲ್ಲ. ಏಕೆಂದರೆ "ನನ್ನ ಗಂಡನಿಗೆ ಒಂದು ಲೋಟ ನೀರು ಬೇಕಾದರೂ ನಾನೇ ತಂದು ಕೊಡಬೇಕು" ಎಂದು ಹೆಮ್ಮೆಯಿಂದ ಹೇಳಿಕೊಳ್ಳುವ ಮಹಿಳಾಮಣಿಯರು ಮಿದುಳನ್ನು ಮುಚ್ಚಿದ ಪರದೆಯನ್ನು ಕಿತ್ತೊಗೆದು ಯೋಚಿಸುವ ಶಕ್ತಿಯನ್ನು ಬೆಳೆಸಿಕೊಳ್ಳದಿದ್ದರೆ

ಸುಧಾರಣೆ ಹೇಗೆ ಸಾಧ್ಯ? ಅನೇಕ ಸಂದರ್ಭಗಳಲ್ಲಿ ಹೆಣ್ಣಿನ ಸಂಕಷ್ಟಗಳಿಗೆ ಅವಳ ಅಜ್ಞಾನವೇ ಕಾರಣವಾಗಿರುತ್ತದೆ.

ಇತ್ತೀಚಿಗೆ ಕೆಲವು ವರ್ಷಗಳಿಂದ ಇನ್ನೂ ಭೀಕರ ಘಟನೆಗಳನ್ನು ನಾವು ಕೇಳುತ್ತಿದ್ದೇವೆ, ಕಾಣುತ್ತಿದ್ದೇವೆ. ವರದಕ್ಷಿಣೆ ಹಣ ಕೈ ಸೇರಲಿಲ್ಲ ವೆಂದೋ ಅಥವಾ ತವರಿನಿಂದ ತಂದ ಸಂಪತ್ತು ಕಡಿಮೆಯಾಯಿತೆಂದೋ ಸೊಸೆಯನ್ನು ಅಮಾನುಷವಾಗಿ ಹಿಂಸಿಸಿ ಕೊಲೆಗೈಯುವ ಭಯಾನಕ ಕೃತ್ಯಗಳೂ ಅಲ್ಲಲ್ಲಿ ನಡೆಯುತ್ತವೆ. ಅತ್ತೆಮನೆಯ ಕಿರುಕುಳ ತಾಳಲಾರದೆ ಹೆಣ್ಣು ತಾನಾಗಿಯೇ ಆತ್ಮಹತ್ಯೆ ಮಾಡಿಕೊಳ್ಳುವ ಸಂದರ್ಭಗಳೂ ಇರುತ್ತವೆ. ಹೀಗೆ ಬದುಕನ್ನು ಕೊನೆಗೊಳಿಸುವ ಅಸಹನೀಯ ಪರಿಸ್ಥಿತಿಯನ್ನುಂಟು ಮಾಡಿದ ಕಲ್ಲೆದೆಯ ಕಟುಕರು ಕೊಲೆಗಾರರೇ ಅಲ್ಲವೇ? ಎಷ್ಟೋ ಕಡೆ ಸೊಸೆಯರನ್ನು ಸೀಮೆ ಎಣ್ಣೆ ಸುರಿದು ಸುಟ್ಟು ಕೊಂದ ಪ್ರಕರಣಗಳು ಹಣದ ಬಲದಿಂದ ಆತ್ಮಹತ್ಯೆಯೆಂದೋ, ಆಕಸ್ಮಿಕ ಸಾವು ಎಂದೋ ತೀರ್ಮಾನವಾಗುವುದಿದೆ. ಈ ರೀತಿಯ ನಾನಾ ವಿಧದ ನಿರಂತರ ಶೋಷಣೆಗೆ ಕೊನೆಯೆಂದಿಗೆ? ಹೇಗೆ? ಈ ವಿಷಯದಲ್ಲಿ ಮಾನವೀಯತೆಯುಳ್ಳ ಪ್ರತಿ ಯೊಬ್ಬರೂ ಯೋಚಿಸಬೇಕು, ಚಿಂತಿಸಬೇಕು. ಎಲ್ಲೋ ಕೆಲವು ವಿದ್ಯಾವಂತ, ಶ್ರೀಮಂತ ಸುಖೀ ಸಂಸಾರಗಳಿರಬಹುದು. ಆದರೆ ಸಂಕಷ್ಟಗಳಲ್ಲಿ ನರಳಿ ನಲುಗುತ್ತಿರುವ ಸಾವಿರಾರು ಸೋದರಿಯರ ಬದುಕಿನ ಬಗ್ಗೆ ಯೋಚಿಸುವಾಗ ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯೊಂದಿಗೆ ಸ್ತ್ರೀಯರ ಅಜ್ಞಾನ, ದೌರ್ಬಲ್ಯ, ಕೀಳರಿಮೆಗಳೂ ಈ ಶೋಷಣೆಗೆ ಕಾರಣಗಳಾಗಿವೆ ಎಂಬ ಮಾತು ನಿತ್ಯಸತ್ಯವಾಗಿ ಕಂಡುಬರುತ್ತದೆ.

ಆದ್ದರಿಂದ ನಮ್ಮ ಮಹಿಳೆಯರು ಜಾಗೃತರಾಗಿ, ವಿಚಾರವಂತರಾಗಿ, ವಿವೇಕಿಗಳಾಗಿ ಬಾಳಲು ಕಲಿಯಬೇಕು. ಸ್ತ್ರೀಗೆ ಸ್ತ್ರೀಯೇ ಶತ್ರು ಎನ್ನುವ ಮಾತು ಹುಸಿಯಾಗುವಂತೆ ಪ್ರಯತ್ನಿಸಬೇಕು.

ಕೆಲವು ಉದಾಹರಣೆಗಳೆಂದರೆ ಯಾವುದಾದರೊಂದು ಕಾರಣ ದಿಂದಾಗಿ ಅವಿವಾಹಿತೆಯಾಗಿ ಉಳಿಯ ಬಯಸುವ ಹೆಣ್ಣನ್ನು ತಾತ್ಸಾರ

ದಿಂದ ನೋಡಿ ಅವಮಾನ ಪಡಿಸುವ ದುಷ್ಟ ಪ್ರವೃತ್ತಿಯನ್ನು ನಿಲ್ಲಿಸುವುದು, ಅದೇ ರೀತಿ ದುಷ್ಟ ಪತಿಯಿಂದ ದೂರವಾಗಿ ಸ್ವತಂತ್ರವಾಗಿ ಬಾಳುವ ಸ್ತ್ರೀಯನ್ನು ವ್ಯಂಗ್ಯ ಮಾತುಗಳಿಂದ ಹಿಂಸಿಸುವ ದುರ್ಬದ್ಧಿಯನ್ನು ದೂರಮಾಡಿಕೊಳ್ಳುವುದು, ಅಷ್ಟೇ ಅಲ್ಲ, ಮದುವೆಯ ಸಂದರ್ಭಗಳಲ್ಲಿ ಹೆಣ್ಣಿನ ಕಡೆಯವರನ್ನು ಶೋಷಿಸುವುದರಲ್ಲಿ ಅತ್ತೆಯ ಪಾತ್ರವೇ ಪ್ರಧಾನವಾಗಿರುವುದರಿಂದ ಇಂತಹ ಮಹಿಳಾ ಮಣಿಗಳು ಸಂಪೂರ್ಣ ಎಚ್ಚೆತ್ತು ಮಾನವೀಯತೆಯಿಂದ ವರ್ತಿಸುವುದು, ಇತ್ಯಾದಿ. ವಿವಾಹದ ವಿಚಾರದಲ್ಲಿ ಎರಡೂ ಕಡೆಯವರು ಸಮಭಾಗಿಗಳು ಎನ್ನುವುದನ್ನು ಮರೆಯಬಾರದು. ಅನೇಕ ಅರ್ಥಹೀನ, ಅನಗತ್ಯ ಆಡಂಬರದ ಆಚರಣೆಗಳನ್ನು ಕೈಬಿಟ್ಟು ನಿರಾಡಂಬದ ಸರಳ ವಿವಾಹಗಳನ್ನು ಪ್ರೋತ್ಸಾಹಿಸಬೇಕು. ಸ್ತ್ರೀಯರು ತಮ್ಮ ಜೀವನದಲ್ಲಿ ಆರ್ಥಿಕವಾಗಿಯೂ ಸ್ವಾವಲಂಬಿಗಳಾಗಲು ಪ್ರಯತ್ನಿಸಿ ಸ್ವಾಭಿಮಾನದಿಂದ, ಧೈರ್ಯದಿಂದ ಬದುಕಿನ ಸಮಸ್ಯೆಗಳನ್ನೆದಿರಿಸಿ ಗೆಲುವು ಗಳಿಸಬೇಕು. ಸಣ್ಣ ಪುಟ್ಟ ಕಾರಣಗಳಿಗೂ ಹೆಣ್ಣನ್ನು ಅವಹೇಳನ ಮಾಡುವ ಸ್ತ್ರೀಯರೇ ಮೊತ್ತ ಮೊದಲು ವಿಚಾರಶೀಲರಾಗಿ ತನ್ನಂತೆಯೇ ಪರರು ಎನ್ನುವ ಮನೋಧರ್ಮವನ್ನು ಬೆಳೆಸಿಕೊಂಡರೆ "ಅಯ್ಯೋ ಹೆಣ್ಣೇ"! ಎನ್ನುವ ಅಪಸ್ವರ ಅಡಗಿ ಹೋದೀತು.

ಓ ಸಮಾಜವೇ ಹೆಣ್ಣನ್ನು ಬದುಕಬಿಡು

—ಸಾರಾ ಅಬೂಬಕ್ಕರ್

ಜೀವ ಬದುಕಿ ಉಳಿದರೆ ತಾನೇ ಮತ್ತೆಲ್ಲ ಯೋಚನೆ ? ಮುಂದುವರಿದ ವಿಜ್ಞಾನದ ಬಳುವಳಿಯನ್ನು ಹೆಣ್ಣಿನ ಬದುಕಿಗೇ ಸಂಚಕಾರ ತರಲು ಬಳಸಿಕೊಳ್ಳುವ ರಾಕ್ಷಸೀ ಪ್ರವೃತ್ತಿ ಮನುಕುಲದ ರಕ್ತವನ್ನೇ ಹೆಪ್ಪುಗಟ್ಟಿಸಲಾರದೆ?

— ಸಂ.

ಅಂತರ್ರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಲಾದ ನವಂಬರ್ 24ರಂದು, ಹಲವೆಡೆಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಮತ್ತು ಶೋಷಣೆ ಕುರಿತು ವಿಚಾರ ಸಂಕಿರಣಗಳು ಜರಗುತ್ತಿದ್ದ ಆ ದಿನದಲ್ಲಿಯೇ ಖ್ಯಾತ ಪತ್ರಿಕೆಯೊಂದರಲ್ಲಿ ಎರಡು ವರದಿಗಳು ಪ್ರಕಟವಾಗಿದ್ದುವು. ತಮ್ಮ ಗಂಡಂದಿರು ಹೆಂಡತಿಯರ ಮೇಲೆ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿ ಕೊಲೆ ಮಾಡಿದ ಸುದ್ದಿಗಳು ಅವು. ಕಾನೂನು ಮತ್ತು ಶಿಸ್ತು ಪಾಲಿಸುವ ಆರಕ್ಷಕನೇ ಇವರಲ್ಲಿ ಒಬ್ಬಳ ಗಂಡನಾಗಿದ್ದನು. ಅಂದ ಬಳಿಕ ಈ ದೇಶದಲ್ಲಿ ಮಹಿಳೆಯರ ಮೇಲೆ ಎಸಗಲ್ಪಡುವ ದೌರ್ಜನ್ಯಕ್ಕೆ ಸದ್ಯದಲ್ಲಂತೂ ಕೊನೆಯಿದೆಯೆಂದು ನನಗನ್ನಿಸುವುದಿಲ್ಲ.

ಮಹಿಳೆಯರ ಮೇಲಿನ ದೌರ್ಜನ್ಯ ಬಿಡಿ; ಹೆಣ್ಣಿನ ಹುಟ್ಟನ್ನೇ ಅಡಗಿಸುವಂತಹ ಒಂದು ತಂತ್ರ ಕೂಡಾ ಆರಂಭವಾಗಿದೆಯಲ್ಲ? ಮಹಿಳೆಯರ ಅಥವಾ ಹೆಣ್ಣು ಮಗುವಿನ ಬೆನ್ನು ಹತ್ತಿದ ಈ ಬೇತಾಳವನ್ನು ಯಾವ ರೀತಿ ನಿವಾರಿಸೋಣ?

ಮನುಕುಲದ ಉದ್ಧಾರಕ್ಕಾಗಿ ಅವರ ಪ್ರಯೋಜನಕ್ಕಾಗಿ ವಿಜ್ಞಾನಿಗಳು ಹೊಸ ಹೊಸ ಸಂಶೋಧನೆಗಳನ್ನು ಮಾಡುತ್ತಲೇ ಇರುತ್ತಾರೆ. ಎಷ್ಟೋ ಜನ ವಿಜ್ಞಾನಿಗಳು ಮಾನವನ ಪ್ರಗತಿಗಾಗಿ ತಮ್ಮ ಪೂರ್ತಿ ಬದುಕನ್ನು

ಪ್ರಯೋಗಾಲಯಗಳಲ್ಲಿಯೇ ಸವೆಸಿದ್ದಾರೆ. ಅವರು ಅರ್ಧದಲ್ಲಿ ಬಿಟ್ಟು ಹೋದುದನ್ನು ಇತರರು ಪೂರ್ತಿ ಮಾಡಿಯೂ ಇದ್ದಾರೆ. ಆದರೆ ವಿಜ್ಞಾನಿಗಳ ಈ ತ್ಯಾಗ ಮತ್ತು ಶ್ರಮದ ಫಲವನ್ನು ಕೆಲವು ಮೂರ್ಖ ಮಾನವರು ಬಳಸಿಕೊಂಡ ಮತ್ತು ಈಗಲೂ ಬಳಸಿಕೊಳ್ಳುತ್ತಿರುವ ರೀತಿಯನ್ನು ಕಂಡು ನಾವು ನಾಚಿ ತಲೆ ತಗ್ಗಿಸಬೇಕಾಗುತ್ತದೆ. ಅಣು ವಿಕಿರಣದ ಸಂಶೋಧನೆಯನ್ನು ಮನುಕುಲದ ಪ್ರಯೋಜನಕ್ಕಾಗಿ ಬಳಸಿಕೊಳ್ಳುವ ಮೊದಲೇ ಅಣ್ವಸ್ತ್ರಗಳ ಸಂಶೋಧನೆಯಾಗಿ ಮನುಕುಲದ ವಿನಾಶದತ್ತ ಮೊದಲ ಹೆಜ್ಜೆಯಿಟ್ಟ ಮಾನವ ಹಾಗೆಯೇ ಭ್ರೂಣ ಪರೀಕ್ಷೆ (ಅಮಿನೊ ಸೆಂಥಿಸಿಸ್) ಎಂಬ ಸಂಶೋಧನೆಯನ್ನು ವಿಜ್ಞಾನಿಗಳು ಕಂಡು ಹಿಡಿದರು; ತಾಯಿಯ ಹೊಟ್ಟೆಯಲ್ಲಿರುವ ಭ್ರೂಣದ ಬೆಳವಣಿಗೆ ಯಾವ ರೀತಿಯಾಗುತ್ತಿದೆ, ಮತ್ತು ಅದಕ್ಕೆ ಏನಾದರೂ ಚಿಕಿತ್ಸೆಯ ಅಗತ್ಯವಿದೆಯೇ ಮತ್ತು ಸಕಾಲದಲ್ಲಿ ಆದಕ್ಕೆ ಯಾವ ರೀತಿ ಚಿಕಿತ್ಸೆ ನೀಡಬಹುದು ಎಂಬುದನ್ನು ಪತ್ತೆಹಚ್ಚಲು ಈ ಭ್ರೂಣ ಪರೀಕ್ಷೆ ನೆರವಾಗಬಹುದು ಎಂಬುದು ವಿಜ್ಞಾನಿಗಳ ನಂಬಿಕೆ. ಆದರೆ ಈಗ ಆಗುತ್ತಿರುವುದೇನು? ಭ್ರೂಣ ಪರೀಕ್ಷೆಯಿಂದ ಹೊಟ್ಟೆಯಲ್ಲಿ ಆಗ ತಾನೇ ಜೀವ ತಳೆಯುತ್ತಿರುವ ಪುಟ್ಟ ಕಂದ ಹೆಣ್ಣೊ ಗಂಡೊ ಎಂದು ತಿಳಿಯುವ ಸಾಧ್ಯತೆಯಿದೆ ಎಂದು ತಿಳಿದುಕೊಂಡರು ಮನುಷ್ಯರು. ಸರಿ. ಹೆಣ್ಣಿನ ಮೇಲೆ ಇನ್ನಷ್ಟು ದೌರ್ಜನ್ಯವೆಸಗಲು ಇದೊಂದು ಹೊಸ ಸಾಧನವಾಯಿತು. ಭ್ರೂಣ ಪರೀಕ್ಷೆಯಿಂದ ಮಗು ಹೆಣ್ಣೆಂದು ತಿಳಿದಾಕ್ಷಣ ಅದನ್ನು ಮೊಳಕೆಯಲ್ಲೇ ಕಿತ್ತೆಸೆಯುವ ಸುಲಭೋಪಾಯವನ್ನು ಕಂಡುಕೊಂಡಿತು ಈ ಪುರುಷ ಪ್ರಧಾನ ಸಮಾಜ. ಅಂದರೆ ವಿಜ್ಞಾನದ ಈ ಕೊಡುಗೆಯನ್ನು ಹೆಣ್ಣು ಮಗುವಿನ ಹುಟ್ಟಡಗಿಸಲು ಬಳಸಿಕೊಳ್ಳಲಾಗುತ್ತಿದೆ!

ಇದಕ್ಕಿಂತಲೂ ಭೀಕರವಾದ ದೌರ್ಜನ್ಯ ಕೂಡಾ ಹೆಣ್ಣಿನ ಮೇಲೆಸಗಲಾಗುತ್ತಿದೆ. ತೀರಾ ಇತ್ತೀಚೆಗೆ ಪತ್ರಿಕೆಗಳಲ್ಲಿ ಬಂದ ವಾರ್ತೆ ಕೆಲವು ಮಹಿಳೆಯರ ಗಮನವನ್ನಾದರೂ ಸೆಳೆದಿರಬಹುದೆಂದುಕೊಂಡಿದ್ದೇನೆ. ನಮ್ಮ ನೆರೆ ರಾಜ್ಯವಾದ ತಮಿಳು ನಾಡಿನ ಸೇಲಂ ಜಿಲ್ಲೆಯಲ್ಲಿ ಆಗ ತಾನೇ

ಹುಟ್ಟಿದ ಅವಳಿ ಹೆಣ್ಣು ಶಿಶುಗಳನ್ನು ಅವುಗಳ ಅಜ್ಜಿಯೋ ಅವುಗಳಿಗೆ ನಿದ್ರೆಯ ಮಾತ್ರೆಗಳನ್ನು ಕೊಟ್ಟು ಅವುಗಳ ಕೊಲೆ ಮಾಡಿದಳು. ಈ ಮಕ್ಕಳ ಹೆತ್ತವರು ಅಷ್ಟೊಂದು ಬಡವರೂ ಅಲ್ಲ ಎಂದ ಮೇಲೆ ಬಡವರ ಮನೆಯಲ್ಲಿ ಹುಟ್ಟಿದ ಹೆಣ್ಣುಮಗುವಿನ ಅವಸ್ಥೆ ಹೇಗಿರಬಹುದೆಂಬುದನ್ನು ಊಹಿಸಲೂ ಸಾಧ್ಯವಿಲ್ಲ. ಸೇಲಂ ಜಿಲ್ಲೆಯಲ್ಲಿ ಈ ಹಿಂದೆ ಕೂಡಾ ಈ ರೀತಿ ಹೆಣ್ಣು ಶಿಶುಗಳನ್ನು ಕೊಲೆ ಮಾಡಲಾಗುತ್ತಿತ್ತು. ಹುಟ್ಟಿದ ಮೊದಲ ಹೆಣ್ಣು ಮಗುವಿಗೆ ಬದುಕುಳಿಯುವ ಅವಕಾಶವಿದ್ದರೂ ಆ ಬಳಿಕ ಹುಟ್ಟಿದ ಹೆಣ್ಣು ಮಕ್ಕಳು ಬದುಕುಳಿಯುವ ಸಾಧ್ಯತೆ ಇಲ್ಲ. ಓರ್ವ ಮಹಿಳೆಯೇ ಮುಖ್ಯ ಮಂತ್ರಿಯಾಗಿದ್ದೂ ಕೂಡಾ ಆ ರಾಜ್ಯದಲ್ಲಿ ಹೆಣ್ಣುಮಕ್ಕಳ ಮೇಲೆ ಇಂತಹ ಬರ್ಬರ ಕೃತ್ಯವನ್ನು ಎಸಗಲಾಗುತ್ತಿದೆ. ಮಹಿಳೆಗೆ ಸಮಾನತೆ ಬಿಡಿ, 'ನಮ್ಮನ್ನು ಬದುಕಲು ಬಿಡಿ' ಎಂಬ ಬ್ಯಾನರನ್ನು ಎತ್ತಿ ಹಿಡಿದು ಈಗ ನಾವು ಹೋರಾಡಬೇಕಾದಂತಹ ಒಂದು ಪರಿಸ್ಥಿತಿ ನಮಗೆದುರಾಗಿದೆ.

ಈ ರೀತಿ ಹೆಣ್ಣು ಶಿಶುಗಳ ಹತ್ಯೆ ತಮಿಳುನಾಡಿಗಷ್ಟೇ ಸೀಮಿತವಾಗಿಲ್ಲ. ಉತ್ತರ ಭಾರತದ ಹಲವೆಡೆಗಳಲ್ಲಿ ಮುಖ್ಯವಾಗಿ ರಾಜಸ್ಥಾನದ ಹಲವು ಜಿಲ್ಲೆಗಳಲ್ಲಿ ನವಜಾತ ಹೆಣ್ಣು ಶಿಶುಗಳ ಹತ್ಯೆ ನಡೆಯುತ್ತಿದೆ. ರಾಜ್ಯಸ್ಥಾನದ ಒಂದು ಹಳ್ಳಿಗೆ ಕಳೆದ ಸುಮಾರು ಐವತ್ತು ವರ್ಷಗಳಿಂದಲೂ ವರನ ದಿಬ್ಬಣ ಬಂದಿಲ್ಲ. ಆ ಊರಿನಲ್ಲಿ ವಧುವಾಗಲು ಹೆಣ್ಣು ಮಕ್ಕಳೇ ಇರಲಿಲ್ಲ! ಅಲ್ಲಿಂದ ಹೊರಡುತ್ತಿದ್ದುದು ವರನ ದಿಬ್ಬಣ ಮಾತ್ರ. ಪ್ರಕೃತಿಯೆಂದೂ ಇಂತಹ ಪಕ್ಷಪಾತ ತೋರಲಾರಳು. ಆದರೆ ಮಾನವರು ಮಾತ್ರ ಪ್ರಕೃತಿಗೇ ಮೋಸ ಮಾಡುವ ಧೂರ್ತತನ ತೋರುತ್ತಿದ್ದಾರೆ.

ರಾಜಸ್ಥಾನದ ವಿಧಾನ ಸಭಾ ಸದಸ್ಯನೋರ್ವನ ಮನೆಯಲ್ಲೇ ನವಜಾತ ಹೆಣ್ಣು ಶಿಶುವನ್ನು ಈ ರೀತಿ ಹತ್ಯೆಗೈದಾಗ ಕೆಲವು ಪತ್ರಿಕೆಗಳು ಈ ಘಟನೆಯ ಮೇಲೆ ಬೆಳಕು ಚೆಲ್ಲಿದುವು. ಇದನ್ನರಿತ ಕೆಲವು ಮಹಿಳಾ ಸಂಘಟನೆಗಳು ಈ ಅಮಾನುಷ ಕೊಲೆಯ ವಿರುದ್ಧ ಪ್ರತಿಭಟನೆ ಸೂಚಿಸಿ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕೆಂದು ಹೋರಾಡಿದರೂ ಇನ್ನೂ ಆತನ ಮೇಲೆ

ಯಾವ ರೀತಿಯ ಕಾನೂನು ಕ್ರಮವನ್ನೂ ಕೈಗೊಳ್ಳಲಾಗಿಲ್ಲ. ಹಲವಾರು ರಾಜಕಾರಣಿಗಳ ಮನೆಯೊಳಗೇ ಹಲವು ರೀತಿಯಲ್ಲಿ ಮಹಿಳೆಯರ ಶೋಷಣೆ ನಡೆಯುತ್ತಿದ್ದರೂ ಅವುಗಳನ್ನು ತಡೆಗಟ್ಟುವಲ್ಲಿ ಮತ್ತು ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳುವಲ್ಲಿ ಸರಕಾರ ಮತ್ತು ಕಾನೂನು ಪಾಲಕರು ಸೋತಿದ್ದಾರೆ.

ಇನ್ನು ವರದಕ್ಷಿಣೆ ಸಾವುಗಳ ಕುರಿತು ಹೇಳಬೇಕಾದದ್ದೇ ಇಲ್ಲ. ಬಡವ ಬಲ್ಲಿದರೆಂಬ ಭೇದವಿಲ್ಲದೆ ಎಲ್ಲರೂ ಈ ದೌರ್ಜನ್ಯಕ್ಕೆ ತುತ್ತಾಗುತ್ತಾರೆ. ಶ್ರೀಮಂತ ಮನೆತನದ ಹೆಣ್ಣು ಮಗಳೋರ್ವಳು ಲಕ್ಷಗಟ್ಟಲೆ ಹಣವನ್ನು ವರದಕ್ಷಿಣೆಯಾಗಿ ತಂದರೂ ದುರಾಸೆಯ ಗಂಡನಿಂದ ಆಕೆ ಇನ್ನಷ್ಟು ಪೀಡೆಗೊಳಗಾಗುತ್ತಾಳೆ. ಕೊನೆಗೆ ಆಕೆಯನ್ನು ನಾಗರ ಹಾವಿನಿಂದ ಕಚ್ಚಿಸಿ ಕೊಲೆ ಮಾಡುವ ಒಂದು ಪ್ರಯತ್ನವೂ ನಡೆಯಿತೆಂಬ ವರದಿಯೊಂದನ್ನು ಪತ್ರಿಕೆಯಲ್ಲಿ ಓದಿ ನನ್ನ ರಕ್ತ ಹೆಪ್ಪುಗಟ್ಟಿತ್ತು. ಆ ಹಾವಿಗೆ ಆ ಹೆಣ್ಣು ಮಗಳ ಮೇಲೆ ಕರುಣೆ ಬಂತೋ ಏನೊ, ಅಥವಾ ಮಾನವರ ಈ ಕ್ರೌರ್ಯವನ್ನು ಕಂಡೇ ಅದು ಮರಗಟ್ಟಿ ಹೋಯಿತೊ ಅಂತೂ ಅದು ಆಕೆಯನ್ನು ಕಚ್ಚಲಿಲ್ಲ! ವರದಕ್ಷಿಣೆಗಾಗಿ ನಮ್ಮ ದೇಶದಲ್ಲಿ ನಡೆದಷ್ಟು ಸ್ತ್ರೀ ಹತ್ಯೆ ಜಗತ್ತಿನ ಇನ್ನಾವ ದೇಶದಲ್ಲೂ ನಡೆದಿರಲಾರದು.

ಪುರುಷ ಪ್ರಧಾನ ಸಮಾಜದಲ್ಲಿ ಜನಿಸಿದ ಹೆಣ್ಣು, ಗಂಡಿನ ಎಲ್ಲ ದೌರ್ಜನ್ಯವನ್ನೂ ತಲೆ ತಗ್ಗಿಸಿ ಸಹಿಸಿಕೊಂಡಿದ್ದಾಳೆ. ಸತೀ ಸಹಗಮನದಿಂದ ಆರಂಭವಾಗಿ ಅದನ್ನು ದಾಟಿದಾಗ ವಿಧವೆಗೆ ತಲೆ ಬೋಳಿಸಿ ವಿಕೃತಗೊಳಿಸಿ ಕೆಂಪು ಸೀರೆಯುಡಿಸಿ ಆಕೆ ಬದುಕಿರುವಾಗಲೇ ಆಕೆಗೆ ನರಕ ದರ್ಶನ ಮಾಡಿಸಲಾಯಿತು. ಅದರ ವಿರುದ್ಧ ಹೋರಾಡಿ ಮಹಿಳೆಯರು ಒಂದು ವಿಧದಲ್ಲಿ ಜಯಗಳಿಸಿದರೆನ್ನುವಾಗ ವರದಕ್ಷಿಣೆಯ ಕಾಟ, ವಧೂದಹನಗಳೂ ಪ್ರಾರಂಭವಾಗಿ ಈಗ ಹೆಣ್ಣು ಶಿಶು ಹತ್ಯೆಗೆ, ಅದನ್ನೂ ಮೀರಿ ಹೆಣ್ಣು ಭ್ರೂಣ ಹತ್ಯೆಗೆ ಬಂದು ನಿಂತಿದೆ. ಬಾಲ್ಯ ವಿವಾಹ ಪದ್ಧತಿಯಿಂದ ಕೆಲವರು ಇನ್ನೂ ಮುಕ್ತರಾಗಿಲ್ಲ. ಸತೀ ಸಹಗಮನಕ್ಕೆ ಪುನಃ ಜೀವದಾನ ಮಾಡುವ ಒಂದು ಪ್ರಯತ್ನ ಇತ್ತೀಚೆಗೆ ನಡೆದುದನ್ನು

ಯಾರು ಮರೆತಿರಲಾರರು. ಇದರ ವಿರುದ್ಧ ಕೆಲವು ಮಹಿಳಾ ಸಂಘಟನೆಗಳ ಪ್ರಬಲ ಪ್ರತಿಭಟನೆ ಮತ್ತು ಹೋರಾಟವಿಲ್ಲದೆ ಹೋಗಿದ್ದರೆ ಈ ವರೆಗೆ ಇನ್ನೆಷ್ಟು ಹೆಣ್ಣು ಮಕ್ಕಳು ಸತೀಸಹಗಮನದ ಹೆಸರಿನಲ್ಲಿ ಅಗ್ನಿಗರ್ಪಿಸಲ್ಪಡುತ್ತಿದ್ದರೊ ಹೇಳಲು ಸಾಧ್ಯವಿಲ್ಲ. ಹೆಣ್ಣು ಸಮಾನತೆಗಾಗಿ ಹೋರಾಡಲಾರಂಭಿಸಿದೊಡನೆ ಗಂಡು ಆಕೆಯ ಮೇಲೆ ಇನ್ನಷ್ಟು ಮತ್ತಷ್ಟು ದೌರ್ಜನ್ಯವನ್ನೆಸಗಿ, ಹೆಣ್ಣು ಎಂದಿಗೂ ಪುರುಷನಿಗೆ ಸಮಾನಳಲ್ಲ; ಹಿರಿಮೆ ಎಂದಿಗೂ ತನ್ನದೇ ಎಂದು ಸಾರಲೆತ್ನಿಸುತ್ತಾನೆ. ಹೆಣ್ಣು ಒಂದು ಹೆಜ್ಜೆ ಮುಂದಿಟ್ಟೊಡನೆ ಆಕೆಯನ್ನು ಎರಡು ಹೆಜ್ಜೆ ಹಿಂದೆ ತಳ್ಳುವ ಪ್ರಯತ್ನ ನಡೆಯುತ್ತಲೇ ಇದೆ.

ಹೆಣ್ಣಿಲ್ಲದೆ ಯಾವ ಗಂಡೂ ಬದುಕಲಾರ. ಒಂಭತ್ತು ತಿಂಗಳು ತಾಯಿಯ ಹೊಟ್ಟೆಯಲ್ಲಿ ಅರ್ಥಾತ್ ಓರ್ವ ಹೆಣ್ಣಿನ ಹೊಟ್ಟೆಯಲ್ಲಿ ಮಲಗದೆ ಯಾವ ಗಂಡೂ ಭೂಮಿಗೆ ಬೀಳಲಾರದು. ತಾಯಿಯ ಎದೆ ಹಾಲು, ತಾಯಿಯ ವಾತ್ಸಲ್ಯ, ತಾಯಿಯ ಸೇವೆ ಎಲ್ಲವೂ ಗಂಡಿಗೆ ಬೇಕೇ ಬೇಕು. ಪತ್ನಿಯಾಗಿ ಆತನ ಸೇವೆ ಮಾಡಬೇಕಾದವಳು ಅವಳೇ. ಆತನಿಗೆ ಎಲ್ಲ ರೀತಿಯ ಸುಖ ಸೌಕರ್ಯವನ್ನು ನೀಡಿ ಆತನಿಗೆ ಪುತ್ರನ ಕಾಣಿಕೆ ನೀಡಬೇಕಾದವಳೂ ಅವಳೇ. ಇಷ್ಟೆಲ್ಲವನ್ನೂ ಆಕೆಯಿಂದ ಪಡೆಯುವ ಗಂಡು ಆಕೆಯನ್ನು ಗೌರವಿಸಲು ಅಭ್ಯಾಸ ಮಾಡಿಕೊಳ್ಳಲೇ ಇಲ್ಲ. ಸಮಾನತೆ, ಬಿಡಿ, ಆಕೆಯನ್ನು ಮನುಷ್ಯಳಂತೆ ಕಾಣಲು ಕೂಡಾ ಆತ ಸಿದ್ಧನಿಲ್ಲ.

ಹೆಣ್ಣಿನ ಈ ದುರವಸ್ಥೆಗೆ ಕೊಂಚಮಟ್ಟಿಗೆ ಹೆಣ್ಣೇ ಕಾರಣವೆಂಬುದು ನನ್ನ ಅಭಿಪ್ರಾಯ. ಹೆಣ್ಣು ಎಂದಿನವರೆಗೆ ಗುಲಾಮತನವನ್ನು ಒಪ್ಪಿಕೊಳ್ಳುತ್ತಾಳೊ ಅಂದಿನ ವರೆಗೆ ಹೆಣ್ಣಿಗೆ ಈ ದುರವಸ್ಥೆ ತಪ್ಪಿದ್ದಲ್ಲ. ವಿವಾಹವೊಂದೇ ಅಂತಿಮ ಗುರಿ ಎಂದ ಹೆಣ್ಣು ತಿಳಿದುಕೊಂಡಿರುವವರೆಗೆ ಗಂಡಿನದೇ ಮೇಲುಗೈಯಾಗಿರುತ್ತದೆ. ಬದುಕಿನಲ್ಲಿ ಹೆಣ್ಣಿಗೆ ಗಂಡಿನ ಅವಶ್ಯಕತೆ ಇರುವಂತೆ ಗಂಡಿಗೆ ಹೆಣ್ಣಿನ ಅವಶ್ಯಕತೆಯೂ ಇರುತ್ತದೆ. ಪ್ರಕೃತಿ ಇಬ್ಬರನ್ನೂ ಸಮಾನವಾಗಿಯೇ ಸೃಷ್ಟಿಸಿರುತ್ತಾಳೆ. ಹೀಗಿರುವಾಗ ಹೆಣ್ಣು ಮಾತ್ರ

ವೈವಾಹಿಕ ಬದುಕಿಗಾಗಿ ಕಾತರಿಸುವುದೇಕೆ? ಹೆಣ್ಣಿನ ಸಂಕಷ್ಟಗಳೂ ಈ ಕಾತರದಿಂದಾಗಿಯೇ ಹುಟ್ಟಿಕೊಳ್ಳುತ್ತವೆಯೇನೊ.

ಹೆಣ್ಣು ಸಮಾಜದ ಎಲ್ಲ ರಂಗಗಳಲ್ಲೂ ಸಮಾನತೆ ಸಾಧಿಸಿ ತೋರಿದ್ದಾಳೆ. ವೈದ್ಯಳಾಗಿ, ತಂತ್ರಜ್ಞಳಾಗಿ, ಆಡಳಿತಾಧಿಕಾರಿಯಾಗಿ, ವಿಮಾನ ಚಾಲಕಳಾಗಿಯೂ ಕೂಡಾ ಆಕೆ ಮಿಂಚಿದ್ದಾಳೆ. ಯಾವ ರೀತಿಯ ಕೀಳರಿಮೆಯೂ ಹೆಣ್ಣನ್ನು ಬಾಧಿಸಬೇಕಾದದ್ದಿಲ್ಲ. ಆಕೆ ಯಾವತ್ತೂ ಯಾರ ಮುಂದೂ ಕೈಯೊಡ್ಡದಂತೆ, ತನ್ನ ಕಾಲ ಮೇಲೆ ತಾನೇ ನಿಂತು ಕೊಳ್ಳುವಂತಹ ಸಾಮರ್ಥ್ಯ ಆಕೆಗೆ ಬರುವಂತೆ ಆಕೆಯ ಹೆತ್ತವರು ನೋಡಿ ಕೊಳ್ಳಬೇಕು. ಆಕೆ ಮನುಷ್ಯಳಾಗಿ ಸ್ವಂತ ವ್ಯಕ್ತಿತ್ವವನ್ನು ರೂಪಿಸಿಕೊಂಡು ಬದುಕುವುದನ್ನು ರೂಢಿ ಮಾಡಿಕೊಳ್ಳಬೇಕು. ವೈವಾಹಿಕ ಬದುಕಿಗೆ ದ್ವಿತೀಯ ಸ್ಥಾನವಷ್ಟೆ ಮೀಸಲಾಗಿರಲಿ.

ಸಮಸ್ಯೆಯ ವರ್ತುಲದಲ್ಲಿ ಮಹಿಳೆ

—ಎ. ರಮಾ ಕಾರಂತ

ಕಾಲ ಬದಲಾದ ಹಾಗೆಲ್ಲ ಸ್ತ್ರೀಯರ ಜೀವನ ವಿಧಾನ ಬದಲಾಗಿದೆಯೆ? ಎಂತಹ ಬದಲಾವಣೆಗಳಿಂದ ಎಲ್ಲಾ ಸ್ತರದ ಮಹಿಳೆಯರ ಜೀವನ ಮನ್ನಣೆ, ನೆಮ್ಮದಿ ಪಡೆಯುವ ಸಾಧ್ಯತೆಯಿದೆ?

—ಸಂ.

ಇಂದು ಕಾಲ ಬದಲಾಗಿದೆ. ಸ್ತ್ರೀ ಸ್ವತಂತ್ರಳಾಗಿದ್ದಾಳೆ. ಅವಳೀಗ ಗಂಡಿನ ದಾಸಿಯಲ್ಲ, ಅಬಲೆಯಲ್ಲ, ಅಸಮರ್ಥಳಲ್ಲ, ಬುದ್ಧಿಹೀನಳಲ್ಲ. ಗಂಡಸು ಮಾಡಬಹುದಾದ ಎಲ್ಲಾ ಕೆಲಸಗಳನ್ನೂ ಸಮರ್ಥವಾಗಿ ನಿರ್ವಹಿಸ ಬಲ್ಲೆ, ಅವರಿಗಿಂತ ಅಚ್ಚುಕಟ್ಟಾಗಿ, ಪ್ರಾಮಾಣಿಕವಾಗಿ, ಶ್ರದ್ಧೆಯಿಂದ ಮಾಡ ಬಲ್ಲೆ ಎಂದು ತೋರಿಸಿ ಕೊಟ್ಟಿದ್ದಾಳೆ. ವೈದ್ಯಕೀಯ, ವಿಜ್ಞಾನ, ತಂತ್ರಜ್ಞಾನ ದಿಂದ ತೊಡಗಿ ಕಲೆ, ಸಾಹಿತ್ಯ, ಸಂಗೀತ, ನಾಟಕ, ಯಕ್ಷಗಾನದವರೆಗೆ, ಎಲ್ಲಾ ರಂಗಗಳಲ್ಲಿಯೂ ಪ್ರಗತಿ ಹೊಂದಿದ್ದಾಳೆ." ಹೆಣ್ಣಿನಲ್ಲಿಯೂ ಪ್ರತಿಭೆ ಯಿದೆ, ವಿಚಾರ ಶಕ್ತಿಯಿದೆ, ಬುದ್ಧಿಶಕ್ತಿಯಿದೆ" ಎಂದು ಜಗತ್ತೇ ಅರಿಯು ವಂತೆ ಮಾಡಿದ್ದಾಳೆ. ಆದರೆ ನಿಜವಾಗಿ ಇಂದಿನ ಮಹಿಳೆ ನೆಮ್ಮದಿಯಿಂದ ಇದ್ದಾಳೆಯೇ? ಸ್ವತಂತ್ರ ವ್ಯಕ್ತಿತ್ವವನ್ನು ಬೆಳೆಸಿಕೊಂಡಿದ್ದಾಳೆಯೆ? ಸಮಾಜ, ಮನೆ, ಅವಳ ವ್ಯಕ್ತಿತ್ವವನ್ನು ಗುರುತಿಸಿದೆಯೆ? ಗೌರವಿಸಿದೆಯೇ? ಪ್ರಾಮಾಣಿಕ ವಾಗಿ ಹೇಳಬೇಕೆಂದರೆ ಇಲ್ಲ ಎಂದೇ ಉತ್ತರ ಬರುತ್ತದೆ. ನಾನು ಕೇವಲ ಉದ್ಯೋಗಸ್ಥ ಮಹಿಳೆಯ ಬಗೆಗೆ ಮಾತ್ರ ಹೇಳುತ್ತಿಲ್ಲ; ಕೂಲಿ ಮಾಡುವ ಹೆಂಗಸಿನಿಂದ ಹಿಡಿದು, ಎಲ್ಲಾ ವಯಸ್ಸಿನ, ಸ್ತರದ, ಮಗಳು, ಸೊಸೆ, ಅತ್ತೆ, ಹೆಂಡತಿ, ತಾಯಂದಿರ ವೈಯಕ್ತಿಕ ಜೀವನ ಮೊದಲಿಗಿಂತ ಉತ್ತಮ ಗೊಂಡಿದೆಯೆ? ಎಂಬುದನ್ನು ವಿವೇಚಿಸುತ್ತಿದ್ದೇನೆ.

ಹಿಂದೆ, ಒಂದು ಕಾಲವಿತ್ತು. ವೇದಗಳ ಕಾಲ .... ಗಾರ್ಗಿ, ಮೈತ್ರೇಯಿಯರಂತಹ ಮಹಿಳೆಯರಿದ್ದರು. ಪಂಡಿತರು, ರಾಜ, ಮಹಾರಾಜರೊಡನೆ ವಾದಮಾಡಿ ಗೆದ್ದ ವಿದುಷಿಯರವರು. ಪುರುಷರ ರಕ್ಷಣೆಯ ಅಗತ್ಯ ಅವರಿಗಿರಲಿಲ್ಲ. ಮದುವೆ ಅವರಿಗೆ ಕಡ್ಡಾಯವಾಗಿರಲಿಲ್ಲ. ಕುಟುಂಬ ಮಾತೃ ಪ್ರಧಾನವಾಗಿತ್ತು. ಸಮಾಜ ಮಹಿಳೆಯರನ್ನು ಗೌರವಿಸುತ್ತಿತ್ತು.

ಕಾಲ ಸರಿಯಿತು. ದುಡಿಯುವ ಗಂಡಸೇ ಮನೆಯ ಯಜಮಾನನಾದ. ಮನೆಯ, ಮಕ್ಕಳ, ಗೃಹದ, ಇತರ ಜವಾಬ್ದಾರಿಗಳೆಲ್ಲ ಗೃಹಿಣಿಯ ಹೆಗಲೇರಿದವು. ಆಗಲೂ ಹೆಣ್ಣನ್ನು "ಗೃಹಿಣೀ ಗೃಹ ಮುಚ್ಯತೆ" ಎಂದು ಪೂಜ್ಯತೆಯಿಂದ ನೋಡಿತು ಸಮಾಜ. "ಯತ್ರನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾ" ಎಂದರು ವಿದ್ವಾಂಸರು. ಈಗಲೂ ಉಪನಯನ ಸಂಸ್ಕಾರದಲ್ಲಿ ಪುರೋಹಿತರು, 'ಮಾತೃ ದೇವೋಭವ' ಮೊದಲು ಅಮ್ಮನಿಗೆ ನಮಸ್ಕಾರ ಮಾಡು ಎಂದು ಹೇಳುವಾಗ ಹತ್ತಿರ ಕುಳಿತ ಅಹಂಕಾರಿ ಗಂಡನ ಹೊಟ್ಟೆಯಲ್ಲಿ ಕಸಿವಿಸಿಯಾಗುತ್ತಿರಬೇಕು.

ಕ್ರಮೇಣ ಪರರಾಜರ ಧಾಳಿ, ಸ್ತ್ರೀಯರ ಮೇಲಿನ ಅತ್ಯಾಚಾರ, ಇವುಗಳಿಂದಾಗಿ ಸ್ತ್ರೀಯರಿಗೆ ಪುರುಷರ ರಕ್ಷಣೆ ಅನಿವಾರ್ಯವಾಯಿತು. ಎಂದು ನಮ್ಮ ದೇಶದಲ್ಲಿ, ಸ್ತ್ರೀ ಭೋಗದ ವಸ್ತು ಎಂದು ಪುರುಷರು ತಿಳಿದರೋ, ಹೆಂಡತಿಯಿರುವುದು ತನ್ನ ಸೇವೆಗಾಗಿ, ಎಂದು ಗಂಡಸು, 'ಪತಿವ್ರತೆಯ ಧರ್ಮ ಇದು,' ಎಂದು ಸಮಾಜ ಹೆಣ್ಣಿನ ಮೇಲೆ ಕಟ್ಟಳೆಯ ಕಟ್ಟನ್ನು ಹೇರಲು ತೊಡಗಿತೋ, "ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ," ಎಂದು ಮನುವೇ ಬರೆದನೋ, ಗಂಡು ಎಷ್ಟು ಹೆಣ್ಣುಗಳನ್ನು ಬೇಕಾದರೂ ಆಳಬಹುದು; ಹೆಣ್ಣು ಮಾತ್ರ ಪತಿಗೆ ವಿಧೇಯಳಾಗಿ, ಅವನು ಹೇಳಿದಂತೆ ಕೇಳಿಕೊಂಡು ಬಿದ್ದಿರಬೇಕು ಎಂದು ಹೆಣ್ಣೇ ಹೇಳಲಾರಂಭಿಸಿದಳೋ, ಯಾವ ಹೆಣ್ಣು, ಸ್ವತಃ ತನ್ನ ಮಕ್ಕಳಲ್ಲೇ ಮಗನಲ್ಲಿ ಸ್ವಚ್ಛಂದ ಪ್ರವೃತ್ತಿ, ಮಗಳಲ್ಲಿ ದಾಸ್ಯ ಮನೋಭಾವ, ಕೀಳರಿಮೆಯನ್ನು ನೆಟ್ಟು, ನೀರೆರೆದು ಬೆಳೆಸಿದಳೋ, ಅಂದೇ ಅವಳ ಅವನತಿಯ ಆರಂಭವಾಯಿತು.

19ನೆಯ ಶತಮಾನದ ಅಂತ್ಯದಲ್ಲಿ ರಾಜಾರಾಮ ಮೋಹನರಾಯ್, ಬೆಂಟಿಂಕ್ ಮೊದಲಾದ ಉದಾರವಾದಿಗಳೂ, ಸಮಾಜ ಸುಧಾರಕರೂ ಮಹಿಳಾ ವಿಮೋಚನೆಗಾಗಿ ಶ್ರಮಿಸಿದರು. ಬಾಲ್ಯವಿವಾಹ ರದ್ದತಿ, ವಿಧವಾ ವಿವಾಹ, ವರದಕ್ಷಿಣೆ ವಿರೋಧ ಇವುಗಳನ್ನು ಕಾನೂನಿನ ಕಟ್ಟಿಗೊಳಪಡು ವಂತೆ ಮಾಡಿದರು. ಕೆಲಮಂದಿ ಮಹಿಳೆಯರೂ ಜಾಗೃತರಾಗಿ, ಅನೇಕ ಸಂಘ ಸಂಸ್ಥೆಗಳ ಮೂಲಕ ಆಶ್ರಮಗಳ ಮೂಲಕ ಸ್ವೋದ್ಯೋಗ ತರಬೇತಿ, ಶಿಕ್ಷಣ, ಇವುಗಳಿಂದ ಮಹಿಳೆಯರಲ್ಲಿ ಆತ್ಮವಿಶ್ವಾಸ ಬೆಳೆಯುವಂತೆ ಪ್ರೋತ್ಸಾಹಿಸಿದರು.

ಇಂದು ತಂದೆ ತಾಯಂದಿರು, ಗಂಡು ಮಕ್ಕಳಷ್ಟೇ ಹೆಣ್ಣಿಗೂ ಶಿಕ್ಷಣ ಕೊಡಿಸುತ್ತಿದ್ದಾರೆ. ಅಪಾರ ವರದಕ್ಷಿಣೆಯ ದಾಹದ ವರಮಹಾಶಯರ ಅಪ್ಪ ಅಮ್ಮಂದಿರು, ಬಯಸುವ ಅದ್ದೂರಿಯ ಮದುವೆಯ ಖರ್ಚಿನ ಭಾರ ಸ್ವಲ್ಪವಾದರೂ ಕಡಿಮೆಯಾದೀತೆಂದು ತಮ್ಮ ಹೆಣ್ಣು ಮಕ್ಕಳನ್ನು ಉದ್ಯೋಗಕ್ಕೆ ಕಳಿಸುತ್ತಿದ್ದಾರೆ. ವರ್ಷ ಕಳೆದಂತೆ, ದಿನದಿನಕ್ಕೂ ಅಗತ್ಯ ವಸ್ತುಗಳ ಬೆಲೆಯೇರುತ್ತಾ ಹೋಗಿ, ಒಬ್ಬನ ಸಂಬಳದಲ್ಲಿ ಮನೆ ನಡೆಸುವುದು ದುಸ್ತರವಾದಾಗ, ಅವಿಭಕ್ತ ಕುಟುಂಬಗಳು ಒಡೆದು, ಉದ್ಯೋಗವನ್ನರಸಿ, ನಗರ ಪ್ರದೇಶಗಳಿಗೆ ಹೋಗಬೇಕಾದಾಗ, ಈಗಿನ ಯುವಕರೂ ಉದ್ಯೋಗದಲ್ಲಿರುವ ಹುಡುಗಿಯರನ್ನೇ ಅಪೇಕ್ಷಿಸುತ್ತಾರೆ. ಇಂದಿನ ಪರಿಸ್ಥಿತಿ ಹೇಗಿದೆಯೆಂದರೆ, ಕೇವಲ ಸಮಾನತೆಯ ಹುಚ್ಚು ಹಂಬಲದ ಪೂರೈಕೆಗಾಗಿ ಉದ್ಯೋಗ ಅಲ್ಲ; ಮಧ್ಯಮ ವರ್ಗದವರ ಬದುಕಿನ ಅನಿವಾರ್ಯ ಅಂಗವಾಗಿಯೂ ಮಹಿಳೆಗೆ ಉದ್ಯೋಗ ಬೇಕಾಗಿದೆ.

ಸಹಜವಾಗಿ ಪ್ರಕೃತಿ, ಗಂಡು ಹೆಣ್ಣಿನ ದೈಹಿಕ ರಚನೆಯಲ್ಲಿಯೇ ವ್ಯತ್ಯಾಸವನ್ನು ಕಲ್ಪಿಸಿದೆ. ಮಕ್ಕಳನ್ನು ಹೊತ್ತು, ಹೆತ್ತು, ಪಾಲನೆ, ಪೋಷಣೆ ಮಾಡುವ ಅವಳ ದೇಹ, ಪುರುಷನ ದೇಹಕ್ಕಿಂತ ದುರ್ಬಲವಾಗಿದೆ. ಆದರೆ ಅದಕ್ಕಾಗಿ ಅವಳನ್ನು ಕೀಳಾಗಿ ಕಾಣಬೇಕಾಗಿಲ್ಲ; ಬೌದ್ಧಿಕವಾಗಿ ಅವಳು ಅಬಲೆಯಲ್ಲ, ದುರ್ಬಲಳಲ್ಲ, ಅಲ್ಲದೆ ಅವಳಿಗೆ ಅವಳದೇ ಆದ ಹೊಣೆಗಾರಿಕೆಯಿದೆ. ಅವರಿಂದ ಅವಳು ತಪ್ಪಿಸಿಕೊಳ್ಳುವಂತಿಲ್ಲ. ಇಂದವಳು

ಕೆಲಸಕ್ಕೆ ಹೋಗಬೇಕಾದರೂ, ಮನೆಗೆಲಸವನ್ನು ಆದಷ್ಟು ಪೂರೈಸಿಯೇ ಹೋಗಬೇಕಾಗುತ್ತದೆ. ಇಂದಿನ ಸುಧಾರಣಾ ಮನೋಭಾವದ ಎಷ್ಟೋ ಯುವಕರು ಆದಷ್ಟು ಸಹಕರಿಸಿ ಹೆಂಡತಿಗೆ ಸಹಾಯ ಮಾಡುತ್ತರಾದರೂ, ಕೆಲವರು ನಾನು ಗಂಡಸು, ಇದು ನಾನು ಮಾಡುವ ಕೆಲಸ ಅಲ್ಲ, ಇದು ಹೆಣ್ಣಿನ ಜವಾಬ್ದಾರಿ ಎನ್ನುವ ಮನೋಭಾವದವರೂ ಇದ್ದಾರೆ. ಸತಿ ಪತಿಯರಲ್ಲಿ ಎಷ್ಟೋ ಭಿನ್ನಾಭಿಪ್ರಾಯ ಬರುತ್ತದೆ. ಆಗ ಹೆಂಡತಿ ಉತ್ತರ ಕೊಟ್ಟರೆ, ದುಡಿಯುತ್ತೇನೆ ಎನ್ನುವ ಅಹಂಕಾರ ಅವಳಿಗೆ ಎಂಬ ಟೀಕೆ, ಜೊತೆಗೆ ಮಕ್ಕಳ ಸಮಸ್ಯೆ. ಮನೆಯಲ್ಲಿ ಹಿರಿಯರಿಲ್ಲದಿದ್ದರೆ ಅವರನ್ನು ಕೆಲಸದವರ ವಶದಲ್ಲಿ ಬಿಡಬೇಕು, ಇಲ್ಲವೆ ಬೇಬಿ ಸಿಟ್ಟಿಂಗ್ ಕೇರ್‌ಗಳಲ್ಲಿ ಬಿಡಬೇಕು. ಪ್ರೀತಿಯ ವಾತಾವರಣದಲ್ಲಿ ಬೆಳೆಯದ ಮಕ್ಕಳು ಮುಂದೆ ನಿರಂಕುಶ ಪ್ರವೃತ್ತಿಯವರಾದರೆ, ಪುಂಡರಾದರೆ, ಸಮಾಜಘಾತಕರಾದರೆ ಆಶ್ಚರ್ಯ ಪಡಬೇಕಾಗಿಲ್ಲ.

ಮನೆಯಲ್ಲಿ ಹಿರಿಯರಿದ್ದರೆ ಉದ್ಯೋಗಸ್ಥ ಮಹಿಳೆಯ ಜವಾಬ್ದಾರಿ ಎಷ್ಟೋ ಕಡಿಮೆಯಾಗುತ್ತದೆ. ಆದರೆ ಹಿರಿಯರಿಗೂ ಅವರದೇ ಆದ ಸಮಸ್ಯೆಗಳಿಲ್ಲವೆ? ಸಣ್ಣ ವಯಸ್ಸಿನಲ್ಲೇ ಮದುವೆಯಾಗಿ ಎಂಟು ಹತ್ತು ಮಕ್ಕಳನ್ನು ಹೆತ್ತು ಪಾಲನೆ, ಪೋಷಣೆ ಮಾಡಿ, ಅವರ ಮದುವೆ, ಮುಂಜಿ, ಪುನಃ ಹೆಮ್ಮಕ್ಕಳ ಬಾಣಂತಿತನ ಮುಗಿಸಿ, ಮಗ ಉದ್ಯೋಗಸ್ಥ ಹುಡುಗಿಯನ್ನು ಮದುವೆಯಾದರೆ, ಮನೆಗೆಲಸದ ಜೊತೆಗೆ ಅವನ ಮಗುವನ್ನು ನೋಡಿಕೊಳ್ಳುವ ಹೊಣೆ. ಹೀಗಿರುವಾಗ ಅವಳಿಗೆ ಇಳಿವಯಸ್ಸಿನಲ್ಲಿಯೂ ವಿಶ್ರಾಂತಿ ಬೇಡವೆ? ಅವಳಿಗೂ ಹವ್ಯಾಸಗಳೆಂಬುದಿರುವುದಿಲ್ಲವೆ? ಎಲ್ಲ ಅತ್ತೆಯಂದಿರೂ ವರದಕ್ಷಿಣೆಗಾಗಿ ಎಣ್ಣೆ ಸುರಿದು ಬೆಂಕಿ ಹಚ್ಚುವ ರಾಕ್ಷಸಿಯರಲ್ಲ. ಅತ್ತೆಯ ಬಗೆಗೆ ಗೌರವ ತೋರದ ಸೊಸೆಯಂದಿರೂ ಇದ್ದಾರೆ. ಉದ್ಯೋಗವಿಲ್ಲದ ಹುಡುಗಿ ಸೊಸೆಯಾಗಿ ಬಂದರೆ ಮತ್ತೊಂದು ವಿಧ. ಕೈಹಿಡಿದ ಗಂಡನೇ ಸರ್ವಾಧಿಕಾರಿಯಂತೆ ವರ್ತಿಸುತ್ತಾನೆ. ನಿನಗೇನು ಕೆಲಸ ಮನೆಯಲ್ಲಿ ಕುಳಿತುಕೊಂಡು ತಿನ್ನುವವಳಿಗೆ? ನಿನಗೇನು ಗೊತ್ತು ಅಡಿಗೆ ಮನೆಯಲ್ಲಿರುವವಳಿಗೆ? ಎಂದು ತಿರಸ್ಕಾರದಿಂದ ಅವಳನ್ನು ಚುಚ್ಚುತ್ತಾರೆ. ತನ್ನಲಿಲ್ಲದ

ಪ್ರತಿಭೆ ಅವಳಲ್ಲಿದ್ದರೆ ಮತ್ಸರಿಸುವ ಗಂಡಂದಿರೂ ಇದ್ದಾರೆ. ಇದನ್ನೆಲ್ಲ ನೋಡಿದರೆ ನಮ್ಮ ಸ್ತ್ರೀ ಸಮುದಾಯ ಯಾವ ಹಾದಿಯಲ್ಲಿ ಮುನ್ನಡೆದರೆ ಅವಳಿಗೆ ನೆಮ್ಮದಿ ದೊರಕೀತು? ಅವಳ ಪ್ರತಿಭೆಗೆ ಮನ್ನಣೆ ದೊರಕೀತು? ಅವಳ ಹವ್ಯಾಸಕ್ಕೆ ಅವಕಾಶ ಸಿಕ್ಕೀತು? ಎಂದು ಯೋಚಿಸುವಂತಾಗುತ್ತದೆ.

ಮಹಿಳೆಗೆ ಅವಳ ಇಚ್ಛೆಯಿರುವಷ್ಟು ಶಿಕ್ಷಣ ಕೊಡಬೇಕು. ಕೊನೇ ಪಕ್ಷ ಪದವಿ ಶಿಕ್ಷಣದವರೆಗಾದರೂ ಕಲಿಸಬೇಕು. ವೃತ್ತಿಶಿಕ್ಷಣಕ್ಕೂ ಪ್ರಾಮುಖ್ಯತೆ ಕೊಡಬೇಕು. ಶಿಕ್ಷಣ ಪಡೆದವರೆಲ್ಲರೂ ನೌಕರಿ ಮಾಡುವ ಅಭಿಲಾಷೆಯಿಟ್ಟುಕೊಳ್ಳುವುದು ಅಗತ್ಯವಿಲ್ಲ. ತೀರಾ ಬಡಕುಟುಂಬದಲ್ಲಿ ಹುಟ್ಟಿದವಳಾದರೇ ಪತಿಯ ಮನೆಯಲ್ಲಿಯೂ ಆರ್ಥಿಕ ಮುಗ್ಗಟ್ಟಿದ್ದರೆ ಮಾತ್ರ, ಅವಳು ನೌಕರಿಗೆ ಹೋಗಲಿ. ಇಲ್ಲವಾದರೆ ಮನೆಯಲ್ಲಿಯೇ ಬಿಡುವಿದ್ದಾಗ, ಏನಾದರೂ ಗೃಹ ಕೈಗಾರಿಕೆ (ಕಸೂತಿ, ಪೇಂಟಿಂಗ್, ಬುಕ್ ಬೈಂಡಿಂಗ್, ಹೋಲಿಗೆ) ಮಾಡಿ ಹಣ ಗಳಿಸಲಿ. ಇವರಿಂದ ಎಷ್ಟೋ ಜನ ನಿರುದ್ಯೋಗಿಗಳಿಗೆ ಜೀವನಕ್ಕೆ ದಾರಿಯಾದೀತು. ಮುಖ್ಯವಾಗಿ ಮಹಿಳೆ ಅತಿ ಆಡಂಬರದ ಬದುಕನ್ನು ಬಯಸದೆ ಹಾಸಿಗೆಯಿದ್ದಷ್ಟು ಕಾಲು ಚಾಚಲು ಕಲಿಯಬೇಕು. ಅತ್ತೆ ಮಾವಂದಿರ ಅಕ್ಕರೆಯ ಸೊಸೆಯಾಗಿ, ಪತಿಯ ಪ್ರೀತಿಯ ಮಡದಿಯಾಗಿ, ವಾತ್ಸಲ್ಯಮಯಿ ತಾಯಿಯಾಗಿರಬೇಕು. ಅವಳ ಹವ್ಯಾಸಕ್ಕೆ, ಅಭಿರುಚಿಗೆ, ಮನೆಯವರು ಪ್ರೋತ್ಸಾಹ ಕೊಡಬೇಕು. ಪತಿ ಪತ್ನಿಯರಲ್ಲಿ ಪರಸ್ಪರ ಸಹಕಾರ ಮನೋಭಾವ ಬೇಕು. ಮಹಿಳೆ ಕೇವಲ ನಾಲ್ಕು ಗೋಡೆಯ ಒಳಗೆ ಬಂಧಿಯಾಗಿರದೆ, ಸಮಾಜಕ್ಕೆ, ಹೊರಜಗತ್ತಿಗೆ, ಸ್ಪಂದಿಸುವ ವಿಶಾಲ ಗುಣ ಹೊಂದಿರಬೇಕು. ಒಬ್ಬ ಪುರುಷನ ಯಶಸ್ಸಿನ ಹಿಂದೆ ಒಬ್ಬ ಸ್ತ್ರೀಯ ಕೈಯಿದೆ ಎಂಬಂತೆ, ಒಬ್ಬ ಮಹಿಳೆಯಲ್ಲಿರುವ ಪ್ರತಿಭೆ ಹೊರಬರಬೇಕಾದರೂ, ಸಮಾಜದ, ಪರಿಸರದ, ಮನೆಯವರ ಪ್ರೋತ್ಸಾಹ ಅಗತ್ಯ. ಇದನ್ನು ಎಲ್ಲಾ ಸ್ತ್ರೀ ಪುರುಷರು ಅರಿತಾಗ ಮಾತ್ರ, ನಮ್ಮ ಸಮಾಜದಲ್ಲಿ ಹೆಣ್ಣಿನ ಜೀವನ ಸಹನೀಯವಾದೀತು; ಅವಳಿಗೆ ನೆಮ್ಮದಿಯ ಬಾಳು ದೊರಕೀತು.

ದುಡಿಯುವ ಮಹಿಳೆ - ಒಂದು ವಿಶ್ಲೇಷಣೆ

—ಬಿ. ಎಂ. ರೋಹಿಣಿ

ಮನೆಯಲ್ಲಿ ಗೃಹಿಣಿಯಾಗಿ, ಹೊರಗೆ ನೌಕರಳಾಗಿ ದುಡಿಯುತ್ತಿರುವ ಮಹಿಳೆಯ ಕಾರ್ಯ ಕೆಲವೊಮ್ಮೆ ಇಬ್ಬಾಯಿಯ ಕತ್ತಿಯಂತೆ, ತಂತಿಯ ಮೇಲೆ ನಡೆದಂತೆ ಎನ್ನಬಹುದು. ಆತ್ಮಾಭಿಮಾನಿಯಾದ ಮಹಿಳೆ ಎದೆಗುಂದದೆ ತನ್ನ ಕರ್ತವ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಿದಾಗ ಎಲ್ಲರಿಗೂ ಅನುಕರಣೀಯಳೆನಿಸುವಳು.

—ಸಂ.

ಸೃಷ್ಟಿಯ ನಿರಂತರತೆ ಏಕೆ? ಹೇಗೆ? ಎಂಬುದನ್ನು ವೇದಾಂತಿಗಳು, ವಿಜ್ಞಾನಿಗಳು ತಮ್ಮ ತಮ್ಮ ದಿವ್ಯದೃಷ್ಟಿಗೆ ಕಂಡಂತೆ ವಿಶ್ಲೇಷಣೆ ಮಾಡಿದ್ದಾರೆ. ಅವರೆಲ್ಲರ ವಾದ ಪ್ರತಿವಾದಗಳೇನೇ ಇರಲಿ, ಗಂಡು ಹೆಣ್ಣಿನ ಸಹಯೋಗದಿಂದಲೇ ಈ ಸೃಷ್ಟಿ ಕಾರ್ಯ ಉಳಿದಿದೆ, ಬೆಳೆದಿದೆ ಎಂಬುದು ನಗ್ನ ಸತ್ಯ. ಈಗ ಇರುವ ನಾಗರಿಕ ಸ್ಥಿತಿಯನ್ನು ತಲುಪುವ ಮೊದಲು ಕೆಲವು ಹಂತಗಳನ್ನು ಮಾನವ ದಾಟಿ ಬಂದಿದ್ದಾನೆ. ಅವು ಬಹಳ ದೀರ್ಘ ಕಾಲದ ಅವಧಿಯನ್ನು ಕಳೆದಿರಬೇಕು. ಕಿರಾತ ಸ್ಥಿತಿಯ ಆರಂಭದ ಹಂತದಲ್ಲಿ ಹಣ್ಣು, ಬೀಜ, ಗಡ್ಡೆಗೆಣಸುಗಳೇ ಮುಖ್ಯ ಆಹಾರವಾಗಿದ್ದಾಗ ಅವುಗಳ ಸಂಗ್ರಹವೇ ಪ್ರಧಾನವಾಗಿತ್ತು. ಇಲ್ಲಿ ಶ್ರಮಕ್ಕೆ, ಉತ್ಪಾದನೆಗೆ ಅವಕಾಶವಿಲ್ಲದ್ದರಿಂದ ಆಗ ಸ್ತ್ರೀಗೆ ಪ್ರಾಧಾನ್ಯವಿತ್ತು. ಕಾಲ ಉರುಳಿದಂತೆ ಆಯುಧಗಳ ಸಂಶೋಧನೆಯಾಗಿ ಬೇಟೆಯಾಡುವ ಸ್ಥಿತಿಗೆ ತಲುಪಿದಾಗ ಹೆಣ್ಣು ಅನಿವಾರ್ಯವಾಗಿ ಮನೆಯೊಡತಿಯಾಗಿ ಮಕ್ಕಳನ್ನು ಹೆತ್ತು ಸಾಕುವ ಕರ್ತವ್ಯಕ್ಕೆ ಬದ್ಧಳಾದಳು. ಆದರೂ ಆ ಹಂತದಲ್ಲಿ ಮಾತೃ ಪ್ರಧಾನ ವ್ಯವಸ್ಥೆ ಇತ್ತು. ಕೃಷಿಯ ಸಂಶೋಧನೆಗೆ ಸ್ತ್ರೀಯೇ ಕಾರಣಳು ಎಂದು ಮಾನವ ಶಾಸ್ತ್ರಜ್ಞರು ಹೇಳುತ್ತಾರೆ. ಕ್ರಮೇಣ ವ್ಯವಸಾಯ ಉಪ

ಕರಣಗಳು ನವೀಕರಿಸಲ್ಪಟ್ಟು ಉತ್ಪಾದನೆ ಹೆಚ್ಚಿದಂತೆ ಈ ಕ್ಷೇತ್ರ ಪುರುಷನ ಸ್ವಾಮ್ಯಕ್ಕೊಳಗಾಯಿತು. ಇಲ್ಲಿಂದ ಮುಂದೆ ಪಿತೃ ಪ್ರಧಾನ ವ್ಯವಸ್ಥೆಯೇ ರೂಢಿಯಾಯಿತು. ಅಂದಿನಿಂದ ಈ ನಾಗರಿಕಾವಸ್ಥೆಯ ಹಂತದವರೆಗೂ ಎಲ್ಲ ಕ್ಷೇತ್ರಗಳಲ್ಲೂ ಪುರುಷರೇ ವಿಜೃಂಭಿಸಿದರು. ಅಂತಃಪುರ ಮತ್ತು ಅಡಿಗೆ ಮನೆಗಳಿಂದೀಚೆಗೆ ಹೆಣ್ಣು ಇಣಕಿಯೂ ನೋಡಲಿಲ್ಲ. ಶ್ರಮಿಸುವ ವರ್ಗ ಮತ್ತು ಸುಖಿಸುವ ವರ್ಗವೆಂಬ ವರ್ಣ ವಿಭಜನೆಯಿಂದಾಗಿ ಭಾರತದ ಸಾಮಾಜಿಕ ಜೀವನದಲ್ಲಿ ಶಾಶ್ವತವಾದ ಏರು ತಗ್ಗುಗಳಾಗಿವೆ. ಇದ ರೊಂದಿಗೇ ಹೆಣ್ಣು ಇರುವುದೇ ಗಂಡಿನ ಸೇವೆಗಾಗಿ ಎಂಬ ಧಾರ್ಮಿಕ ನಂಬಿಕೆ ಅವಳಲ್ಲಿ ಬೌದ್ಧಿಕ ಜಡತೆಯನ್ನುಂಟು ಮಾಡಿತು. ವಿಜ್ಞಾನ, ಕೈಗಾರಿಕೆ ಇತ್ಯಾದಿಗಳಲ್ಲಿ ಕ್ರಾಂತಿಯಾದಂತೆ ಮಹಿಳೆ ಒಂದೊಂದೇ ಕೋಟೆಯನ್ನು ಕೆಡವಿ ಒಂದೊಂದೇ ಕ್ಷೇತ್ರಗಳಲ್ಲಿ ಮೆಲ್ಲಮೆಲ್ಲನೆ ಪಾದಾರ್ಪಣೆ ಮಾಡ ತೊಡಗಿದಳು. ಜ್ಞಾನದೇಗುಲಗಳ ಬಾಗಿಲು ತಟ್ಟಿ ಒಳಗೆ ಪ್ರವೇಶಿಸಿದಳು. ಕಳೆದೆರಡು ಶತಮಾನಗಳಿಂದೀಚೆಗೆ ಪ್ರಪಂಚದಾದ್ಯಂತ ಮಹಿಳೆಯರು ಪುರುಷರ ಸ್ವಾಮ್ಯದಲ್ಲಿದ್ದ ಎಲ್ಲಾ ಕ್ಷೇತ್ರಗಳಲ್ಲೂ ತಮ್ಮ ಅಸ್ತಿತ್ವವನ್ನು ಸ್ವರವೆತ್ತಿ ಘೋಷಿಸಿದ್ದಾರೆ. ಆದರೆ ಅನೇಕ ಶತಮಾನಗಳಿಂದ ಮೂಕವಾಗಿದ್ದ ನಾಲಿಗೆ ಮೊದಲು ಮಾತು ಕಲಿತಾಗ ತೊದಲಿಕೆ ಸಹಜ ತಾನೇ? ರೂಢಿ ಯಿಲ್ಲದ ಸಮಾಜದ ಕಿವಿಗಳಿಗೆ ಇದು ಕರ್ಕಶವಾಗಿ ಕೇಳಿಸಿದ್ದರೆ ತಪ್ಪಿಲ್ಲ. ಆದರೆ ಇಂದು ಹಾಗಿಲ್ಲ. ಯಾರು ಕಾಲು ಎಳೆದರೂ ಮುಗ್ಗರಿಸಿ ಬೀಳ ದಂತಹ ಅನುಕೂಲ, ಅವಕಾಶಗಳು ಇವೆ. ಅವುಗಳನ್ನು ಸಮರ್ಥವಾಗಿ ಉಪಯೋಗಿಸಿಕೊಳ್ಳುವ ವಿವೇಕವಷ್ಟೇ ಮಹಿಳೆಗೆ ಅಗತ್ಯವಿದೆ.

ಸಮಾನತೆ ಮತ್ತು ಸ್ವಾತಂತ್ರ್ಯಗಳನ್ನು ಒಪ್ಪುವುದು ಪುರುಷರಿಗಿಂತ ಸ್ತ್ರೀಯರಿಗೇ ಅರಗಿಸಿಕೊಳ್ಳಲಾಗದ ತತ್ವವಾಗಿದೆ. ನಮ್ಮ ಸಮಾಜದ ಕೆಳವರ್ಗ, ಮಧ್ಯಮವರ್ಗ ಮತ್ತು ಮೇಲ್ವರ್ಗದ ಮಹಿಳೆಯರಲ್ಲಿ ದುಡಿವ ಮಹಿಳೆಯರನ್ನೇ ಗಮನದಲ್ಲಿಟ್ಟುಕೊಂಡು ವಿಶ್ಲೇಷಿಸಿದರೆ ಕೆಲವು ಸೂಕ್ಷ್ಮ ಸತ್ಯಗಳು ಗೋಚರವಾಗುತ್ತವೆ. ತೀರಾ ಕೆಳವರ್ಗದಲ್ಲಿ ಹೆಣ್ಣು ಗಂಡಿನಷ್ಟೇ ಶ್ರಮಜೀವಿ. ಆದುದರಿಂದಲೇ ಹಿಂದೆ ಕನ್ಯಾಶುಲ್ಕವನ್ನು ಕೊಡುವ ಕ್ರಮ

ವಿತ್ತು. ದುಡಿಯುವ ಒಂದು ವ್ಯಕ್ತಿ ತನ್ನ ಕುಟುಂಬಕ್ಕೆ ಸೇರಿದ ಸಲುವಾಗಿ ಗಂಡು ಸ್ವಲ್ಪ ಮೊತ್ತವನ್ನು ಹೆಣ್ಣಿನ ತಂದೆ ತಾಯಿಗಳಿಗೆ ಕೊಡಬೇಕಿತ್ತು. ಈಗ ಇದು ವ್ಯತಿರಿಕ್ತವಾಗಿದೆ. ಮೇಲ್ವರ್ಗದವರಲ್ಲಿ ಈ ಕ್ರಮವಿಲ್ಲದ್ದರಿಂದ ಎಲ್ಲಕ್ಕೂ ಅವರನ್ನೇ ಆದರ್ಶವೆಂದು ಭಾವಿಸಿದ್ದರಿಂದ ಈ ಸಂಪ್ರದಾಯ ನಿಂತಿರಬಹುದೋ ಏನೋ? ಕೆಳವರ್ಗದ ಮಹಿಳೆಗೆ ದುಡಿಮೆ ಅನಿವಾರ್ಯ, ಅನ್ನದ ಪ್ರಶ್ನೆ ಮುಖ್ಯ. ಶ್ರಮ ಸಮಾನವಾದರೂ ಗಂಡಾಳಿಗೆ ಹೆಚ್ಚು ಕೂಲಿ ದಕ್ಕುತ್ತದೆ. ಆದರೆ ಕಾರ್ಖಾನೆಗಳಲ್ಲಿ ದುಡಿವ ಮಹಿಳೆಯರು, ಬೀಡಿ ಕಾರ್ಮಿಕರು ಹಕ್ಕಿನಿಂದ ಕನಿಷ್ಠ ಕೂಲಿ ಮತ್ತು ಇತರ ಸೌಲಭ್ಯ ಗಳನ್ನು ಪಡೆಯುತ್ತಾರೆ. ಈ ವರ್ಗದ ದುಡಿವ ಮಹಿಳೆಯರಲ್ಲಿ ಆರ್ಥಿಕ ಸ್ವಾವಲಂಬನೆ ಇರುವುದರಿಂದಲೋ ಏನೋ ಎಲ್ಲಾ ರೀತಿಯಲ್ಲಿ ಸಮಾಜ ದಲ್ಲಿ ಶೋಷಣೆಗೊಳಗಾದರೂ ಕೂಡ ದಿಟ್ಟತನದಿಂದ ಬಾಳುವ ಕೆಚ್ಚು ಇರುತ್ತದೆ. ಕೃಷಿ ಕಾರ್ಮಿಕ ಮಹಿಳೆ ಮತ್ತು ಕಾಮಗಾರಿ ಕೆಲಸ ಮಾಡುವ ಮಹಿಳೆಯರು ಪುರುಷರಿಗಿಂತ ಕಡಿಮೆ ವೇತನ ಪಡೆದರೂ ತುಟಿ ಪಿಟ್ಟೆನ್ನದೆ ರಟ್ಟೆ ಮುರಿದು ದುಡಿಯುತ್ತಾರೆ.

ಈ ತಾರತಮ್ಯವಿದ್ದರೂ ಬಾಕಿ ವಿಷಯಗಳಲ್ಲಿ ಇವರು ಪುರುಷರಿಗೆ ಹೆಗಲೆಣೆಯಾಗಿ ನಿಲ್ಲುತ್ತಾರೆ. ತಮಗೆ ಬಂಧನವೆನಿಸಿದ ಕಟ್ಟುಪಾಡುಗಳನ್ನು, ನೀತಿ ನಿಯಮಗಳನ್ನು ಧಿಕ್ಕರಿಸಿ ಸಮಾಜವನ್ನು ಎದುರಿಸುವ ಮಹಿಳೆಯರು ಈ ವರ್ಗದಲ್ಲಿ ಹೆಚ್ಚು.

ಮಧ್ಯಮ ವರ್ಗದ ಮಹಿಳೆಗೆ ಅನ್ನದ ಪ್ರಶ್ನೆ ಮುಖ್ಯವಲ್ಲ. ತನ್ನ ಸಂಸಾರದ ಸುಖ ಸೌಕರ್ಯಗಳನ್ನು ಹೆಚ್ಚಿಸಿಕೊಳ್ಳಲು ಆಕೆ ದುಡಿಯುತ್ತಾಳೆ. ಈ ವರ್ಗದ ಮಹಿಳೆಯರಲ್ಲಿ ಸಮಸ್ಯೆಗಳು ಹೆಚ್ಚು. ಇವಳು ಶೋಷಣೆಯ ಜತೆ ರಾಜಿ ಮಾಡಿಕೊಂಡೇ ಬದುಕುತ್ತಾಳೆ. ಮನೆ, ಕಚೇರಿ ಎರಡನ್ನೂ ನಿಭಾಯಿ ಸಲು ಹೆಣಗಬೇಕಾಗುತ್ತದೆ. ಇವರಲ್ಲಿ ತಮ್ಮ ಮಾನಮರ್ಯಾದೆಯನ್ನು ಉಳಿಸಿಕೊಳ್ಳುವ ಹಂಬಲ ತೀವ್ರವಾಗಿರುವುದರಿಂದ ಬದುಕು ನಿರಂತರ ಹೋರಾಟದ ಕಣವಾಗುತ್ತದೆ. ಪೂರ್ಣ ವೈಜ್ಞಾನಿಕ ಮನೋಭಾವವೂ ಇಲ್ಲದ, ಪೂರ್ಣ ಸನಾತನಿಗಳೂ ಆಗಿರದ ಮಾನಸಿಕ ಸ್ಥಿತಿ ಇವರದು. ಈ

ವರ್ಗದ ಸ್ತ್ರೀ ಪುರುಷರೇ 'ಗೋಸುಂಬೆತನ'ವನ್ನು ಪ್ರದರ್ಶಿಸುತ್ತಾರೆ. "ಅವಿವಾಹಿತ ಹೆಣ್ಣುಗಳಿರುವ ಕಚೇರಿಗಳಲ್ಲಿ ಕೆಲಸ ಚೆನ್ನಾಗಿ ನಡೆಯುತ್ತದೆ. ವಿವಾಹಿತ ಹೆಣ್ಣುಗಳಿರುವಲ್ಲಿ ಕೆಲಸ ಏನೂ ನಡೆಯುವುದಿಲ್ಲ" ಎಂಬ ಒಂದು ಅಭಿಪ್ರಾಯವಿದೆ. ಈ ಮಾತಿನ ಅಂತರಾರ್ಥ ಏನೇ ಇದ್ದರೂ ಹೆಣ್ಣು ಎಂಬ ಕಾರಣಕ್ಕಾಗಿಯೇ ಕೆಲವು ಕ್ಷೇತ್ರಗಳಲ್ಲಿ ಅವಳಿಗೆ ಸಾಮರ್ಥ್ಯವಿದ್ದರೂ ಅವಕಾಶ ನಿರಾಕರಿಸಲಾಗುತ್ತದೆ ಎಂಬುದಂತೂ ಸತ್ಯ. ಖಾಸಗಿ ಸಂಸ್ಥೆಗಳಲ್ಲಿ ಭಡ್ತಿಗೂ ಸೊನ್ನೆ. ಇದಕ್ಕೆ ಕೆಲಮಟ್ಟಿಗೆ ಹೆಣ್ಣೇ ಕಾರಣ. ಹೆಚ್ಚು ಸವಾಲು ಗಳಿರುವ ಜವಾಬ್ದಾರಿಯುಳ್ಳ ಕೆಲಸಗಳನ್ನು ಕೆಲವೊಮ್ಮೆ ಹೆಣ್ಣೇ ನಿರಾಕರಿಸು ತ್ತಾಳೆ. ಆದರೆ ಅಧಿಕಾರಿಗಳು ಹೇಳಿದಂತೆ ಕೇಳಿ ಕೆಲವೊಮ್ಮೆ ಶೋಷಣೆಗೂ ತಲೆಬಾಗಿ, ರಜಾ ದಿನಗಳಲ್ಲೂ ಬಂದು ಕೆಲಸ ಮಾಡಲು ಸಿದ್ಧರಾಗುವುದು ಹೆಂಗಸರೇ ಎಂಬುದನ್ನು ಮಾತ್ರ ಎಲ್ಲಾ ಅಧಿಕಾರಿಗಳು ಒಪ್ಪುತ್ತಾರೆ. ಲೈಂಗಿಕ ಕಿರುಕುಳಗಳನ್ನು ಸಹಿಸಿಯೂ ದುಡಿಯುವುದು ಅನಿವಾರ್ಯ ವೆನಿಸುವುದು ಈ ವರ್ಗದಲ್ಲಿ ಹೆಚ್ಚು. ಪ್ರತಿಭಟನೆ ಮತ್ತು ಸಂಘಟನೆ ಈ ಎರಡೂ ಶಕ್ತಿಯ ಕೊರತೆ ಎಲ್ಲಾ ವರ್ಗದ ಮಹಿಳೆಯರಲ್ಲಿ ಸಾಮಾನ್ಯ. ಆದರೂ ಇತ್ತೀಚಿನ ವರ್ಷಗಳಲ್ಲಿ ಮಹಿಳೆಯರು ಜಾಗೃತರಾಗಿದ್ದಾರೆ. ಶೋಷಣೆಯ ವಿರುದ್ಧ ಸ್ವರವೆತ್ತುತ್ತಿದ್ದಾರೆ. ಈ ಸ್ವರಕ್ಕೆ ಸ್ವರ ಸೇರಿಸುವ ಬದಲು ಗಂಟಲು ಹಿಚುಕುವ ಕೆಲಸವೂ ಹೆಣ್ಣಿನಿಂದಲೇ ಆಗುತ್ತಿರುವುದು ವಿಚಿತ್ರ, ಆದರೂ ಸತ್ಯ. ನಮ್ಮ ಸಮಾಜದಲ್ಲಿ ಹೆಣ್ಣು ಕೆಲವು ಇತಿಮಿತಿ ಗಳಿಂದಲೇ ಬೆಳೆಸಲ್ಪಡುವುದು ಇದಕ್ಕೆ ಒಂದು ಕಾರಣವಾದರೆ, ಸಮಾನತೆ ಮತ್ತು ಸ್ವಾತಂತ್ರ್ಯಗಳನ್ನು ಗಂಟಲ ಮೇಲಿನ ಮಾತಾಗಿಯೇ ಒಪ್ಪುವ ಪುರುಷ ವರ್ಗದ ಧೋರಣೆಯೂ ಮತ್ತೊಂದು ಕಾರಣ.

ನಮ್ಮ ಸಮಾಜದ ಹೆಚ್ಚಿನ ಹೆಂಗಸರು ತಮ್ಮ ಮನೆಯ ಗಂಡಸರು ಅಡಿಗೆ ಕೋಣೆಗೆ ಪ್ರವೇಶಿಸುವುದನ್ನು ಬಯಸುವುದಿಲ್ಲ. ಹೊರಗೆ ದುಡಿಯುವ ಕಾರಣದಿಂದ ಈಗೀಗ ಮನೆ ಕೆಲಸಗಳನ್ನು ಪತಿ ಪತ್ನಿ ಹಂಚಿ ಕೊಂಡು ಹೊಂದಾಣಿಕೆ ಮಾಡಿಕೊಳ್ಳುವುದು ಅನಿವಾರ್ಯವಾಗಿದೆ. ಇದು ಅವರವರ ಸಾಮರಸ್ಯಕ್ಕೆ ಸಂದರ್ಭಕ್ಕೆ ಹೊಂದಿಕೊಂಡ ವಿಚಾರ. ಯಾವುದೇ

ಘೋಷಣೆಗಳು, ಬೇಡಿಕೆಗಳು ಸ್ತ್ರೀಯರಿಂದ ಬಂದರೂ ಮೇಲ್ನೋಟಕ್ಕೆ ಅಸಂಬದ್ಧವೆಂದು ಪುರುಷರಿಗೆ ಕಾಣುವುದು ಸಹಜ. ಆದರೆ ಎಲ್ಲರೂ ಒಪ್ಪುವ ಅಪ್ಪಟ ಸತ್ಯವೊಂದಿದೆ. ಸಮಾಜದಲ್ಲಿ ಸ್ತ್ರೀ ಪುರುಷರ ಅಸಮಾನತೆಗೆ ಪುರುಷರು ಕಾರಣರಾದಂತೆ ಸ್ತ್ರೀಯರ ಉದ್ಧಾರಕ್ಕೂ ಅವರೇ ಕಾರಣರಾಗಬೇಕು. ಆಧುನಿಕ ಯುಗದಲ್ಲಿ ಮಹಿಳೆಯನ್ನು ತನ್ನ ಸಮಾನವೆಂದು ತಿಳಿಯಬೇಕಾದುದು ಧರ್ಮ. ಅದೇ ರೀತಿ ಮಹಿಳೆಯೂ ಕೂಡಾ ತಾನು ಮಹಿಳೆಯೆಂಬ ಕಾರಣಕ್ಕಾಗಿಯೇ ಪುರುಷರಿಗಿಲ್ಲದ ಕೆಲವು ರಿಯಾಯಿತಿಗಳನ್ನು ಯೋಚಿಸುವುದು, ಅವರ ಅನುಕಂಪಕ್ಕಾಗಿ ಹಾತೊರೆಯುವುದು, ಒನಪು ವಯ್ಯಾರಗಳನ್ನೇ ಬಂಡವಾಳವಾಗಿಸಿಕೊಂಡು ಕರ್ತವ್ಯ ಲೋಪ ಮಾಡುವುದು ಇವೆಲ್ಲಾ ಮಹಿಳೆಯರ ಆತ್ಮಾಭಿಮಾನ, ಸ್ವಂತಿಕೆಗಳನ್ನೇ ನಾಶಮಾಡುವಂತಹ ಸ್ಥಿತಿಗೆ ಒಯ್ಯುತ್ತವೆ ಎಂಬುದನ್ನು ಮರೆಯಬಾರದು.

ಉಚ್ಚವರ್ಗದ ಮಹಿಳೆಯರಲ್ಲಿ ಅನ್ನದ ಪ್ರಶ್ನೆಯೂ ಇಲ್ಲ, ಸೌಕರ್ಯಗಳ ಪ್ರಶ್ನೆಯೂ ಇಲ್ಲ. ಕೇವಲ ಶೋಕಿಗಾಗಿ, ದುಡಿವ ಇವರು ಸಮಯದ ಸದುಪಯೋಗವಾಗಲೆಂದೇ ಕೆಲಸ ಮಾಡುತ್ತೇವೆ ಎನ್ನುತ್ತಾರೆ. ಈ ವರ್ಗದ ಮಹಿಳೆಯರು ಸಮಾಜದ ನೀತಿನಿಯಮಗಳ ಬಗ್ಗೆ ಹೆಚ್ಚು ತಲೆ ಕೆಡಿಸುವುದಿಲ್ಲ. ಸಾಮಾಜಿಕ ರಂಗದಲ್ಲಿ ಹೆಚ್ಚು ಹೆಚ್ಚು ಕಾಣಿಸಿಕೊಳ್ಳುವ ಹಂಬಲ ಇವರಲ್ಲಿ ತೀವ್ರವಾಗಿರುತ್ತದೆ. ದೊಡ್ಡ ಅಧಿಕಾರದಲ್ಲೋ ರಾಜಕೀಯದಲ್ಲೋ ಇನ್ನಿತರ ಕಲಾಕ್ಷೇತ್ರಗಳಲ್ಲೋ ದುಡಿಯುವ ಮಹಿಳೆಯರ ಖಾಸಗಿ ಬದುಕು ಆತ್ಮೀಯ ಸಂಬಂಧಗಳಿಂದ ಸುಖಮಯವಾಗಿರುವುದು ಬಹಳ ಕಡಿಮೆ. ಹಠವಾದಿಗಳಾದ ಕೆಲವರಲ್ಲಿ ಭಾವನಾತ್ಮಕ ಸೆಲೆಗಳು ಬತ್ತಿ ಹೋಗಿವೆಯೇನೋ ಎಂದು ಒಮ್ಮೊಮ್ಮೆ ಅನಿಸುವುದಿದೆ. ಇಂಥವರ ಕೈ ಕೆಳಗೆ ದುಡಿವ ಗಂಡಸರಿಗೂ ಇವರ ಆಜ್ಞೆಗಳು ಬಿಸಿತುಪ್ಪ. ನುಂಗಲಾರೆ, ಉಗುಳಲಾರೆ ಎಂಬ ಸಂಕಟ. ಮಹಿಳಾಧಿಕಾರಿಯಿಂದ ಬೈಯಿಸಿಕೊಳ್ಳುವುದು ಎಷ್ಟು ಅವಮಾನಕರವಾದ ಸಂಗತಿಯೆಂದು ಗಂಡಸರು ತಿಳಿದಿರುತ್ತಾರೋ ಅಷ್ಟು ಹೆಂಗಸರು ತಿಳಿಯುವುದಿಲ್ಲ. ಕೆಳವರ್ಗ ಮತ್ತು ಮಧ್ಯಮವರ್ಗ ಮಹಿಳೆಯರು ಬೈದರೂ ತುಟಿಪಿಟ್ಟೆನ್ನದೆ

ದುಡಿಯುವುದು ಅನಿವಾರ್ಯವೆಂದು ತಿಳಿದಂತೆ ಉಚ್ಚವರ್ಗದ ಮಹಿಳೆ ತಿಳಿಯಲಾರಳು. ನಮ್ಮ ಸಮಾಜದಲ್ಲೂ 'ಹೆಣ್ಣಿಗ' 'ಬಳೆ ತೊಟ್ಟವ' ಎಂದರೆ ಗಂಡಸು ಕೆರಳುವಷ್ಟು ಶೀಘ್ರದಲ್ಲಿ 'ಗಂಡುಬೀರಿ' ಎಂದು ಹೆಣ್ಣಿಗೆ ಬೈದರೆ ಕೆರಳಲಾರಳು. ದುಡಿಯುವ ಮಹಿಳೆಗೆ ಬೇಕಾದುದು ಸೂಕ್ಷ್ಮ ಬುದ್ಧಿ, ವಿವೇಕ, ಜ್ಞಾನ, ಸಾಮರ್ಥ್ಯ, ಸವಾಲುಗಳನ್ನೆದುರಿಸುವ ಧೈರ್ಯ ಮತ್ತು ಸ್ಥೈರ್ಯ. ಇಂತಹ ಉತ್ತಮ ಗುಣ ಸಂಪನ್ನರಾದ ಮಹಿಳೆಯರನ್ನು ಯಾರೂ ಕೀಳಾಗಿ ಕಾಣರು. ಪುರುಷ ಅಧಿಕಾರಿಗಳಲ್ಲಿ ಕೆಲವೊಂದು ಗುಣ ಲೋಪವಾದರೂ ಕಣ್ಣಿಗೆ ಕಾಣುವುದಿಲ್ಲ. ಆದರೆ ಮಹಿಳೆ ಅಧಿಕಾರಿಯಾದರೆ ಅವಳ ಪ್ರತೀ ಚಲನವಲನಗಳನ್ನು ಕಣ್ಣಿಟ್ಟು ನೋಡುತ್ತಾರೆ. ಟೀಕೆಗಳನ್ನು ಮೈಯೆಲ್ಲಾ ಕಿವಿಯಾಗಿ ಕೇಳುತ್ತಾರೆ. ಆದರೆ ಎಲ್ಲಾ ತೀರ್ಮಾನಗಳಿಗೂ ಕೆಲವು ಅಪವಾದಗಳಿರುತ್ತವೆ. ಅನುಕೂಲ ಅವಕಾಶಗಳು ದೊರೆತರೆ ಮಹಿಳೆಯರು ಪುರುಷರಿಗೆ ಸರಿ ಮಿಗಿಲೆನಿಸುವಂತೆ ಕಾರ್ಯ ನಿರ್ವಹಿಸ ಬಲ್ಲರು ಎಂಬುದಕ್ಕೆ ಪ್ರಪಂಚದ ಇತಿಹಾಸದಲ್ಲಿ ಸಾಕಷ್ಟು ಸಾಕ್ಷಿಗಳಿವೆ. ಪ್ರವಾಹದ ವಿರುದ್ಧ ಈಜಿ ಗೆದ್ದ ಕೀರ್ತಿ ಅನೇಕ ಮಹಿಳೆಯರಿಗಿದೆ. ಆರ್ಥಿಕ ಸ್ವಾವಲಂಬನೆ ಕೆಲಮಟ್ಟಿಗೆ ಅಸಮಾನತೆಯನ್ನು ತೊಡೆದು ಹಾಕಿರುವುದು ನಿಜವಾದರೂ ಅದೇ ಮುಖ್ಯ ಗುರಿಯಾಗಿರಬಾರದು. ಮೀಸಲಾತಿಯ ದಾನದಿಂದ ದೊರೆತ ಉದ್ಯೋಗಕ್ಕಿಂತ ಪ್ರತಿಭೆ ಸಾಮರ್ಥ್ಯ ಗಳ ಹಕ್ಕಿನಿಂದ ದೊರೆಯುವ ಉದ್ಯೋಗ ಹೆಚ್ಚು ತೃಪ್ತಿ ಕೊಡುತ್ತದಲ್ಲವೆ? ಹೆಣ್ಣು ಹೊರಗೆ ದುಡಿಯಲು ಹೊರಟ ಪ್ರಾರಂಭದಲ್ಲಿ ಪ್ರಾಥಮಿಕ ಶಾಲೆಯ ಉಪಾಧ್ಯಾಯಿನಿ, ದಾದಿ, ಗುಮಾಸ್ತೆ ಅಷ್ಟೆ. ಇದಕ್ಕೆ ಮನಸ್ಸಿಲ್ಲದ ಮನಸ್ಸಿ ನಿಂದಲೇ ಒಪ್ಪಿಗೆ ಕೊಟ್ಟ ಅಂದಿನ ಸಮಾಜ ಇಂದು ಬೆರಗುಗಣ್ಣುಗಳಿಂದ ಮಹಿಳೆಯ ಔದ್ಯೋಗಿಕ ಪ್ರಗತಿಯನ್ನು ನೋಡುತ್ತಿದೆ! ದುಡಿಯುವ ಮಹಿಳೆಯರನ್ನು ಕೀಳಾಗಿ ಕಂಡು ಕಹಿ ಮಾತನಾಡುತ್ತಿದ್ದ ಜನರ ನಾಲಿಗೆ ಸ್ತಬ್ಧವಾಗಿದೆ! ಆದರೂ ಅದೇ ನಾಲಗೆಯಿಂದ ಸಿಹಿ ಮಾತುಗಳನ್ನಾಡಿಸುವ ಜವಾಬ್ದಾರಿಯು ದುಡಿಯುವ ಮಹಿಳೆಯರ ಪಾಲಿಗಿದೆ ಎನ್ನುವುದನ್ನು ಮರೆಯದಿರೋಣ.

ಸಂಸ್ಕೃತಿ ರಕ್ಷಣೆಯಲ್ಲಿ ಮಹಿಳೆಯರ ಪಾತ್ರ

— 'ಗಿರಿವಾಸಿನಿ'

"ಉತ್ತಮ ಸಂಸ್ಕೃತಿಯೆಂಬುದು ಮಾನವೀಯತೆಯ ಮುಖ್ಯ ಲಕ್ಷಣ. ಮಾನವೀಯ ಮೌಲ್ಯಗಳ ಉಳಿವಿಗಾಗಿ ಮಹಿಳೆ ನೀಡಿದ ಕೊಡುಗೆ ಅಂದಿನಿಂದ ಇಂದಿನವರೆಗೂ ಅವಿಸ್ಮರಣೀಯವಾಗಿದೆ. ಮುಂದಾದರೂ ನಾರೀವರ್ಗವೇ ಸಮಾಜಕ್ಕೊಂದು ದಾರಿದೀಪವಾಗಿರುವ ಎಚ್ಚರ ವಹಿಸುವುದು ಅನಿವಾರ್ಯ."

— ಸಂ.

ಸಂಸ್ಕೃತಿ ಎಂದರೆ ಉತ್ತಮ ನಡೆನುಡಿ. ಕಾಲಕಾಲಕ್ಕೆ ಬದಲಾವಣೆ ಕಾಣುತ್ತಿರುವ, ಬದಲಾವಣೆಯಾಗುತ್ತಿರುವಾಗ ಒಳಿತು ಕೆಡುಕುಗಳನ್ನು ತನ್ನೊಳಗೆ ಒಂದಾಗಿಸಿಕೊಳ್ಳುತ್ತಿರುವ ಮಹಾ ಪ್ರವಾಹವಾಗಿದೆ ಸಂಸ್ಕೃತಿ. ಇದರೊಂದಿಗೆ ಹೆಜ್ಜೆ ಹಾಕಬೇಕಾಗಿರುವ ಸಾಮಾನ್ಯ ಜನಜೀವನ, ಅದರಲ್ಲೂ ಮಹಿಳೆ ಯಾವುದನ್ನೆಲ್ಲ ಆರಿಸಿಕೊಳ್ಳಬೇಕು, ಎಂತಹ ಸಂಸ್ಕೃತಿಯನ್ನು ರಕ್ಷಿಸಿಕೊಳ್ಳಬೇಕು, ಇವು ಮನನ ಮಾಡಿಕೊಳ್ಳಬೇಕಾದ ವಿಚಾರಗಳು. ಸಂಸಾರಕ್ಕೆ, ಸಮಾಜಕ್ಕೆ ತನ್ಮೂಲಕ ಸಮಗ್ರ ಜನಜೀವನಕ್ಕೆ ಆಧಾರ ಸ್ವರೂಪಳಾದ ಮಹಿಳೆ ಉತ್ತಮ ಸಂಸ್ಕೃತಿಯನ್ನು ಕಾಪಾಡಿಕೊಂಡರೆ ಮಾತ್ರ ಸುಸಂಸ್ಕೃತ ಸಮಾಜ ನಿರ್ಮಾಣವಾದೀತು.

ನಮ್ಮ ಸಂಸ್ಕೃತಿ ಅಂದರೆ ಭಾರತೀಯ ಸಂಸ್ಕೃತಿಯ ಕುರಿತು ಹೇಳುವ ಮೊದಲು ಪ್ರಾಚೀನ ಕಾಲದಲ್ಲಿ ಮಹಿಳೆಯ ಸ್ಥಿತಿಗತಿ ಹೇಗಿತ್ತು ಎಂಬುದರ ಕಡೆಗೆ ಒಂದಿಷ್ಟು ದೃಷ್ಟಿ ಹರಿಸಬೇಕಾಗಿದೆ. ಹೊಸ ಚಿಗುರಿಗೆ ಹಳೆಯ ಬೇರೇ ಆಧಾರವಷ್ಟೆ?

ಅತ್ಯಂತ ಪುರಾತನ ವೇದಕಾಲದಲ್ಲಿ ಮಹಿಳೆಯು ಎಲ್ಲ ರಂಗಗಳಲ್ಲೂ ಪುರುಷನಷ್ಟೇ ಸ್ಥಾನಮಾನಗಳನ್ನು ಪಡೆದಿದ್ದಳು. ಜ್ಞಾನಾರ್ಜನೆಗೆ ಮಾತ್ರ

ವಲ್ಲದೆ ಉಪನಯನ ಸಂಸ್ಕಾರಕ್ಕೂ ಅರ್ಹಳೆನಿಸಿದ್ದಳು. ಆಕೆ ಬಯಸಿದರೆ ಅವಿವಾಹಿತೆಯಾಗಿ, ಬ್ರಹ್ಮಚಾರಿಣಿಯಾಗಿ ಬಾಳಬಹುದಿತ್ತು. ವಿವಾಹದಲ್ಲೂ ಕನ್ಯಾ ಶುಲ್ಕವೇ ರೂಢಿಯಲ್ಲಿದ್ದ ಕಾರಣ ಸ್ತ್ರೀಗೆ ವಿವಾಹವು ಸಮಸ್ಯೆ ಎನಿಸು ತ್ತಿರಲಿಲ್ಲ. ನಾರೀ ಕುಲವು ಎಷ್ಟೊಂದು ಗೌರವಿಸಲ್ಪಡುತ್ತಿತ್ತೆಂಬುದಕ್ಕೆ ಹಲವು ದೃಷ್ಟಾಂತಗಳು ಸಿಗುತ್ತವೆ. ಜಗತ್ತಿನ ಅಧಿದೇವತೆ ಜಗನ್ಮಾತೆ, ಅಂತೆಯೇ ಭೂಮಾತೆ, ಗೋಮಾತೆ ಇತ್ಯಾದಿಯಾಗಿ ಗೌರವನೀಯ ವಿಷಯ ಗಳನ್ನೆಲ್ಲಾ ಮಾತೃ ಸ್ವರೂಪವಾದ ಹೆಸರಿನಿಂದ ಕರೆದದ್ದು ಮಹಿಳೆಯರಿಗೆ ಅಭಿಮಾನದ ಸಂಗತಿ. ಮುಂದೆ ..ರಾಮಾಯಣ, ಮಹಾಭಾರತಗಳ ಕಾಲ ದಲ್ಲಿ ಕೂಡಾ ನಾರಿ ಗೌರವಾರ್ಹಳಾಗಿದ್ದಳು. ಅಪರೂಪಕ್ಕೆ ಒಂದೆರಡು ಪಾತ್ರಗಳು ಇಂತಹ ಗೌರವ ಪಡೆಯುವಲ್ಲಿ ಸೋತಿರಬಹುದು. ಅಂತೆಯೇ ಕೆಲವೊಮ್ಮೆ ನಿಂದನೆಗೆ, ದುಃಖಕ್ಕೆ ಗುರಿಯಾದ ನಾರೀ ಪಾತ್ರಗಳು ಈ ಕಾವ್ಯಗಳಲ್ಲಿ ಕಂಡು ಬಂದರೂ ಅದಕ್ಕೆ ಅವರು ಸ್ವತಃ ಕಾರಣರಾಗಿರಲಿಲ್ಲ ವೆಂಬುದು ಸತ್ಯ. ಅಲ್ಲದೆ ಅನೇಕ ಕಷ್ಟಕಾರ್ಪಣ್ಯಗಳಿಂದ ತಾವೇ ಕಂಗೆಟ್ಟಾ ಗಲೂ ಉತ್ತಮ ಸಂಸ್ಕೃತಿಯನ್ನು ಮೆರೆದು ಸತ್ಕೀರ್ತಿ ಪಡೆದ ಅಂದಿನ ಅದೆಷ್ಟೋ ಮಹಿಳೆಯರು ಇಂದಿಗೂ ಪ್ರಾತಃಸ್ಮರಣೀಯರಾಗಿದ್ದಾರೆ. ಇಂತಹ ಪುರಾತನ ಸಂಸ್ಕೃತಿಯೇ ಆಸೇತು ಹಿಮಾಚಲ ಪರ್ಯಂತ ಭಾರತದ ಉದ್ದ ಗಲಗಳಲ್ಲಿ ಕಾವ್ಯ, ಕಥನ, ನರ್ತನ, ಮನನ, ಆಚರಣೆಗಳ ಮೂಲಕ ವೈವಿಧ್ಯಪೂರ್ಣವಾದ ಏಕತೆಯನ್ನು ಎತ್ತಿ ತೋರಿಸುವ ಮಹತ್ಕಾರ್ಯವನ್ನು ಇಂದಿಗೂ ಮಾಡುತ್ತಿದೆ.

"ಸ್ತ್ರೀಯರು ಗೌರವಿಸಲ್ಪಡುವಲ್ಲಿ ದೇವರೂ ಸಂತೃಪ್ತರಾಗಿರುತ್ತಾರೆ, ಹೆಣ್ಣಿನ ಕಣ್ಣೀರು ಸರ್ವನಾಶಕ್ಕೆ ಕಾರಣವಾದೀತು..." ಎಂಬ ಮಾತುಗಳೆಲ್ಲ ಕೇವಲ ಅಲಂಕಾರಕ್ಕಾಗಿ ಇರದೆ ಒಂದು ಕಾಲದಲ್ಲಿಯ ನಮ್ಮ ಸಂಸ್ಕೃತಿಯ ಅಂಗವಾಗಿದ್ದುದು ನಿಜ. ಗುರುವಿಗಿಂತ, ತಂದೆಗಿಂತ, ತಾಯಿಯು ಹಲವು ಪಟ್ಟು ಹೆಚ್ಚು ಪೂಜನೀಯಳು ಎಂದು ಬೋಧಿಸಲ್ಪಟ್ಟ ಸನಾತನ ಸಮಾಜ, "ಸತ್ಯಂ ವದ ಧರ್ಮಂ ಚರ" ಎಂಬ ಧ್ಯೇಯ ವಾಕ್ಯವನ್ನು ಶಿಕ್ಷಣದ ಕೊನೆ

ಯಲ್ಲಿ ರೂಢಿಗೊಳಿಸುತ್ತಿದ್ದ ಆ ಸುಸಂಸ್ಕೃತಿ ಮುಂದೆ ಜೈನ ಬೌದ್ಧರ ಕಾಲದಲ್ಲಿಯೂ ಇದಕ್ಕೆ ವ್ಯತಿರಿಕ್ತವಾಗದೆ ಮುನ್ನಡೆಯಿತು. ಆದರೆ....

ಮಧ್ಯಯುಗ .. ಅಂದರೆ ಸುಮಾರು ಎಂಟನೇ ಶತಮಾನದ ನಂತರ ಸ್ತ್ರೀಯರ ಸ್ಥಾನಮಾನಗಳು ಕೀಳುದೆಸೆಗಿಳಿಯಲು ಕಾರಣಗಳು ಹಲವು ಕಂಡು ಬರುತ್ತವಾದರೂ ಮುಖ್ಯಕಾರಣ .. ಆಕ್ರಮಣವನ್ನು ಎದುರಿಸುವಲ್ಲಿ ಹೆಣ್ಣಿನ ದೈಹಿಕ ದೌರ್ಬಲ್ಯ, ಹಾಗೂ ಪುರುಷನಲ್ಲಿ ತುಂಬಿಕೊಂಡ ಮಹತ್ವಾಕಾಂಕ್ಷೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಈ ಕಾಲದಲ್ಲಿಯೇ ಸ್ತ್ರೀಯನ್ನು ಕಾಡಿದ ಘೋರ ಸಮಸ್ಯೆಗಳೆಂದರೆ ಬಾಲ್ಯವಿವಾಹ, ಸತೀ ಸಹಗಮನ, ಪರದಾ ಪದ್ಧತಿ. ಹೆಣ್ಣು ಶಿಶುಹತ್ಯೆ, ಬಹುಪತ್ನಿತ್ವ–ಇತ್ಯಾದಿ. ಆಗ ಕೇವಲ ಭೋಗ ವಸ್ತುವೆನಿಸಿದ್ದ ನಾರಿ ಯಾವ ವಿಧದಲ್ಲಿ ತಾನೆ ಸಂಸ್ಕೃತಿ ರಕ್ಷಣೆಗೆ ಮುಂದಾಗಲು ಸಾಧ್ಯವಿತ್ತು? ಆದರೂ ಉತ್ತರಕ್ಕಿಂತ ಆಕ್ರಮಣಕಾರರ ಭೀತಿ ಸ್ವಲ್ಪ ಕಡಿಮೆ ಇದ್ದ ದಕ್ಷಿಣ ಭಾರತದಲ್ಲಿ ಅನೇಕ ವೀರ ರಮಣಿಯರು, ಭಕ್ತಾಗ್ರಣಿಗಳು, ಹೆಚ್ಚಿನ ಸಂಖ್ಯೆಯಲ್ಲಿಯೂ ಉತ್ತರ ಭಾರತದಲ್ಲಿ ಬೆರಳೆಣಿಕೆಯ ಅಂಕೆಯಲ್ಲಿಯೂ ಆಗಾಗ ಮಿಂಚಿ ಉನ್ನತ ಆದರ್ಶವನ್ನು ನಾಡಿಗೆ ಕೊಡುಗೆ ನೀಡಿದರು. ಅಂತಹ ನಾರೀಮಣಿಯರು ಶೀಲ, ಸಂಸ್ಕೃತಿಗಳ ರಕ್ಷಣೆಗಾಗಿ ತಮ್ಮ ಪ್ರಾಣವನ್ನೇ ಮುಡಿಪಾಗಿಟ್ಟರು. ಇದನ್ನೇ ವಿಕೃತ ರೂಪದಲ್ಲಿ ಚಿಂತಿಸಿ ಪುರುಷನು ತನ್ನ ಹಿರಿಮೆ, ಪ್ರತಿಷ್ಠೆಗಳ ಪ್ರದರ್ಶನಕ್ಕಾಗಿ, ಸ್ವರ್ಗಲೋಕದಲ್ಲಿ ಸ್ಥಾನ ಕಾದಿರಿಸುವ ಚಪಲಕ್ಕಾಗಿ 'ಸತೀ' ಎಂಬ ವೈಭವೀಕೃತ ಹೆಸರು ಕೊಟ್ಟು ವಿಧವಾ ಸ್ತ್ರೀಯ ಕೈಕಾಲು ಕಟ್ಟಿ ಆಕೆಯನ್ನು ಬೆಂಕಿಗೆಸೆದಾಗ ನಾರಿಯ ಸ್ಥೈರ್ಯ ಕುಸಿಯದಿದ್ದೀತೇ? ಪರಿಣಾಮವಾಗಿ ಆಕೆ ಅಡುಗೆ ಕೋಣೆಯ ನಾಲ್ಕು ಗೋಡೆಗಳ ನಡುವೆ ಬಂಧಿಯಾದಳು. ಈ ರೀತಿ ಮಹಿಳೆಯನ್ನು ಕಡೆಗಣಿಸಿದ್ದರಿಂದಲೇ ದೇಶದ ಆಡಳಿತ ಸೂತ್ರಗಳು ಕುಂಠಿತವಾಗಿ, ದೇಶ ಹರಿಹಂಚಾಗಿ, ಬ್ರಿಟಿಷರು ಬಂದು ಭಾರತದಲ್ಲಿ ನೆಲೆಯೂರಲು ಕಾರಣವಾಯಿತು.

ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಕೆಲವು ಮಂದಿ ಸಮಾಜ ಸುಧಾರಕರ ಸಹಕಾರದಿಂದ ಕ್ರಿ. ಶ. 1829ರಲ್ಲಿ ಜಾರಿಗೊಳಿಸಲಾದ ಸತೀ ಸಹಗಮನ

ಪ್ರತಿಬಂಧಕ ಕಾಯಿದೆ ಸ್ತ್ರೀ ಜೀವನಕ್ಕೆ ಹೊಸ ಜೀವಕಳೆ ತರುವಲ್ಲಿ ಪ್ರಥಮ ಹೆಜ್ಜೆಯಾಯಿತು. ರಾಜಾರಾಮಮೋಹನರಾಯರಂಥವರ ನಂತರ ಮತ್ತೆ ಮಹಾತ್ಮಾ ಗಾಂಧೀಜಿಯವರು ಸ್ತ್ರೀಯರ ಸುಧಾರಣೆಗಾಗಿ ಕೈಗೊಂಡ ಕಾರ್ಯಕ್ರಮಗಳು ಮಹತ್ವಪೂರ್ಣವಾದವು. ಸ್ತ್ರೀಯರ ರಕ್ಷಣೆ ಇರುವಲ್ಲಿ ಸಂಸ್ಕೃತಿಯ ರಕ್ಷಣೆ ಆಗುತ್ತದೆ ಎಂಬುದಕ್ಕೆ ಪ್ರತ್ಯಕ್ಷ ಪುರಾವೆ ದೊರಕ ತೊಡಗಿತು.

ಸ್ತ್ರೀ ಸ್ವಭಾವತಃ ಕೋಮಲ ಹೃದಯಳು. ಪ್ರೀತಿ, ಕರುಣೆ, ವಾತ್ಸಲ್ಯ, ಸಹನೆ, ಸೇವೆ ಇವೆಲ್ಲಾ ಸ್ತ್ರೀಯ ಸಹಜ ಗುಣ. ಲೋಕದಲ್ಲಿ ದುಷ್ಟ ಮಗನು ಇರುತ್ತಾನೆ, ಆದರೆ ದುಷ್ಟ ತಾಯಿ ಎಲ್ಲಿಯೂ ಇರಲಾರಳು. ಇದು ನಿತ್ಯ ಸತ್ಯ. ಗಾಂಧೀ ಯುಗದಲ್ಲಿ ಭಾರತದ ಸ್ತ್ರೀ ಶಕ್ತಿ ಎಚ್ಚತ್ತಿತು. ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರ ಪಾತ್ರ ಅವಿಸ್ಮರಣೀಯವಾಗಿ ಇದ್ದುದರಿಂದಲೇ ನಮ್ಮ ದೇಶ, ನಮ್ಮ ಸಂಸ್ಕೃತಿ ಪುನರುಜ್ಜೀವನಗೊಳ್ಳುವುದು ಸಾಧ್ಯವಾಯಿತು.

ಸ್ವತಂತ್ರ ಭಾರತದಲ್ಲಿ ಸಂವಿಧಾನಾತ್ಮಕವಾಗಿಯೇ ವಿದ್ಯೆ, ಉದ್ಯೋಗ ಮತ್ತು ಇತರೆಲ್ಲ ಮೂಲಭೂತ ಹಕ್ಕುಗಳಲ್ಲಿ ಸಮಾನ ಅವಕಾಶ ಪಡೆದ ಇಂದಿನ ಮಹಿಳೆ ನಿಜಕ್ಕೂ ಭಾಗ್ಯವಂತಳು. ಯಥೇಚ್ಛವಾಗಿರುವ ಸದವಕಾಶಗಳನ್ನು ಉಪಯೋಗಿಸಿಕೊಂಡು ಉನ್ನತಿಯ ಹಾದಿಯಲ್ಲಿ ಸಾಗುವುದು ಸುಗಮವಾಗಿರುವ ಈ ಕಾಲದಲ್ಲಿ ಸಂಸ್ಕೃತಿಗೆ ಚ್ಯುತಿ ಬಾರದಂತೆ ವರ್ತಿಸಬೇಕಾದುದು ಮಹಿಳೆಯ ಕರ್ತವ್ಯವಾಗಿದೆ. ಮಧ್ಯಯುಗದಲ್ಲಿ ಸ್ತ್ರೀಯರನ್ನು ಹಿಂಸಿಸಿದ, ಜೀವಂತ ದಹಿಸಿದ ಕುರುಡು ಸಂಪ್ರದಾಯಗಳು ಖಂಡಿತ ನಮ್ಮ ಸಂಸ್ಕೃತಿಯಲ್ಲ. ಸತ್ಯ ಅಹಿಂಸೆ, ದಯೆ, ಸದಾಚಾರ, ಪರೋಪಕಾರ, ಅತಿಥಿ ಸತ್ಕಾರ, ಶುಚಿತ್ವ, ದೈವ ಭಕ್ತಿ, ಗೃಹಾಲಂಕಾರ ಈ ಗುಣಗಳೆಲ್ಲ ನಮ್ಮ ಸಂಸ್ಕೃತಿಯ ಅಂಗಗಳು. ಎಲ್ಲರಲ್ಲೂ, ಎಲ್ಲೆಲ್ಲೂ ದೈವತ್ವವನ್ನು ಕಾಣುವುದು, ಪ್ರಕೃತಿಯನ್ನು ಪರಿಸರವನ್ನು ಪ್ರೀತಿಸುವುದು ಇವು ಉತ್ತಮ ಗುಣಗಳು. ಇಂತಹ ಸುಸಂಸ್ಕೃತಿಯನ್ನು ಅವು ಎಲ್ಲಿಯೇ ಇದ್ದರೂ ನಾವು ಮೆಚ್ಚಿಕೊಳ್ಳಲೇಬೇಕು. ಆದರೆ ವಿದೇಶಿಯರ ಉತ್ತಮ ಗುಣಗಳನ್ನು

ಸ್ವೀಕರಿಸುವುದರ ಬದಲು ಅವರ ವೇಷ, ಭಾಷೆಯನ್ನು ಮಾತ್ರ ಅನುಕರಿಸುವುದು, ಸ್ವಾತಂತ್ರ್ಯವನ್ನು ಸ್ವೇಚ್ಛೆಯೆಂದು ತಿಳಿಯುವುದು ನಮ್ಮ ಸ್ವಂತಿಕೆಯ ವಿನಾಶಕ್ಕೆ ಕಾರಣವಾದೀತು.

ಈಗ ಎಳೆಯ ಶಿಶುಗಳಿಂದಲೇ ಪ್ರಾರಂಭಿಸಿ ಇಂಗ್ಲೀಷ್ ಮಾಧ್ಯಮ ಶಿಕ್ಷಣ ನೀಡುತ್ತಿರುವುದು ನಮ್ಮ ಸಾಸ್ಕೃತಿಯ ಅವಗಣನೆಗೆ ಎಡೆಮಾಡಿ ಕೊಡುವ ಅಪಾಯಕ್ಕೆ ಆಹ್ವಾನವಾಗಿದೆ. ನಮ್ಮ ತಾಯಿ, ನಮ್ಮ ನಾಡು, ನಮ್ಮ ಭಾಷೆ, ಇವುಗಳನ್ನು ಮೊದಲು ಅರಿತು, ಅಭಿಮಾನ ಪಡೆದು ಅನಂತರ ಇತರ ಹೆಚ್ಚಿನ ಜ್ಞಾನಾರ್ಜನೆಯೆಡೆಗೆ ಮುನ್ನಡೆಯುವುದೇ ಸರಿಯಾದ ಹೆಜ್ಜೆ.

ಉನ್ನತ ವಿಚಾರ, ಸರಳ ಜೀವನ ಇವುಗಳ ಅಗತ್ಯವನ್ನು ಮಕ್ಕಳ ಮನದಲ್ಲಿ ತಾಯಂದಿರು ಬಿಂಬಿಸುವ ಕಾರ್ಯ ಅತೀ ಗುರುತರವಾದುದು. ನೈತಿಕ ಮೌಲ್ಯಗಳು ಕುಸಿದಿರುವ ಕಾರಣದಿಂದ ಇಂದು ಸಮಾಜದಲ್ಲಿ ಅತೃಪ್ತಿ, ಅಶಾಂತಿ, ಭ್ರಷ್ಟಾಚಾರ, ಹಿಂಸೆ, ಕ್ರೋಧಗಳು ಹೆಚ್ಚಾಗಿವೆ. ನೀತಿಪಾಠಗಳ ಅಭ್ಯಾಸ ತಾಯಂದಿರಿಂದ ಮತ್ತು ಪ್ರಾಥಮಿಕ ಶಿಕ್ಷಣ ಮೂಲದಿಂದ ದೊರೆಯಬೇಕು. ಒಂದು ಕಾಲದಲ್ಲಿ ಯುದ್ಧಕ್ಕೆ ಹೆದರಿ ಓಡಿಬಂದ ಪತಿಯನ್ನು, ಸುತನನ್ನು ಹೇಡಿಯೆಂಬ ಕಾರಣಕ್ಕೆ ಮನೆಬಾಗಿಲು ತೆರೆಯದೆ ಹೊರಗಟ್ಟುತ್ತಿದ್ದ ಭಾರತೀಯ ನಾರಿಯರ ಮನೋಬಲದಲ್ಲಿ ಕಿಂಚಿತ್ತನ್ನಾದರೂ ಅಂಗೀಕರಿಸಿ ಇಂದಿನ ಮಹಿಳೆಯರು ಲಂಚ, ವಂಚನೆ, ಭ್ರಷ್ಟಾಚಾರದಲ್ಲಿರುವ ತಮ್ಮ ಪುರುಷರನ್ನು ಎಚ್ಚರಿಸುವ ಕಾರ್ಯದಲ್ಲಿ ಧೈರ್ಯವಹಿಸಬೇಕು; ಹೊರತು ಇಂಥವುಗಳಿಗೆ ಪ್ರೋತ್ಸಾಹವೀಯಲು ಎಂದೂ ಕಾರಣರಾಗಬಾರದು. ಸುದೈವದ ಮಾತೆಂದರೆ ಉದ್ಯೋಗಿಗಳಲ್ಲಿ ಪುರುಷರಿಗಿಂತ ಸ್ತ್ರೀಯರೇ ಹೆಚ್ಚು ಶ್ರದ್ಧೆಯಿಂದ ಕೆಲಸ ಪೂರೈಸುತ್ತಾರೆಂಬ ವಿಷಯ ತಿಳಿದು ಬಂದಿರುವುದು. (ಇದಕ್ಕೆ ಕೆಲವು ಅಪವಾದಗಳು ಇರುವ ಸಾಧ್ಯತೆಯಿದೆ)

ಇಂದಿನ ಎಷ್ಟೋ ಚಲನಚಿತ್ರಗಳು, ಧಾರಾವಾಹಿಗಳು, ಜಾಹೀರಾತುಗಳು ಸ್ತ್ರೀಯನ್ನು ಅವಹೇಳನಕಾರಿಯಾಗಿ ಚಿತ್ರಿಸಿ, ಪ್ರದರ್ಶಿಸುವ ಸಂದರ್ಭಗಳು ಕಂಡು ಬರುತ್ತವೆ. ಇವುಗಳ ಮೂಲಕಾರಣ ಏನೇ ಇರಲಿ, ಇಂಥವು

ಗಳು ಕಂಡು ಬಂದಾಗ ಸ್ತ್ರೀಯರೆಲ್ಲ ಸಂಘಟಿತರಾಗಿ, ಒಮ್ಮತದಿಂದ ವಿರೋಧ ವ್ಯಕ್ತಪಡಿಸಿ ಹಣಕ್ಕಾಗಿ ಹಾತೊರೆಯುವ ಇಂತಹ ಕೆಟ್ಟ ಸಂಸ್ಕೃತಿಯನ್ನು ತಡೆಯಬೇಕು, ತಮ್ಮ ಆತ್ಮಾಭಿಮಾನ ಉಳಿಸಿಕೊಳ್ಳಬೇಕು.

ವರದಕ್ಷಿಣೆಯೆಂಬ ಹೆಸರಿನಲ್ಲಿ ಭೂತಾಕಾರವಾಗಿ ಬೆಳೆದು ನಿಂತಿರುವ ಅವಮಾನಕಾರೀ ಪದ್ಧತಿಯನ್ನು ತಾಯಿ, ತಂಗಿ, ಮಗಳು, ಸೊಸೆ, ಅತ್ತೆ ಆಗಿರುವ ಸಮಸ್ತ ಸ್ತ್ರೀ ಶಕ್ತಿ ಒಂದಾಗಿ ವಿರೋಧಿಸಿದರೆ ತಡೆಯುವವರಾರು? (ಒಂದಾಗುವುದು ಕಷ್ಟವಾಗಬಹುದು, ಕಷ್ಟವಾದುದನ್ನು ಸಾಧಿಸುವುದೇ ಹಿರಿಮೆಯಲ್ಲವೆ?) ಅಂಧಾನುಕರಣೆ, ಆಡಂಬರ, ಇದರಿಂದಾಗಿ ಅತಿಯಾದ ಆಮಿಷ...ಇದಕ್ಕೆ ಕೊನೆಯೆಂದೂ ಇಲ್ಲ, ನೆಮ್ಮದಿಯೂ ಇಲ್ಲ. ಆದುದರಿಂದ... ಹಿಂದೊಮ್ಮೆ ತ್ಯಾಗ ಭೂಮಿಯೆನಿಸಿದ ನಮ್ಮ ನೆಲ, ನಮ್ಮ ಜನ ಭೋಗಲಾಲಸೆಯಿಂದ ಕೊಚ್ಚಿ ಹೋಗದಂತೆ ಉಳಿಸಿಕೊಳ್ಳಲು, ಉತ್ತಮ ಸಂಸ್ಕೃತಿಯನ್ನು ರಕ್ಷಿಸಿಕೊಳ್ಳಲು ಮಹಿಳೆಯರು ಪ್ರಮುಖ ಪಾತ್ರ ವಹಿಸಲೇಬೇಕಾಗಿದೆ.

ಹೆಣ್ಣು - ಕಾವ್ಯ - ಒಂದು ಚಿಂತನ

—ಚಂದ್ರಕಲಾ ನಂದಾವರ

"ಕಾವ್ಯವನ್ನು ಕನ್ನಿಕೆ ಎಂದರು ಪಂಡಿತೋತ್ತಮರು. ಅಂತಹ ಕಾವ್ಯದ ಎತ್ತರ, ಬಿತ್ತರವನ್ನೂ, ಅನಿವಾರ್ಯವಾದ ಇಂದಿನ ಸ್ವರೂಪವನ್ನೂ ಕವಯಿತ್ರಿಯೇ ಆದವರೊಬ್ಬರು ಪ್ರಾಮಾಣಿಕವಾಗಿ ಪರಿಚಯಿಸುತ್ತಿದ್ದಾರೆ, ತಮ್ಮ ಮನೋಜ್ಞವಾದ ವಾಕ್ಸರಣಿಯಿಂದ."

—ಸಂ.

ಸಾಹಿತ್ಯ ಪ್ರಕಾರಗಳಲ್ಲಿ ಕಾವ್ಯ ಹೆಚ್ಚು ಆತ್ಮೀಯವಾದುದು, ಸೂಕ್ಷ್ಮ ಸಂವೇದನೆಯುಳ್ಳದ್ದು. ಆದ್ದರಿಂದ ತಮ್ಮ ಬೆಳವಣಿಗೆಯ ಒಂದು ವಯಸ್ಸಿನ, ಒಂದು ಮನಸ್ಸಿನ ಹಂತದಲ್ಲಿ ಪ್ರತಿಯೊಬ್ಬನೂ/ಳೂ ಭಾವಜೀವಿಯಾಗುತ್ತಾನೆ/ತ್ತಾಳೆ. ಕನಸುಣಿಯಾಗುತ್ತಾರೆ. ಆಗ ಕವಿತೆಗಳ ಸೃಷ್ಟಿಯಾಗುತ್ತದೆ. ಸ್ವಾಂತ ಸುಖಾಯ್ತು. ತನ್ನ ತೃಪ್ತಿಗಾಗಿ. ಹೀಗೆ ಕಾವ್ಯ ಲೋಕಕ್ಕೆ ಪ್ರವೇಶ ಪಡೆಯಬಹುದು.

ಇನ್ನೊಂದು ಹಂತ ಬದುಕನ್ನು ಅರ್ಥವಿಸುವಲ್ಲಿ, ಭ್ರಮೆ ಹಾಗೂ ವಾಸ್ತವಗಳ ನಡುವಿನ ಸಂಘರ್ಷದ ವೇಳೆ, ಬದುಕಿನ ಅನಿಶ್ಚಿತತೆಯ ಅರಿವಿನ ಸಂದರ್ಭಗಳಲ್ಲಿ ಏಕಾಂಗಿಯಾಗಿ ಕಾವ್ಯ ಲೋಕದಲ್ಲಿ ವಿಹರಿಸುವ ಸಾಧ್ಯತೆಗಳು ಇದೆ. ಇದು ಕೂಡಾ ಸ್ವಾಂತ ಸುಖಾಯ. ಅಂದರೆ ನನ್ನ ದೃಷ್ಟಿಯಲ್ಲಿ ಕಾವ್ಯದ ಹುಟ್ಟು ಸ್ವಂತ ಸುಖಕ್ಕಾಗಿಯೇ; ಆದರೆ ಅಷ್ಟಕ್ಕೇ ಅದು ನಿಲ್ಲದು. ಅದರ ಸಾರ್ಥಕತೆ ಸಹೃದಯಿ ಓದುಗರನ್ನು ತಲಪಿದಾಗ, ಆ ಸಾಧ್ಯತೆಗಳು ದೊರಕಿದಾಗ ನಮ್ಮದಾಗಿದ್ದ ಕಾವ್ಯಲೋಕಕ್ಕೆ ಉಳಿದವರ ಆಗಮನವಾಗುತ್ತದೆ. ನಮ್ಮದಾಗಿದ್ದುದು ಓದುಗರದ್ದಾಗುತ್ತದೆ, ವಿಮರ್ಶಕರದ್ದಾಗುತ್ತದೆ; ಸಾರ್ವಜನಿಕವಾಗುತ್ತದೆ. ಆಗ ಅದಕ್ಕೆ ಒಂದು ಸಾಮಾಜಿಕ ಅನಿವಾರ್ಯತೆ,

ನೈತಿಕ ಹೊಣೆಯೂ ಸೇರುತ್ತದೆ. ಆಗ ಸ್ವಾಂತ ಸುಖಾಯವೊಂದೇ ಕಾವ್ಯ ಸೃಷ್ಟಿಗೆ ಉದ್ದೇಶವಾಗಿ ಉಳಿಯದೆ ಇನ್ನೂ ಹಲವು ಉದ್ದೇಶಗಳು ಸೇರುತ್ತವೆ, ಸೇರಬೇಕಾಗುತ್ತವೆ.

ಇವುಗಳ ಜತೆಯಲ್ಲಿ ಕವಿಯಾಗಿ ಉಳಿಯುವ, ಬೆಳೆಯುವ ಬಗೆಗೆ ಯೋಚಿಸುವ ಸಂದರ್ಭಗಳಲ್ಲಿನ ಮಾತುಗಳು – ಹೊಸಗನ್ನಡ ಸಾಹಿತ್ಯದ ಬೆಳವಣಿಗೆ ಸಂದರ್ಭದಲ್ಲಿ ನವೋದಯ, ನವ್ಯ, ದಲಿತ, ಬಂಡಾಯ ಈ ಎಲ್ಲಾ ಸಾಹಿತ್ಯ ಸೃಷ್ಟಿಯ ಹಿನ್ನೆಲೆಯಲ್ಲೂ ಒಂದು ಚಳುವಳಿಯಂಥ ಕೆಲಸ ನಡೆದಿದೆ. ಕಾವ್ಯ ಸಿದ್ಧಾಂತಗಳು ತಿರುವು ಪಡೆದ ಸಂಕ್ರಮಣ ದಿನಗಳಲ್ಲಿ ಬೆರೆಯಬೇಕಾದ, ಕವಿಗಳಾಗಿ ಉಳಿಯಬೇಕಾದ ಉದಯೋನ್ಮುಖ ಎಳೆಯ ಕವಿಗಳಲ್ಲಿ ಗೊಂದಲ, ದ್ವಂದ್ವ, ಸಂಘರ್ಷ ಉಂಟಾಗಿದೆ. ಆದ್ದರಿಂದಲೇ ನವೋದಯದಿಂದ ನವ್ಯದೆಡೆಗೆ, ನವ್ಯದಿಂದ ಬಂಡಾಯದ ಕಡೆಗೆ ಬದಲಾದ ಕವಿ, ಸಾಹಿತಿಗಳನ್ನು ಗುರುತಿಸಬಲ್ಲೆವು. ಹೀಗೆ ಆಗುವುದು ಸಹಜವೂ ಹೌದು, ಅನಿವಾರ್ಯವೂ ಹೌದು. ಯಾಕೆಂದರೆ ಸಾಹಿತ್ಯ ಬದುಕಿಗೆ ಬದ್ಧವಾಗಿರುವುದು.

ಈಗ ಮಹಿಳೆಯರನ್ನೇ ಗಮನಿಸಿದಾಗ ನವೋದಯ ಕಾಲದಲ್ಲಿ ಕತೆಗಾರ್ತಿಯರು, ಕಾದಂಬರಿಗಾರ್ತಿಯರು ಸಿಗುತ್ತಾರೆ. ಕವಯಿತ್ರಿಯರು ಕಡಿಮೆ. ನವ್ಯ ಕಾಲಕ್ಕೂ ಬೆರಳೆಣಿಕೆಯ ಕವಯಿತ್ರಿಯರು ಕಾಣಿಸಿಕೊಂಡರು. ಆದರೆ ಬಂಡಾಯ, ದಲಿತ ಸಂದರ್ಭಗಳಲ್ಲಿ ಸಾಕಷ್ಟು ಮಹಿಳೆಯರು ತಮ್ಮನ್ನು ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಳ್ಳುವ ಸಾಧ್ಯತೆಯಾದುದನ್ನು ಕಾಣುತ್ತೇವೆ. ಬಹುಮುಖ್ಯವಾಗಿ ಕವಯಿತ್ರಿಯರು. ನವ್ಯದಲ್ಲಿ ಕವಯಿತ್ರಿಯರಾಗಿದ್ದವರೂ ಬಂಡಾಯದ ನೆಲೆಯನ್ನು ಸ್ವೀಕರಿಸಿಕೊಂಡುದು ಸ್ಪಷ್ಟವಾಗಿಯೇ ಇದೆ. ಅವರ ಕಾವ್ಯದಲ್ಲಿ ಪ್ರತಿಭಟನೆಯ ಧೋರಣೆ ಸ್ಪಷ್ಟವಾಗಿದೆ.

ಇನ್ನು ಇವು ಎಷ್ಟರ ಮಟ್ಟಿಗಿನ ಕಾವ್ಯ ಎನ್ನುವ ಚಿಂತನೆಯೂ ಅವಶ್ಯ. ಮಹಿಳೆಯ ಬರವಣಿಗೆಗೆ ಇರುವ ಸಮಯಾವಕಾಶ, ಸೌಲಭ್ಯ, ಅನುಭವಗಳ

ಕೊರತೆ ಎಂಬ ಬಾಹ್ಯ ಅಡ್ಡಿಗಳನ್ನು ಮೀರಿದರೂ ಆಕೆ ಬರವಣಿಗೆಯ ಸಂದರ್ಭದಲ್ಲಿ ಒಬ್ಬ ಕವಿಯಾಗಿ (ಹೆಣ್ಣು ಅಲ್ಲದ ಗಂಡೂ ಅಲ್ಲದ ಮಾನಸಿಕ ಸ್ಥಿತಿ) ಇರುವುದಕ್ಕೆ ಎಷ್ಟು ಸಾಧ್ಯ? ಇನ್ನು ಕವಿಯಾಗಿ ಪ್ರಾಮಾಣಿಕತೆ, ಹೊಣೆ, ಸಾಮಾಜಿಕ ಕಳಕಳಿ, ಮಾನವೀಯತೆ, ಕಾವ್ಯ, ಚೆಲುವು ಇವು ನಮ್ಮ ಬಂಡವಾಳವಾದಾಗ ಬಹುಶಃ ನಮ್ಮ ಕಾವ್ಯ ಹೆಣ್ಣು ಎಂದು ಅನ್ನಿಸಿದರೂ ಕಾವ್ಯವಾಗಿಯೇ ಉಳಿಯುತ್ತದೆ. ಕಾವ್ಯದ ಪಂಥಗಳು ಯಾವುದೇ ಬರಲಿ, ಯಾವುದೇ ಹೋಗಲಿ. ನಿಜವಾದ ಪ್ರಾಮಾಣಿಕ ಅನುಭವಗಳಿಂದ, ಭಾವ ತೀವ್ರತೆಯಿಂದ, ಸ್ವಾಂತ ಸುಖಾಯವಾಗಿ ಹುಟ್ಟಿಕೊಂಡ ಕವಿತೆಗಳೇ ಖಂಡಿತವಾಗಿಯೂ ಮಾನವೀಯ ಮೌಲ್ಯವನ್ನು ಬಿಂಬಿಸುತ್ತವೆ. ಇದು ಸಹೃದಯವನ್ನು ತಟ್ಟುತ್ತದೆ.

ಇನ್ನು ಪುರುಷ ವಿಮರ್ಶಕರ ದೃಷ್ಟಿಯಿಂದ ನಮ್ಮ ಸಾಹಿತ್ಯದ ವಿವೇಚನೆ ಮಾಡಿದಾಗ, ಮಹಿಳಾ ಸಾಹಿತ್ಯದಲ್ಲಿ ಹೆಣ್ತನವಿರಬೇಕು ಅನ್ನುತ್ತಾರೆ. ಇನ್ನು ಕೆಲ ವಿಮರ್ಶಕರು ಹೆಣ್ಣಿನ ಅನುಭವ ಕೊರತೆಯನ್ನೇ ಎತ್ತಿ ಹೇಳುತ್ತಾರೆ. ಇನ್ನೊಂದೆಡೆ ನೀವು ಪುರುಷರನ್ನು ಅನುಕರಿಸುತ್ತೀರಿ, ಪುರುಷ ರಂತೆ ಬರೆಯಬೇಡಿ ಅನ್ನುತ್ತಾರೆ. ಒಟ್ಟಿನಲ್ಲಿ ಬರೆವ ಮಹಿಳೆಗೆ ತನ್ನ ಗೊಂದಲಗಳೇ ಸಾಕಷ್ಟು ಇರುತ್ತಾ ಈ ವಿಮರ್ಶಕರು ಉಂಟುಮಾಡುವ ಗೊಂದಲಗಳು ಇನ್ನಷ್ಟು. ಇವನ್ನೆಲ್ಲ ಮರೆತು ನೀವು ಬರೆಯುತ್ತಿರುವುದು ಯಾಕೆ? ಯಾರಿಗೆ? ಮತ್ತು ಹೇಗೆ? ಎಂಬ ಪ್ರಶ್ನೆಗಳನ್ನು ಹಾಕುತ್ತಾ ನಾವೇ ವಿಮರ್ಶಕರಾಗಿ ನಮ್ಮನ್ನು ನಾವೇ ಶೋಧನೆಗೆ ಒಳಪಡಿಸಿಕೊಂಡಾಗ ನಮ್ಮ ಬರವಣಿಗೆಗೆ ಬೆಲೆ ಮಾತ್ರವಲ್ಲ, ನಿರೀಕ್ಷಿಸುವ ಫಲಿತಾಂಶವೂ ಸಾಧ್ಯ. ಆದರೆ ಒಂದು ಕಿವಿಮಾತು. ಮಹಿಳೆ ತನ್ನ ಬಗ್ಗೆ ತಾನೇ ಮರುಕ ಪಡುತ್ತಾ ಕುಳಿತಿದ್ದರೆ, ಪುರುಷರಿಂದ ಸಾಂತ್ವನ ಬಯಸುತ್ತಾ ಇದ್ದರೆ ಆಕೆ ಏನನ್ನೂ ಸಾಧಿಸಲಾರಳು. ಆಕೆ ತನ್ನನ್ನು ಬದುಕಿನ, ಸಮಾಜದ ಅವಿಭಾಜ್ಯ ಅಂಗವೆಂದು ಭಾವಿಸಿ ತನ್ನ ಅನುಭವಗಳನ್ನು ಅಭಿವ್ಯಕ್ತಿಸುವಲ್ಲಿ ನಿರ್ಭೀತಳಾಗಬೇಕು. ಹೇಳಬೇಕಾದ್ದನ್ನು ಹೇಳದೆ ಉಳಿಯುವ ಆತ್ಮ ವಂಚನೆಯಿಂದಲೇ ಹೆಣ್ಣಿನ ಶೋಷಣೆ ಮುಂದುವರಿಯುತ್ತಲೇ ಇದೆ. ಆದ್ದರಿಂದಲೇ ಹೆಣ್ಣು

ಪ್ರಾಮಾಣಿಕವಾಗಿ ಮಾತನಾಡಿದಾಗ ಅದು ಆರ್ಭಟ, ರೋಷಗಳಾಗಬಹುದು. ಆದರೆ ಅದು ಕಾವ್ಯದ ಹಾದಿಯಲ್ಲಿ ಸಾಗಬೇಕಾದ್ದರಿಂದ ಕಾವ್ಯದ ಹೆಣ್ತನವನ್ನು ಅದು ಪಡೆಯುವಲ್ಲಿ ಆರ್ದ್ರತೆ, ಮಾರ್ದವತೆಗಳು ಮುಂದಾಗಬೇಕು. ಕವಯತ್ರಿಯರ ಕವಿತೆಗಳು ಬದುಕಿನ ಶಾಶ್ವತ ಮೌಲ್ಯಗಳತ್ತ ಚಿಂತನೆ ಮಾಡುವಂತೆ ತಮ್ಮ ಅನುಭವಗಳನ್ನು ದುಡಿಸಿಕೊಳ್ಳಬೇಕು. ಅಳುಕು ಅಂಜಿಕೆಗಳಿಲ್ಲದ, ತೆರೆದ ಮನಸ್ಸಿನ ಆಕೆಯ ಅನುಭವಗಳು ಮಾನವೀಯ ಕಳಕಳಿಯೊಂದಿಗೆ ಬೆರೆತಾಗ ಕಾವ್ಯ ಸಾರ್ವಕಾಲಿಕ ಕಾವ್ಯ ಆಗಬಲ್ಲುದು. ಇದು ನಾವು ಸಾಗಬೇಕಾದ ಕಾವ್ಯದ ಬಟ್ಟೆ! ನೇಯಬೇಕಾದ ಕಾವ್ಯ ಬಟ್ಟೆ!

ಫ್ಯಾಷನ್ ಪ್ರಭಾವ

—'ಸಹನಾ'

"ಆಧುನಿಕತೆಯು ಫ್ಯಾಷನ್ ಜಗತ್ತು ಸಾಮಾನ್ಯ ಜನತೆಯೆದುರು ಮಾಯಾಜಾಲ ಹೊಡ್ಡಿ ಆಕರ್ಷಿಸುತ್ತಿರುವ ಕಾಲವಿದು. ಆದರೆ ಹುಲಿಯಂತೆ ಆಗಲೆಳಸಿ ಮೈಸುಟ್ಟುಕೊಂಡ ನರಿಗಳಾಗುವುದು ಯಾರಿಗೂ ಕ್ಷೇಮವಲ್ಲ ತಾನೆ? ಮೈಮುಚ್ಚುವುದು, ಮನಕ್ಕೆ ಹಿತವಾಗಿರುವುದು, ನೋಟಕ್ಕೆ ಮೆಚ್ಚುಗೆಯೆನಿಸುವುದಷ್ಟೇ ಫ್ಯಾಷನ್‌ನ ಗುರಿಯಾಗಿರಲಿ, ಹೊರತು ಬಿಚ್ಚಿತೋರಿಸಿ ಹುಚ್ಚೆಬ್ಬಿಸುವ ಬಣ್ಣದ ವೇಷ ತೊಟ್ಟಾಗ ನೋಟಕರ ಕಣ್ಣೆನೆದುರು ಕೀಳಾಗಿ ಕಾಣಿಸುವುದು ಖಂಡಿತ.

—ಸಂ.

ಇಂದಿನ ಆಧುನಿಕ ಯುಗದಲ್ಲಿ ಜನರು ನವನಾಗರಿಕತೆಯತ್ತ ಸಾಗುವ ಭರದಲ್ಲಿ 'ಫ್ಯಾಷನ್ ಪ್ರಭಾವ'ಗಳಿಗೂ ಸುಲಭವಾಗಿ ಆಕರ್ಷಿತರಾಗುವುದನ್ನು ನಾವು ಕಾಣುತ್ತಿದ್ದೇವೆ. ಹೀಗೆ ಬದಲಾಗುತ್ತಾ ಬರುವ ಫ್ಯಾಷನ್‌ಗಳು ಪುರುಷರಿಗಿಂತಲೂ ಹೆಚ್ಚು ಮಹಿಳೆಯರನ್ನೇ ಮರುಳುಗೊಳಿಸುತ್ತಿರುವುದೂ ಸಾಮಾನ್ಯ ಸಂಗತಿ. ಹೆಚ್ಚಾಗಿ ತಾರುಣ್ಯದಲ್ಲಿ ತಾವು ತುಂಬ ಚೆಲುವೆಯರಾಗಿ ಚಿತ್ತಾಕರ್ಷಕವಾಗಿ ಕಾಣಿಸಬೇಕು ಎನ್ನುವ ಚಪಲ ಅನೇಕ ಯುವತಿಯರಿಗಿರುತ್ತದೆ. ಆದರೆ ಇತ್ತೀಚೆಗೆ ಇದು ಎಷ್ಟು ಸಾಂಕ್ರಾಮಿಕ ಜಾಡ್ಯವಾಗಿ ಹರಡಿದೆಯೆಂದರೆ ಎಳೆಯ ಹುಡುಗಿಯರಿಂದ ಅರುವತ್ತರ ವೃದ್ಧರವರೆಗೂ ಫ್ಯಾಷನ್‌ನ ಹುಚ್ಚಿಗೆ ಬಲಿಯಾಗುತ್ತಿದ್ದಾರೆ. ಇಂದು ಅತ್ಯಂತ ನವೀನ ಎನಿಸಿದ ಫ್ಯಾಷನ್ ಕೆಲವೇ ದಿನಗಳಲ್ಲಿ ಹಳೆಯದಾಗುತ್ತದೆ. ಹಳೆಯದೆನಿಸಿದ್ದು ಸ್ವಲ್ಪ ಸಮಯದ ಬಳಿಕ ಹೊಸತೆನಿಸುವುದು ಈ ಫ್ಯಾಷನ್‌ಗಳ ವೈಶಿಷ್ಟ್ಯ. ಇದ್ದಂತೆಯೇ ಇದ್ದರೆ ಅದನ್ನು ಫ್ಯಾಷನ್ ಎನ್ನಲಾದೀತೇ? ಮೊದಲು ಕಾಣುವ ಮುಖಾಲಂಕಾರದಿಂದ ಕಾಲಿನ ಚಪ್ಪಲಿಯವರೆಗೂ ಹೊಸತನವನ್ನು

ಪಯೋಗಿಸಿ ಕಂಡವರ ಗಮನ ಸೆಳೆಯುವುದು ಫ್ಯಾಷನ್‌ಗಳ ಪ್ರಾಮುಖ್ಯ ಗುಣ ವಿಶೇಷತೆ ಎನ್ನಬಹುದು.

ಸಿಂಗರಿಸಿಕೊಳ್ಳುವುದರಲ್ಲಿ ಹೆಣ್ಣಿನದೇ ಹೆಚ್ಚುಗಾರಿಕೆ ಎನ್ನುವುದು ಬಲು ಹಿಂದಿನಿಂದಲೂ ಎಲ್ಲರೂ ತಿಳಿದಿರುವ ವಿಚಾರ. ಹೀಗೆ ಸೌಂದರ್ಯವನ್ನು ಹೆಚ್ಚಿಸುವ ಆಕರ್ಷಕವೆನಿಸುವ ಅಲಂಕಾರ ಮಾಡಿಕೊಳ್ಳುವ ಆಸೆ ಸ್ತ್ರೀ ಸಹಜ ಗುಣವೆಂದೇ ಹೇಳಬಹುದು. ಆದರೆ ಇಲ್ಲಿ ನಾವು ಅರಿತಿರಬೇಕಾದ ಒಂದು ಬಹುಮುಖ್ಯ ವಿಚಾರ ಎಂದರೆ ಯಾವುದೂ ಮಿತವಾಗಿದ್ದರೆ ಹಿತ, ಅತಿಯಾಗಿ ಬಿಟ್ಟರೆ ಅಹಿತ ಮಾತ್ರವಲ್ಲ, ಅಸಹ್ಯ. ಈ ವಿಚಾರ ಫ್ಯಾಷನ್ ವಿಷಯಕ್ಕೆ ಹೆಚ್ಚು ಅನ್ವಯಿಸುತ್ತದೆ. ನೋಟಕರ ಕಣ್ಣಿಗೆ ಆಕರ್ಷಕವಾಗಿ ಕಾಣಿಸಬೇಕೆಂಬ ಹಂಬಲದಿಂದ ಮಾಡಿಕೊಂಡ ಅಲಂಕಾರ ತಿರಸ್ಕಾರ ತರುವಂತಿದ್ದರೆ ಯಾವ ಮಹಿಳೆಗೂ ಗೌರವವಲ್ಲ, ಅಲ್ಲವೇ? ಮಾತ್ರವಲ್ಲ, ಯಾವ ವಯಸ್ಸಿಗೆ ಯಾವ ರೀತಿಯ ವೇಷ ಭೂಷಣಗಳು ದೇಹಕ್ಕೆ ಹೊಂದಿಕೆಯಾಗಿ ನೋಡುವವರ ದೃಷ್ಟಿಗೂ ಹಿತವಾಗಿ ಕಂಡುಬರುವುದೋ ಅಂತಹ ಅಲಂಕಾರಗಳಿಗೇ ಮಹತ್ವವನ್ನೀಯಬೇಕು. ಕಾಲೇಜು ಕನ್ಯೆಯರಿಂದ ಮುದುಕರವರೆಗೂ ಒಂದೇ ವಿಧದ ಫ್ಯಾಷನ್ ಶೋಭೆಯನ್ನೀಯಲಾರದು, ಅಲ್ಲವೇ? ಉದಾಹರಣೆಗೆ ಇತ್ತೀಚೆಗೆ ಸಾಂಕ್ರಾಮಿಕವಾಗಿ ಹರಡಿರುವ 'ಚೂಡಿದಾರ್' ಮತ್ತು 'ನೈಟಿ'ಗಳನ್ನೇ ಗಮನಿಸೋಣ. ಇಪ್ಪತ್ತೈದರೊಳಗಿನ ತೆಳ್ಳಗಿನ ಬಳುಕುವ ದೇಹದ ತರುಣಿಯರಿಗೆ ಈ ಉಡುಪು ಅಂದವಾಗಿ ಕಾಣಿಸಬಹುದು. ತುಂಬ ದಪ್ಪ ಶರೀರದ ನಲುವತ್ತರವರೆಗಿನ ವಿವಾಹಿತೆಯರೂ ಫ್ಯಾಷನ್ ಪ್ರಭಾವಕ್ಕೆ ಬಲಿಯಾಗಿ ಈ ರೀತಿಯ ವೇಷ ಧರಿಸಿದರೆ ಅಂದ ಹೆಚ್ಚುತ್ತದೆಯೇ? ನೋಡುವವರಿಗೆ ಜಿಗುಪ್ಸೆ ಬಾರದಿರುತ್ತದೆಯೇ? ಹಾಗೆಂದು ಯಾರೂ ಯಾರ ಉಡುಪಿನ ಬಗ್ಗೆಯೂ ಪ್ರತ್ಯಕ್ಷವಾಗಿ ಹೇಳಲಾರರು ಎಂದ ಮಾತ್ರಕ್ಕೆ ಇಂತಹ ವಿಚಿತ್ರ ವೇಷಗಳಿಂದ ನಾವು ಅತಿ ಮುಂದುವರಿದ ನವನಾಗರಿಕರೆಂದು ಹೆಮ್ಮೆ ಪಟ್ಟುಕೊಳ್ಳುವುದು ಮಾತ್ರ ವಿವೇಕವೆನಿಸಲಾರದು. ಇನ್ನು ಹೆಸರೇ ಹೇಳುವಂತೆ ರಾತ್ರಿಯುಡುಗೆ ಎನಿಸಿಸಿರುವ 'ನೈಟಿ'ಗಳು. ಬಹುಶಃ ಆಧುನಿಕ ಯುಗದ ನಾಜೂಕಿನ ಯುವತಿ

ಯರಿಗೆ ಐದಾರು ಮೀಟರ್‌ಗಳ ಸೀರೆ ಸುತ್ತಿಕೊಂಡು ನಿದ್ರಿಸಲು ತೊಂದರೆ ಯಾಗಬಹುದೆಂದು ಈ ಉಡುಪು ರೂಢಿಯಲ್ಲಿರಬಹುದು. ಅಲ್ಲದೆ ನಿದ್ದೆಯ ಹೊತ್ತಿನಲ್ಲಿ ಸಡಿಲವಾದ ಉಡುಪು ಹಿತಕಾರಿಯೂ ಹೌದು. ಆದರೆ ನಾವಿಂದು ಕಾಣುತ್ತಿರುವುದೇನು? ಹಳ್ಳಿಯಿಂದ ಪಟ್ಟಣದವರೆಗೆ ಮಕ್ಕಳಿಂದ ಮುದುಕಿಯರವರೆಗೆ ಮುಂಜಾನೆಯಿಂದ ರಾತ್ರಿಯವರೆಗೆ ಈ 'ವೇಷ' ಎಲ್ಲೆಂದರಲ್ಲಿ ತಾನೇ ತಾನಾಗಿ ವಿಜೃಂಭಿಸುತ್ತಿರುತ್ತದೆ. ಕೆಲವು ವರ್ಷಗಳ ಹಿಂದೆ ತೀರಾ ಹಿಂದುಳಿದ ಜನಾಂಗದವರು ಸೆರಗಿಲ್ಲದ ಉಡುಪನ್ನು ಧರಿಸು ತ್ತಿದ್ದುದನ್ನು ಕಂಡು ಮುಂದುವರಿದವರು ಕನಿಕರ ಇಲ್ಲವೇ ತಿರಸ್ಕಾರ ತೋರಿದ್ದಿರಬಹುದು. ಇತ್ತೀಚೆಗೆ ಅವರೆಲ್ಲ ಸುಧಾರಿಸಿದ್ದಾರೆ. ಬದಲಾಗಿ ಮುಂದರಿದ ನವನಾಗರಿಕರು ಪರೋಕ್ಷವಾಗಿ ಅವರನ್ನನುಕರಿಸಲು ಯತ್ನಿಸು ತ್ತಿರುವುದು ಬಲು ಶೋಚನೀಯ ಸಂಗತಿಯಲ್ಲವೇ? ಆಧುನಿಕತೆಯ ತುಟ್ಟ ತುದಿಯನ್ನೇರುವ ಭರದಲ್ಲಿ ಅನಾಗರಿಕತೆಯನ್ನನುಸರಿಸುವ ಸ್ವಭಾವ ಮಹಿಳೆ ಯರಿಗೆ ಮಾನ್ಯತೆಯನ್ನೀಯಲಾರದು. ಯಾವ ಹೊಸ ಫ್ಯಾಷನ್‌ಗಳೇ ಆಗಿರಲಿ, ಅನುಸರಿಸುವವರ ಆಕರ್ಷಕ ವ್ಯಕ್ತಿತ್ವವನ್ನೂ ಗೌರವವನ್ನೂ ಹೆಚ್ಚಿಸುವಂತಿರ ಬೇಕು. ಸರಿಯಾಗಿ ಯೋಚಿಸಿದರೆ ಇಂದು ಅನೇಕ ಕಡೆ ಹುಡುಗಿಯರನ್ನು ಚುಡಾಯಿಸಲು ಅವರ ವಿಚಿತ್ರ ವೇಷ ಮತ್ತು ಅತಿರೇಕದ ನಡೆ, ನುಡಿಗಳೂ ಕಾರಣವಾಗಿವೆ. ನಿಜ ಹೇಳಬೇಕೆಂದರೆ ಸ್ತ್ರೀಯರ ನಿಜವಾದ ಸೌಂದರ್ಯ ಅವರ ಸರಳ ಸಾದಾ ಅಲಂಕಾರಗಳೊಂದಿಗೆ ಉತ್ತಮ ವರ್ತನೆಯೂ ಸೇರಿ ಕೊಂಡಿದ್ದರೆ ಹಿತವಾಗಿ ಕಾಣುತ್ತದೆ. ಆಡಂಬರ, ಅಲಂಕಾರ, ಅನುಕರಣೆ ಇತ್ಯಾದಿ ಗುಣಗಳು ಪುರುಷರಿಗಿಂತ ಮಹಿಳೆಯರಲ್ಲಿಯೇ ಪ್ರಬಲವಾಗಿರುತ್ತವೆ ಎಂದರೆ ಅತಿಶಯೋಕ್ತಿಯಲ್ಲ. ನೆರಮನೆಯವರು ಕೊಂಡುಕೊಂಡ ಬೆಲೆ ಬಾಳುವ ವಸ್ತುಗಳು, ಶೃಂಗಾರ ಸಾಮಗ್ರಿಗಳು ತಮಗೂ ಬೇಕೆಂದು ಬಯ ಸುವ ಮಹಿಳಾಮಣಿಯರ ಸಂಖ್ಯೆ ನಮ್ಮಲ್ಲಿ ಅಪಾರವಾಗಿದೆ. ಅಷ್ಟೇ ಅಲ್ಲದೆ ಇಂದಿನ ಸಿನಿಮಾ ಜಗತ್ತಿನ ವಿಚಿತ್ರ ವಿಕಾರ ವೇಷ ಭೂಷಣಗಳ ಅಂಧಾನುಕರಣೆಯೂ ಕೆಲವರಲ್ಲಿದೆ. ಇಲ್ಲಿ ಒಂದು ವಿಚಾರವನ್ನು ಮಾತ್ರ ಎಲ್ಲ ಸ್ತ್ರೀಯರೂ ನೆನಪಿನಲ್ಲಿಟ್ಟುಕೊಳ್ಳಬೇಕು. ತಮ್ಮ ವ್ಯಕ್ತಿತ್ವಕ್ಕೆ ಕಳೆಯ

ನ್ನೀಯುವ, ಘನತೆಯನ್ನು ಹೆಚ್ಚಿಸುವ ಉಡುಗೆ ತೊಡುಗೆಗಳೇ ಪ್ರಾಮುಖ್ಯ ವಲ್ಲದೆ ಕಂಡವರ ಕಣ್ಣು ಸೆಳೆಯುವ ಪ್ರದರ್ಶನಕ್ಕೆ ಮೀಸಲಾಗಬಾರದು. ಎಲ್ಲರೂ ತನ್ನನ್ನು ನೋಡಿ ಮೆಚ್ಚಲಿ, ಹೊಗಳಲಿ ಎನ್ನುವ ಹುಚ್ಚುತನ ಶ್ರೇಯಸ್ಕರವಲ್ಲ. ಇಂದಿಗೂ ಎಷ್ಟೋ ಬುದ್ಧಿಜೀವಿಗಳು, ಮೇಧಾವಿಗಳು, ಪ್ರತಿಭಾ ಸಂಪನ್ನರು ಬಾಹ್ಯ ಅಲಂಕಾರಕ್ಕೆ ಮಹತ್ವವನ್ನೀಯುವುದಿಲ್ಲ. ಏಕೆಂದರೆ ಅವರಿಗೆ ಈ ಟೊಳ್ಳು ಆಡಂಬರಕ್ಕಿಂತ ಅಂತರಂಗದ ಶಕ್ತಿಯೇ ಪ್ರಾಮುಖ್ಯವೆನಿಸುತ್ತದೆ. ಪುರುಷರು ಎಷ್ಟೇ ಫ್ಯಾಷನ್ ಪ್ರಿಯರಾದರೂ ಈ ವಿಷಯದಲ್ಲಿ ಸ್ತ್ರೀಯರೊಡನೆ ಸ್ಪರ್ಧಿಸಲಾರರು. ಅಲ್ಲದೆ ಅವರು ಮಹಿಳೆಯರಷ್ಟು ಶೀಘ್ರವಾಗಿ ಆಗಾಗ ಬದಲಾಗುವುದೂ ಇಲ್ಲ. ಹಾಗಾಗಿದ್ದರೆ ಮಹಿಳೆಯರು ಪ್ಯಾಂಟ್ ಧರಿಸುವಾಗ ಅವರು ಸೀರೆಯುಡುವ ಯೋಚನೆ ಮಾಡುತ್ತಿದ್ದರೇನೋ, ಅಲ್ಲವೇ? ಈ ವಿಚಾರದಲ್ಲಿ ಪುರುಷರು ಅಭಿನಂದನಾರ್ಹರು.

ಎಲ್ಲವನ್ನೂ ಓದಿದ ಮೇಲೆ ನಮ್ಮ ಸ್ತ್ರೀಯರೆಲ್ಲರೂ ಫ್ಯಾಷನ್‌ಗಾಗಿಯೇ ಬದುಕುವವರು ಎಂದು ಚಿಂತಿಸುವ ಅಗತ್ಯ ಖಂಡಿತ ಇಲ್ಲ. ಆದರೂ ಅಂತಹ ಮಹಿಳೆಯರ ಸಂಖ್ಯೆ ಹೆಚ್ಚುತ್ತಿರುವುದರ ಬಗ್ಗೆ ತುಸು ಯೋಚಿಸಬೇಕಾಗಿದೆ. ಇದಕ್ಕೆ ಕಾರಣಗಳು ಹಲವು ಇರಬಹುದು. ಪತ್ರಿಕೆಗಳಲ್ಲಿ ಸ್ತ್ರೀಯರ ಅಲಂಕಾರಗಳ ಬಗ್ಗೆ ಕೆಲವು ಪುಟಗಳನ್ನು ಮೀಸಲಾಗಿರಿಸುವುದು, ಬರಿಯ ಬಾಹ್ಯಾಡಂಬರಕ್ಕೆ ನಮ್ಮ ಸಮಾಜದಲ್ಲಿ ಹೆಚ್ಚಿನ ಮನ್ನಣೆಯನ್ನೀಯುವುದು, ವಿಚಿತ್ರ ವೇಷದ ನಟಿಯರ ಅನುಕರಣೆಯ ಯತ್ನ ಇತ್ಯಾದಿ ಕಾರಣಗಳಲ್ಲದೆ ಸ್ತ್ರೀ ಎಂದರೆ ತನ್ನ ಬೆಡಗು ಬಿನ್ನಾಣಗಳಿಂದ ಪುರುಷನನ್ನೊಲಿಸಿಕೊಳ್ಳುವವಳು ಎನ್ನುವ ಸಂಕುಚಿತ ಮನೋಭಾವವೂ ಕಾರಣವಾಗಿದೆ. ಮಹಿಳೆಯರ ಇಂತಹ ಮನೋಭಾವ ಬದಲಾಗಬೇಕು. ತನ್ನ ಬೌದ್ಧಿಕ ಶಕ್ತಿ, ವಿದ್ಯೆ, ಪ್ರತಿಭೆಗಳಿಂದ ಸಮಾಜದಲ್ಲಿ ಸಮಾನ ಸ್ಥಾನ ಪಡೆದು ಗೌರವ, ಘನತೆ, ಸ್ವಾಭಿಮಾನದಿಂದ ಬದುಕುವ ಛಲ, ಬಲ ಬೆಳೆಸಿಕೊಳ್ಳಬೇಕು. ಇದನ್ನು

ಇಂದಿನ ಮಹಿಳೆಯರು ಚೆನ್ನಾಗಿ ಅರಿತು ಅತಿಯಾದ ಅಲಂಕಾರ, ವಿಚಿತ್ರ ವೇಷ ಭೂಷಣಗಳಿಗೆ ಮರುಳಾಗದೆ ತಮ್ಮ ಬದುಕನ್ನು ಉತ್ತಮಗೊಳಿಸುವ ವಿಚಾರವಂತಿಕೆಯನ್ನು ಬೆಳೆಸಿಕೊಂಡು ನಾರಿಯರ ಗೌರವವನ್ನು ಹೆಚ್ಚಿಸ ಬೇಕು; ಆಗ ಮಾತ್ರ ಮಹಿಳೆಯರ ಬಾಳು ಸಾರ್ಥಕವೆನಿಸೀತು.

ಸಾಹಿತ್ಯ ಮತ್ತು ಸಾಮಾನ್ಯ ಜನಜೀವನ

—ಇಂದಿರಾ ಹಾಲಂಬಿ

'ಸಾಹಿತ್ಯ' ಎಂದೊಡನೆ 'ಇದು ನಮಗಲ್ಲ' ಎನ್ನುವುದು ಸರಿಯೆ? ಸಾಹಿತ್ಯವೇ ಬದುಕಿನಲ್ಲಿ ಹಾಸುಹೊಕ್ಕಾಗಿರುವುದನ್ನು ನಾವೇಕೆ ಅರಿಯುವುದಿಲ್ಲ? ಓದುವ ಆಸಕ್ತಿ, ಅಭ್ಯಾಸ ಎಳವೆಯಿಂದಲೇ ಮೊಳೆತು, ಬೆಳೆದು ಬಾಳನ್ನು ಬೆಳಗಿಸುವಂತಾಗಬೇಕು. ಸಾಹಿತ್ಯ ಒದಗಿಸುವ ಆತ್ಮ ಸಂತೋಷಕ್ಕೆ ಯಾವ ಸಂಪತ್ತೂ ಸಾಟಿಯಲ್ಲ. —ಸಂ.

"ಸಾಹಿತ್ಯವನ್ನು ಜನಸಾಮಾನ್ಯರಿಗೆ ತಲುಪಿಸುವುದು ಹೇಗೆ?" ಈ ಪ್ರಶ್ನೆ ಎಂದೆಂದಿಗೂ ಪ್ರಶ್ನೆಯಾಗಿಯೇ ಉಳಿದೀತೆ? ಎಂಬ ಭೀತಿ ಕೆಲವರನ್ನಾದರೂ ಕಾಡಿರಬೇಕು. ಇದಕ್ಕೆ ಉತ್ತರಿಸಲು ಎಷ್ಟೋ ಮಂದಿ ಚಿಂತನೆಯನ್ನೂ ನಡೆಸಿರಬೇಕು. ಸಾಹಿತ್ಯ ಅಂದರೆ ಸಹಿತ ಇರಬೇಕಾದ್ದು, ಹಿತವನ್ನು ಉಂಟು ಮಾಡುವಂಥದ್ದು,-ಮನುಷ್ಯನ ಮನಸ್ಸನ್ನು ಅರಳಿಸಲು, ಮನುಷ್ಯತ್ವವನ್ನು ಎಚ್ಚರಿಸಲು ಕಾರಣವಾಗುವಂತಹುದು, – ಇಂಥದ್ದು ಮನುಷ್ಯನಿಗೆ ಬೇಡವೆ? – ಬೇಕು. ಆದರೆ ಸಾಮಾನ್ಯವಾಗಿ ಯಾರಾದರೊಬ್ಬರು ಪರಿಚಿತರೊಡನೆ ಮಾತನಾಡುವಾಗ ಒಂದು ಪುಸ್ತಕ ತೋರಿಸಿ "ನೋಡಿ! ಈ ಪುಸ್ತಕ ಕೊಂಡುಕೊಳ್ತೀರಾ?... ತುಂಬಾ ಒಳ್ಳೆಯದಿದೆ, ...ಇಂಥ ವಿಷಯಗಳೆಲ್ಲ ಇದರಲ್ಲಿವೆ...ಬರೆದವರು ಹೆಸರಾಂತ ಸಾಹಿತಿ..." ಎಂದರೆ ಪುಸ್ತಕವನ್ನು ನಿಧಾನವಾಗಿ ತೆಗೆದುಕೊಂಡು ಕೈಯಲ್ಲಿ ಹಿಡಿದು, ಅದೇನೋ ಮುಟ್ಟಬಾರದ ವಸ್ತುವನ್ನು ಹಿಡಿದುಕೊಂಡಿರುವಂತೆ ಮುಖಭಾವ ತೋರಿ, ಆಚೆ ಈಚೆ ತಿರುಗಿಸಿ, ಒಂದೆರಡು ಹಾಳೆ ಮಗುಚಿ–"ಎಷ್ಟು ಇದಕ್ಕೆ?" ಎನ್ನುತ್ತಾರೆ. "ಬರಿಯ ಹದಿನೈದು ರೂಪಾಯಿ" ಎಂದಾಗ "ಈಗ ಬೇಡ. ಇನ್ನೊಮ್ಮೆ ಯಾವಾಗಲಾದರೂ ನೋಡೋಣ" ಎಂದು ಉತ್ತರಿಸುತ್ತಾ ಪುಸ್ತಕ ಹಿಂದಿರುಗಿಸಿ ಕೈತೊಳೆದುಕೊಂಡವರಂತೆ ಕೃತಾರ್ಥ

ರಾಗುವವರನ್ನು ನಾವು ಹೆಚ್ಚಿನ ಸಂಖ್ಯೆಯಲ್ಲಿ ಕಾಣುತ್ತೇವೆ. ಪುಸ್ತಕಗಳು ಬೇಡ ಎನ್ನಲು ಅವರು ಕೊಡುವ ಕಾರಣಗಳು ಹಲವು. "ಓದಲು ಸಮಯ ವಿಲ್ಲ,......ನಮ್ಮಲ್ಲಿ ಮಕ್ಕಳೆಲ್ಲಾ ಇಂಗ್ಲಿಷ್ ಮೀಡಿಯಂ, ಕನ್ನಡ ಓದುವವರೇ ಇಲ್ಲ...ನಮಲ್ಲಿ ಪುಸ್ತಕ ಇಡಲು ಜಾಗವೇ ಇಲ್ಲ, ತುಂಬಾ ಪುಸ್ತಕಗಳಿವೆ... ಅಯ್ಯೋ! ...ದಿನನಿತ್ಯದ ಪತ್ರಿಕೆ, ವಾರಪತ್ರಿಕೆ ಓದಲು ಕೂಡಾ ಬಿಡುವಿಲ್ಲ... ಪುಸ್ತಕದ ಬೆಲೆ ಹೆಚ್ಚಾಗಿದೆ. ಪುಸ್ತಕ ನನ್ನ ಬಳಿ ಉಳಿಯುವುದೇ ಇಲ್ಲ...ಯಾರಾದರೂ ಕೊಂಡು ಹೋಗಿಬಿಡ್ತಾರೆ. ನಮ್ಮಲ್ಲಿ ಮಕ್ಕಳು ಹಾಳು ಮಾಡ್ತವೆ, ಬೇಕಾದಾಗ ಲೈಬ್ರೆರಿಯಿಂದ ಕತೆ, ಕಾದಂಬರಿ ತರ್ತೇವೆ,... ಈ ಪುಸ್ತಕ ಬೇಡ..."ಇತ್ಯಾದಿ...ಇತ್ಯಾದಿ. ಈ ಉತ್ತರಗಳಲ್ಲಿ ಸತ್ಯಾಂಶ ಎಷ್ಟು? ಏಕೆ? ಯೋಚಿಸಬೇಕಾದ್ದೇ.

ಸಮಯವಿಲ್ಲ ಎನ್ನುವವರೇ ದಿನದ ಎಷ್ಟೋ ಸಮಯವನ್ನು ಸುಮ್ಮನೆ ಕಳೆಯುತ್ತಿರುತ್ತಾರೆನ್ನುವ ವಿಷಯ ನಿರ್ವಿವಾದ. ಬರಿಯ ಮಾತು ಕತೆ, –ಅದರಲ್ಲೂ ಕಂಡ ಕಂಡವರ ಕುರಿತಾಗಿ ಆಡಿಕೊಳ್ಳುವ ಅತಿರೇಕ ಮಾತುಗಳಿಗೆ ಸಮಯ ಸಿಗುವಾಗ?.. ಹಣವಿಲ್ಲ, ಬೆಲೆ ಹೆಚ್ಚು, ಇದು ಕೂಡಾ ಪೂರ್ತಿ ನಿಜವಲ್ಲ. ಬೆಲೆ ಈಗ ಯಾವುದಕ್ಕೆ ಕಡಿಮೆ ಇದೆ? ಜನ ಈಗ ಕೊಂಡು ಕೊಳ್ಳುವುದನ್ನು ಕಡಿಮೆ ಮಾಡಿದ ಸಂದರ್ಭವೇನಾದರೂ ಕಾಣುತ್ತದೆಯೆ?.... ಖಂಡಿತ ಇಲ್ಲ.... ಇನ್ನು.... ಇಂಗ್ಲಿಷ್ ಮೀಡಿಯಂ .. ಇದೀಗ ಪ್ರತಿಷ್ಠೆಯ ಪ್ರಶ್ನೆ! ತರಗತಿಯಲ್ಲಿ ಕುಳಿತ ಮಗುವಿನ ಬಾಯಿಯಿಂದ ಆಕಸ್ಮಾತ್ ಒಂದು ಕನ್ನಡ ಶಬ್ದ ಹೊರಬಂದರೆ ಅದೇ ಅಪರಾಧ...ಅದಕ್ಕೆ ಶಿಕ್ಷೆ ಎನಿಸಿಕೊಳ್ಳುವಂಥ ಶಿಕ್ಷಣಮಟ್ಟ ತಲುಪಿರುವಲ್ಲಿ.... ಕನ್ನಡ ಸಾಹಿತ್ಯ.... ಪುಸ್ತಕ ಎಂದರೆ ಅಂಗೈ ತೋರಿಸಿ ಅವಲಕ್ಷಣ ಹೇಳಿಸಿಕೊಳ್ಳುವುದು ಮಾತ್ರವಲ್ಲ, ಅವಮಾನಿತರೂ ಆಗಬೇಕಾಗುತ್ತದೆ. ಕನ್ನಡ ಪುಸ್ತಕಗಳನ್ನು ಯಾರು ಓದಬೇಕು? ಇತ್ತೀಚೆಗೆ ಕನ್ನಡದ ವರಪುತ್ರ, ಕಡಲ ತಡಿಯ ಹೆಮ್ಮೆಯ ಚೇತನ, ಹಿರಿಯ ಸಾಹಿತಿ ಕಾರಂತರು ಹೇಳಿದ ಮಾತು ಹೀಗೆ – "ಪುಸ್ತಕಗಳನ್ನು ಓದುವವರು ಯಾರು? ಮುಂದಿನ ಜನಾಂಗವಾದ ಮಕ್ಕಳಲ್ಲಿ ಓದುವ ಆಸೆ, ಆಸಕ್ತಿಯನ್ನು ಮೊಳೆಯಿಸಿ ಬೆಳೆಸು

ವಂತೆ ನಮ್ಮ ಶಿಕ್ಷಣ ಪದ್ಧತಿ ಇದೆಯೆ? 10+2+3 ಶಿಕ್ಷಣ ಮುಗಿಸಿ ಹೊರಬರುವಾಗ ಪರೀಕ್ಷೆಗೆಷ್ಟು ಬೇಕೋ ಅಷ್ಟನ್ನು ಉರು ಹೊಡೆದು ಮೇಲೆ ದಾಟುವುದೇ ಮುಖ್ಯ ಆಗಿರುವಾಗ ಸಾಹಿತ್ಯಕ್ಕೆ ಸ್ಥಾನವೆಲ್ಲಿ?"

ಎಳೆತನದಲ್ಲಿ ಮುರುಟಿಹೋದ ಕುತೂಹಲ ಪ್ರವೃತ್ತಿ ಮತ್ತೆ ಸಾಹಿತ್ಯ ದತ್ತ ಕಣ್ಣರಿಸೀತೆ? ಮನ ಹರಿಸೀತೆ? ಈ ಎಲ್ಲಾ ಸಮಸ್ಯೆಗಳನ್ನೆದುರಿ ಸುತ್ತಾ ಕನ್ನಡ ಸಾಹಿತ್ಯ ಜನಸಾಮಾನ್ಯರ ನಡುವೆ ಸ್ಥಾನ ದೊರಕಿಸುವ ಕಾಲ ಯಾವಾಗ ಬಂದೀತೆಂಬುದು ನಿಜವಾಗಿ ಯಕ್ಷಪ್ರಶ್ನೆ. ಪುಸ್ತಕದಂಗ ಡಿಯ ಮಾಲಿಕರು ಹೀಗೆನ್ನುತ್ತಾರೆ –"ಚೆನ್ನಾಗಿ ಮಾರಾಟವಾಗೋದು ಅಡುಗೆ ಪುಸ್ತಕ ಅದು ಬಿಟ್ಟರೆ ಪತ್ತೇದಾರಿ, ಕಾದಂಬರಿ, ಕತೆ ಇತ್ಯಾದಿ ಸಾಧಾರಣ. ಕವನ, ವಿಮರ್ಶೆ, ವಿಚಾರ... ಇಂಥವುಗಳ ಹೆಸರೂ ಬೇಕಾ ಗಿಲ್ಲ." ನಿಜ. ಲೈಬ್ರೆರಿಗಳಿಗೆ ದಿನಾ ಎಡತಾಕುತ್ತ ಕೈಯಲ್ಲಿ ದಪ್ಪದ ಕಾದಂಬರಿ ಗಳನ್ನು ಹಿಡಿದು ಪ್ರೇಮಮಯವಾದ ಅವುಗಳ ಹೆಸರುಗಳನ್ನು ಹೆಮ್ಮೆ ಯಿಂದ ಬಿತ್ತರಿಸುವ ಹದಿಹರೆಯದ ಬಾಲ, ಬಾಲೆಯರನ್ನು ನಾವು ನೋಡುತ್ತೇವೆ. ಅವರಲ್ಲಿ ಹೆಚ್ಚಿನವರು ಕಾರಣಾಂತರದಿಂದ ವಿದ್ಯೆ, ಉದ್ಯೋಗ, ವಿವಾಹ ಇತ್ಯಾದಿಗಳಲ್ಲೆಲ್ಲ ತೊಡಗಿಸಿಕೊಳ್ಳಲಾಗದೆ ತಾವು ಪಡೆಯಲಾಗದುದನ್ನು ಪಡೆದು ಸಂಭ್ರಮಿಸುವ ಕನಸಿನ ಲೋಕದ ನಾಯಕ, ನಾಯಿಕೆಯರ ಸರಸ, ವಿರಸ, ವಿರಹ ಕೊನೆಗೆ ಸುಖಾಂತವಾಗುವ, ಅಪರೂಪಕ್ಕೊಮ್ಮೆ ದುಃಖಾಂತವಾಗಿ ಕಣ್ಣೀರ್ಗರೆಸುವ ಭ್ರಮಾಲೋಕವನ್ನೇ ಬಿಚ್ಚಿ ಹರಡಿಸುವ ಕಾದಂಬರಿಗಳಲ್ಲಿ ತಲ್ಲೀನರು. ಈ ರೀತಿಯ ಕಾದಂಬರಿ ಗಳು ಅವರನ್ನು ಸಾಮಾನ್ಯವಾಗಿ ಸಂಸಾರರಥಕ್ಕೆ ಹೆಗಲು ಕೊಡುವ, ಅಥವಾ ಏನಾದರೂ ಜವಾಬ್ದಾರಿಯುತ ಹೊಣೆ ಹೊರುವ ಕಾಲ ಬರುವವರೆಗೆ ಕಾಡುತ್ತವೆ. ನಡುವೆಯೇ ಇಂಥ ಕಾದಂಬರಿಗಳ ಸ್ಫೂರ್ತಿಯಿಂದ ದುರಂತ ವನ್ನು ತಂದುಕೊಳ್ಳುವವರ ಸಂಖ್ಯೆಯೂ ಕಡಿಮೆ ಇಲ್ಲ. ಆದುದರಿಂದ ಇಂಥವುಗಳಿಗೆ ಸಾಹಿತ್ಯಕವಾಗಿ ಸ್ಥಾನ ಸಲ್ಲ. ಇನ್ನು ಉನ್ನತ ಬೌದ್ಧಿಕ ಸ್ತರ ದವರು ಮಾತ್ರ ಮೆಲುಕು ಹಾಕುವಂತಹ ಶ್ರೇಷ್ಠತಮ ಸಾಹಿತ್ಯ ಸಾಮಾನ್ಯ

ಓದುಗರನ್ನು ಆಕರ್ಷಿಸುವುದು ಅಪರೂಪ. ಹಾಗಾದರೆ ಸಾಮಾನ್ಯ ಜನತೆಯನ್ನು ಸಾಹಿತ್ಯ ಹೇಗೆ ತಲುಪಬೇಕು? ಈ ಬಗ್ಗೆ ಬರಹಗಾರರೂ ಚಿಂತನೆ ನಡೆಸಿಯೇ ಸಾಹಿತ್ಯ ರಚಿಸಬೇಕಾಗಿದೆಯೇನೋ.

ಒಂದು ಕಾಲವಿತ್ತು. ಪುಟ್ಟಮಕ್ಕಳಿಗೆ ಒಂದು ಎರಡನೆಯ ತರಗತಿಗಳಲ್ಲಿ ವಾರಕ್ಕೆರಡು ಮೂರು ಕಥೆಯ ಪಾಠ, ನಾಲ್ಕೈದು ಅಭಿನಯಗೀತೆಗಳ ಅಭ್ಯಾಸ, ಮೂರು ನಾಲ್ಕನೇ ತರಗತಿಗಳಲ್ಲಿ ಪುರಾಣ ಕಥೆಗಳ ಪರಿಚಯ, ಮತ್ತು ಚಾರಿತ್ರಿಕ ಮಹಾಪುರುಷರ ಜೀವನದ ಸುಂದರ ಸಂದರ್ಭಗಳ ತಿಳುವಳಿಕೆ, ಐದು ಆರನೇ ತರಗತಿಗಳಿಂದ ಪುಸ್ತಕ ಭಂಡಾರದಲ್ಲಿನ ಉತ್ತಮ ಪುಸ್ತಕಗಳ ನಿಯಮಿತ ಓದು, – ಪ್ರೌಢಶಾಲೆಗೆ ಕಾಲಿರಿಸುವ ಹೊತ್ತಿಗೆ ಪಾಠೇತರವಾದ ಉತ್ತಮ ಓದುಗಾರಿಕೆ ಹವ್ಯಾಸವಾಗಿ ಬೆಳೆದು ಬರುತ್ತಿತ್ತು. ಅದರೊಂದಿಗೇ ಹಿರಿಯರು ಒಂದಿಷ್ಟು ಉತ್ತೇಜನ ನೀಡಿದರೆ ತನ್ನದೇ ಪುಟ್ಟ ಪುಸ್ತಕ ಸಂಗ್ರಹವೂ ಸಿದ್ಧ. ಆದರ ಬೆಳವಣಿಗೆಗಾಗಿ ಅವನು ಸದಾ ಕಾಲ ಬದ್ಧ. ಎಳೆಮನದಿಂದಲೇ ಬೆಳೆದು ಬಂದ ಸಾಹಿತ್ಯಕ ಜ್ಞಾನದ ಅನರ್ಘ್ಯ, ಅಮೂಲ್ಯ ನುಡಿಮುತ್ತುಗಳೆಲ್ಲ, ಅನುಭವದ ಸೂಕ್ತಿಗಳೆಲ್ಲ ಜೀವಮಾನ ಪರ್ಯಂತ ನಾಲಗೆಯಲ್ಲಿ, ಮನದಲ್ಲಿ ಯಾವಾಗ ಬೇಕೆಂದರೆ ಆಗ ಪ್ರತ್ಯಕ್ಷ. ಆದರೆ... ಈಗ? ಭಾಷಾ ಮಾಧ್ಯಮಗಳ ಗೊಂದಲದಲ್ಲಿ ಭಾವವನ್ನು ಅರಳಿಸುವ ಸಾಹಿತ್ಯ ಯಾರಿಗೂ ಬೇಕಾಗಿಲ್ಲ.

ಹೃದಯಕ್ಕೆ ಹತ್ತಿರವಾಗಿರುವ ಸಾಹಿತ್ಯಕ್ಕೆ ಎಂದಿಗೂ ಅಳಿವಿಲ್ಲ ಎನ್ನುವುದಕ್ಕೆ ಇಂದಿಗೂ ಜನಮನವನ್ನು ಪುಲಕಿತಗೊಳಿಸುತ್ತಿರುವ ಜನಪದ ಸಾಹಿತ್ಯವೇ ಸಾಕ್ಷಿಯೊದಗಿಸುತ್ತದೆ. ಅಕ್ಷರದ ಅರಿವಿರದ ಅಂದಿನ ನಮ್ಮ ಹಿರಿಯರು ಕಟ್ಟಿ ಬೆಳೆಸಿದ, ಹಾಡಿ ನಲಿದ, ಅತ್ತು ಕರೆದ, ಕರಗಿ ನೀರಾಗಿ ಹರಿದ, ಆ ಸಾಹಿತ್ಯದ ಮಹಾಸ್ರೋತ ಎಂದಿಗಾದರೂ ಬತ್ತಿಹೋದೀತೆ? ಅರ್ಥ ಕಳಕೊಂಡೀತೆ? ಆಚರಣೆಗಳು ಬದಲಾದಾವು, ಆದರೆ ಆ ಭಾವನೆ... ಎಂದಿಗೂ ಚಿರಸ್ಥಾಯಿ. ಕಾರಣ ಅದು, ನಮ್ಮದೇ ನೆಲದಿಂದ ಒಡೆದು ನಮ್ಮದೇ ಮನದಿಂದ ಮಿಡಿದ ಸಾಹಿತ್ಯ. ಆದರಂತೆ ಇಂದು ಕೂಡಾ

ನಮ್ಮ ಜೀವನಾನುಭವಕ್ಕೆ ಹತ್ತಿರವಾದ, ಜನಸಾಮಾನ್ಯರಿಗೆ ಅರ್ಥವಾಗಿ ಮನಕ್ಕೆ ಮುದಕೊಡುವ, ಬುದ್ಧಿಗೆ ಕೆಲಸ ಕೊಡುವ ಸಾಹಿತ್ಯ ಎಲ್ಲರನ್ನೂ ಮುಟ್ಟುವಂತಾಗಬೇಕು.

ಇಂದು ವಿದ್ಯಾವಂತರ ಸಂಖ್ಯೆ ಸಾಕಷ್ಟು ಹೆಚ್ಚಿದೆ. ಸಾಕ್ಷರತೆಯು ಪ್ರಸಾರ ಭರದಿಂದ ಸಾಗಿದೆ. ಪ್ರತಿಯೊಬ್ಬ ಅಕ್ಷರಸ್ಥನೂ ಪುಸ್ತಕದ ಕಡೆಗೆ ಆಸಕ್ತಿ ವಹಿಸಬೇಕು. ತಮ್ಮ ಮನೆಯಲ್ಲಿ ಒಂದು ಪುಟ್ಟದಾದರೂ ಪುಸ್ತಕ ಭಂಡಾರ ಹೊಂದಿರಬೇಕು. ಹೇಗೆ ದೇವರ ಕಿಂಡಿ, ಕಾಣಿಕೆಡಬ್ಬ, ಔಷಧ ಪೆಟ್ಟಿಗೆ ಮನೆಯಲ್ಲಿ ಇರಿಸಿಕೊಳ್ಳುತ್ತೇವೋ ಅಂತೆಯೇ ಒಂದು ಸಣ್ಣ ಅಥವಾ ದೊಡ್ಡ ಪುಸ್ತಕ ಸಂಗ್ರಹ, ಕಾಲಕಾಲಕ್ಕೆ ಅದರ ಸದುಪಯೋಗ ಜೀವನದ ಅವಿಭಾಜ್ಯ ಅಂಗವಾಗಬೇಕು.

ಕೆಲವು ಶಿಕ್ಷಕರ ಅಭಿಮತದಂತೆ "ಶಾಲೆಯಲ್ಲಿ ಮಕ್ಕಳಿಗೆ ಬಹುಮಾನ ಕೊಡುವ ಸಂದರ್ಭದಲ್ಲಿ ಪ್ಲಾಸ್ಟಿಕ್ ತಟ್ಟೆ, ಸ್ಟೀಲ್ ಲೋಟಗಳ ಬದಲು ಉತ್ತಮ ಪುಸ್ತಕಗಳನ್ನೇ ಆಯ್ದು ಕೊಡಬೇಕು. ಮಕ್ಕಳಲ್ಲಿ ಪುಸ್ತಕಗಳ ಆಸಕ್ತಿ ಬೆಳೆಯಬೇಕು" ಈ ನುಡಿ ಸದಾ ಕಾಲಕ್ಕೆ ಎಲ್ಲ ಹಿರಿಯರಿಗೆ ನೆನಪಿರಬೇಕಾಗಿದೆ, ಮತ್ತು ಕಾರ್ಯತಃ ಪಾಲಿಸಬೇಕಾಗಿದೆ.

ಕನ್ನಡದ ಉತ್ತಮ ಕವನ, ನಾಟಕ, ಕಾದಂಬರಿಗಳಿಗೆಲ್ಲ ಪ್ರಚಾರ ಮಾಧ್ಯಮಗಳಲ್ಲಿ ಅವಕಾಶ ದೊರಕುವಂತಾದಾಗ, ಕನ್ನಡದ ಉಸಿರು ಜನಜೀವನದಲ್ಲಿ ಕಂಪು ಬೀರಬಹುದು. ಸಾಹಿತ್ಯವು ಜನಜೀವನದೊಡನೆ ಸಮರಸವಾಗಬಹುದು, ಸಾಮಾನ್ಯ ಜನತೆಯನ್ನೂ ತಲುಪಬಹುದು. ಈ ದಿಸೆಯಲ್ಲಿ ಎಲ್ಲರ ಪ್ರಯತ್ನ ನಡೆದು ಸತ್ಫಲ ಸಿಗುವಂತಾಗಲಿ.

ಮಹಿಳಾ ಸಾಹಿತ್ಯ – ಒಂದು ಚಿಂತನೆ

—ಎಸ್. ರೋಹಿಣಿ ಶರ್ಮ

"ಸುಮಾರು ಒಂದೂವರೆ ಸಾವಿರ ವರ್ಷಗಳ ಸುದೀರ್ಘ ಸಾಹಿತ್ಯ ಯಾತ್ರೆಯಲ್ಲಿ ಮಹಿಳೆಯರ ಕೈಂಕರ್ಯ ಸಂಖ್ಯೆಯಲ್ಲಿ ಕಡಿಮೆ ಎನ್ನಬಹುದಾದರೂ ಗುಣದಲ್ಲಿ ಕೀಳಾಗಿರಲಿಲ್ಲ. ಇತ್ತೀಚೆಗಂತೂ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಿರುವ ಮಹಿಳೆ ಸಾಧಿಸಬೇಕಾದುದು ಮಾತ್ರ ಇನ್ನೂ ಬಹಳ ಇದೆ ಎಂಬುದು ನಿಸ್ಸಂಶಯ." —ಸಂ.

ಆದಿಮಾನವರೇ ಇರಲಿ, ಆಧುನಿಕ ಮಾನವರೇ ಇರಲಿ, ತಮ್ಮ ಭಾವನೆಗಳನ್ನು, ನೋವು–ನಲಿವುಗಳನ್ನು ಹಂಚಿಕೊಳ್ಳಬೇಕಾಗುತ್ತದೆ. ಮಾನವನ ಅಭಿವ್ಯಕ್ತಿಯ ಮಾಧ್ಯಮವೇ ಭಾಷೆ. ಭಾಷೆಯ ವಿಶೇಷವೆಂದರೆ ತಾನು ಬೆಳೆಯುತ್ತಲೇ; ತನ್ನನ್ನು ನಂಬಿದವರನ್ನು ಬೆಳೆಸುತ್ತಾ ಹೋಗುತ್ತದೆ. ಯಾವುದೇ ಭಾಷೆ ನಿಂತ ನೀರಾಗದೆ ಹರಿಯುವ ನೀರಾಗಿ ಸದಾ ಸ್ಪಂದಿಸುತ್ತಾ ಒಳ್ಳೆಯದನ್ನು ಹೀರಿಕೊಳ್ಳುತ್ತಾ ಹೋಗಬೇಕು. ಹೀಗೆ ಹೊಂದಿಕೊಂಡು ಉಳಿದುಕೊಂಡು ಬೆಳೆದುಕೊಂಡು ಹೋಗುವ ಲಕ್ಷಣ ಕನ್ನಡ ಭಾಷೆಗೆ ಇರುವುದು ಕನ್ನಡ ಭಾಷೆಯನ್ನು ಅಭ್ಯಾಸ ಮಾಡುವವರಿಗೆ ಅರಿವಾಗುತ್ತದೆ.

ಭಾರತ ಬಹುಭಾಷೆಗಳ ರಾಷ್ಟ್ರ. ಪಂಚ ದ್ರಾವಿಡ ಭಾಷಾ ವರ್ಗಕ್ಕೆ ಸೇರಿದ ಕನ್ನಡವು ತಮಿಳನ್ನು ಬಿಟ್ಟರೆ ಭಾರತದ ಜೀವಂತ ಭಾಷೆಗಳಲ್ಲೆಲ್ಲ ಹೆಚ್ಚು ಪ್ರಾಚೀನವಾದ ಸಾಹಿತ್ಯ ಪರಂಪರೆಯುಳ್ಳ ಭಾಷೆಯಾಗಿದೆ.

ಪ್ರಸ್ತುತ ಕನ್ನಡ ಸಾಹಿತ್ಯದಲ್ಲಿ ಮಹಿಳೆಯರ ಕೊಡುಗೆಯೂ ಸಹ ನಾನಾ ಮಜಲುಗಳಲ್ಲಿ ಹಮ್ಮಿಕೊಂಡಿದ್ದು ಕನ್ನಡ ಸಾಹಿತ್ಯ ಸಮೃದ್ಧಿಗೆ ಸಾಕಷ್ಟು ಸಹಕಾರ ನೀಡಿದೆ ಎಂದರೆ ತಪ್ಪಾಗಲಾರದು.

ಮಹಿಳೆ ಎಂದೊಡನೆ ನೂರೊಂದು ಮನಕ್ಕೆ ನೂರೊಂದು ಬಗೆಯಾಗಿ ಕಾಡುವ ಕಾಮಿನಿ. ಇಂದು ಮಹಿಳೆ ನಾನಾ ಕ್ಷೇತ್ರಗಳಲ್ಲಿ ತನ್ನ ಸವಿಸ್ತರ ಪರಿ

ಸರಗಳನ್ನು ಸೃಷ್ಟಿಸಿಕೊಂಡಿದ್ದಾಳೆ. ಹಿಂದೆ ಮಹಿಳೆಗೆ ಕಾಲ, ದೇಶ, ಅವಳ ಸುತ್ತಮುತ್ತಲಿನ ಪರಿಸರ, ಪರಿಸ್ಥಿತಿಯಿಂದಾಗಿ ಮುಕ್ತವಾಗಿ ಸಾಹಿತ್ಯ ರಂಗ ದಲ್ಲಿಯೇ ನಿರತಳಾಗಿ ಕ್ರಿಯಾಶೀಲ ಮಹಿಳೆಯಾಗಿ ಬಾಳುವ ಅವಕಾಶ, ಅನುಕೂಲ ಹೆಚ್ಚಿರಲಿಲ್ಲ. ಆದರೆ ಇಂದು ಸಮಾನತೆ ಎಂಬ ಪದದ ಅರ್ಥ ವ್ಯಾಪ್ತಿಯಿಂದಾಗಿ ಮಹಿಳೆಗೆ ಸಾಹಿತ್ಯವು ಮುಕ್ತ ವೇದಿಕೆಯಾಗಿದೆ. ಅವರ ಕೃತಿಗಳನ್ನು ಪ್ರಕಾಶಗೊಳಿಸಲು ಪತ್ರಿಕೆ ಹಾಗೂ ಪ್ರಕಾಶಕರು ನೀಡುವ ಸಹ ಕಾರ ಸ್ಮರಣೀಯವಾದುದು.

ಕನ್ನಡ ಸಾಹಿತ್ಯದಲ್ಲಿ ಹಿಂದೆ ಕೆಲವು ರಾಣಿಯರು ಸಾಹಿತ್ಯ-ಲಲಿತ ಕಲೆಗಳ ಉಪಾಸಕಿಯರಾಗಿ ಅದರ ಬೆಳವಣಿಗೆಗೆ ಪೂರಕವಾಗಿದ್ದರಲ್ಲದೆ ತಾವೇ ಸ್ವತಃ ಕೃತಿ ರಚನೆಯಲ್ಲಿ ನಿರತರಾಗಿದ್ದರೆಂಬುದನ್ನು ಚರಿತ್ರೆಯಿಂದ ತಿಳಿಯ ಬಹುದಾಗಿದೆ. ದಾನ ಚಿಂತಾಮಣಿ ಎಂದು ಪ್ರಸಿದ್ಧಳಾಗಿದ್ದ ಅತ್ತಿಮಬ್ಬೆ ಯೆಂಬ ಶ್ರೀಮಂತ ಜೈನ ಮಹಿಳೆ ರನ್ನನ "ಅಜಿತ ಪುರಾಣ"ಕ್ಕೆ ಸ್ಫೂರ್ತಿ ದಾತಳು.

ನಾಗಚಂದ್ರನ ಕಾಲದಲ್ಲಿ "ಕಂತಿ"ಯೆಂಬ ಕವಯಿತ್ರಿಯಿದ್ದಳೆಂದೂ, ನಾಗಚಂದ್ರನಿಗೂ ಕಂತಿಗೂ ಒಂದು ಸಮಸ್ಯೆ ಪೂರ್ಣಮಾಡುವ ಸ್ಪರ್ಧೆ ನಡೆ ಯಿತೆಂದೂ ಈ ಪ್ರಸಂಗಕ್ಕೆ ಸಂಬಂಧಿಸಿದ ಕೆಲವು ಪದ್ಯಗಳು ಇವೆಯೆಂದೂ ಕೆಲವರ ಅಭಿಪ್ರಾಯವಾದರೆ ಇನ್ನು ಕೆಲವು ವಿದ್ವಾಂಸರು ಆಕೆಯ ಯಾವ ಕೃತಿಯೂ ಇದುವರೆಗೂ ದೊರೆತಿಲ್ಲವಾದ ಕಾರಣ ಆಕೆಯ ಕಾವ್ಯರಚನೆಗೆ ಪುಷ್ಟಿ ದೊರೆತಿಲ್ಲವೆನ್ನುತ್ತಾರೆ. ಅಂತೆ ಕಂತೆಗಳೇನಾದರೂ ಇರಲಿ, ದಂತ ಕತೆಯಾಗಿಯೇ ಉಳಿದ ಕಂತಿಯೇ ಕನ್ನಡದ ಮೊದಲ ಮಹಿಳಾ ಸಾಹಿತಿ ಎಂದರೆ ತಪ್ಪಾಗಲಾರದು.

ಅನಂತರ ಬಸವಯುಗ, ವಚನ ಸಾಹಿತ್ಯದ ಸುಗ್ಗಿಯ ಕಾಲ. ಈ ಶತಮಾನದ ಮಧ್ಯಭಾಗದಲ್ಲಿ ಮೈ ಮುರಿದು ಎದ್ದ ವೀರಶೈವ ಆಂದೋಲನ ಕನ್ನಡ ಸಮಾಜಕ್ಕೆ ಹೊಸ ತಿರುವು ತಂದಿತು. ಇಂಥ ಸಂದರ್ಭದಲ್ಲಿ "ವಚನ ಗಾರ್ತಿ"ಯರ ಯುಗ ಪ್ರಾರಂಭವಾಗಿ ಮಹಿಳಾ ಸಾಹಿತ್ಯದಲ್ಲಿ ಕಾಳವ್ವೆ, ಗೊಗ್ಗವ್ವೆ, ಲಕ್ಕಮ್ಮ, ಸಂಕವ್ವೆ ಮೊದಲಾದ ಹೆಚ್ಚಿನ ವಚನಗಾರ್ತಿಯರು ಹುಟ್ಟಿಕೊಂಡರು.

ಅಕ್ಕ ಮಹಾದೇವಿಯ ವಚನಗಳು ಕಾವ್ಯ ದೃಷ್ಟಿಯಿಂದ ಗಣನೀಯವಾಗಿದ್ದವು. ಈಕೆಯ ವಚನದಲ್ಲಿ ಭಕ್ತಿ, ಶೃಂಗಾರದ ಜೊತೆ ತೀವ್ರ ಸಂವೇದನೆಯ ತುಡಿತವಿದೆ. ಉಪಮೆ–ದೃಷ್ಟಾಂತಗಳ ಮೂಲಕ ಅನುಭವಗಳನ್ನು ಸುಂದರವಾಗಿ ರೂಪಿಸುವ ಜಾಣ್ಮೆ ತುಂಬಿದ ಕವಿತಾ ಸೌರಭದಿಂದಾಗಿ ಉತ್ತಮ ಸಾಹಿತ್ಯಶ್ರೇಣಿಗೆ ಆಕೆಯ ವಚನಗಳು ಸೇರಿವೆ.

"ಬೆಟ್ಟದಾ ಮೇಲೊಂದು ಮನೆಯ ಮಾಡಿ,
ಮೃಗಗಳಿಗೆ ಅಂಜಿದೊಡೆಂತಯ್ಯಾ..."

"ಬಂಜೆ ಬೇನೆಯನರಿಯಳು, ಬಲತಾಯಿ ಮುದ್ದಬಲ್ಲಳೆ?" ಇಂಥ ವಾಕ್ಯಗಳಲ್ಲಿ ವಿವಿಧ ರಮ್ಯತೆಯನ್ನು ಗುರುತಿಸಬಹುದಲ್ಲವೆ?

"ಪೆಣ್ಣಲ್ಲವೆ ನಮ್ಮನೆಲ್ಲ ಪಡೆದ ತಾಯಿ..." ಎನ್ನುವ ಹೊನ್ನಮ್ಮನ ಹದಿಬದೆಯ ಧರ್ಮದಲ್ಲಿ ಹೆಣ್ಣಿನ ಅಸಮಾನತೆಯ ಬಗೆಗೆ ಕಳಕಳಿಯಿದೆ. ಚಿಕ್ಕದೇವರಾಯ ಒಡೆಯರ ಪಟ್ಟಮಹಿಷಿ ದೇವಜಮ್ಮಣ್ಣಿಯ ಸಂಚಿಯವಳಾಗಿದ್ದ ಹೊನ್ನಮ್ಮನ "ಹದಿಬದೆಯ ಧರ್ಮ" ಒಂದು ನೀತಿ ಕಾವ್ಯ. ಈ ಕೃತಿಯಲ್ಲಿ ನೀತಿಗೆ ಪ್ರಾಧಾನ್ಯವಿದೆ. ಹೇಳಬೇಕೆಂದಿರುವ ಮಾತನ್ನು ನೇರವಾಗಿ ರಂಜನೀಯವಾಗಿ ನಿರೂಪಿಸಿ ಗೃಹಿಣಿಯರ ಕೈಪಿಡಿಯೆನಿಸಿರುವ ಈ ರಚನೆ ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಯಲ್ಲೊಂದಾಗಿದೆ. ಅದೇ ರೀತಿ ಹೆಳವನಕಟ್ಟೆ ಗಿರಿಯಮ್ಮ, ಶೃಂಗಾರಮ್ಮ, ಚೆಲುವಾಂಬೆಯರ ಸಾಹಿತ್ಯ ಕೃತಿಗಳು ಅರಸರ ಕಾಲದ ಮಹಿಳಾ ಸಾಹಿತ್ಯದ ಸಾಲಿಗೆ ಸೇರುತ್ತವೆ. ನಂಜನಗೂಡು ತಿರುಮಲಾಂಬ ಹೊಸಗನ್ನಡದ ಮೊದಲ ಕಾದಂಬರಿಗಾರ್ತಿಯಾಗಿ ಹೆಸರು ಪಡೆದವರು. ಇವರು ನಾಟಕಕಾರ್ತಿ, ಪತ್ರಕರ್ತೆ, ಪ್ರಕಾಶಕಿಯಾಗಿ ಸ್ತ್ರೀಯರ ಪುರೋಭಿವೃದ್ಧಿಗಾಗಿ ದುಡಿದವರು. ಅಲ್ಲದೆ ಪತ್ತೇದಾರಿ ಕಾದಂಬರಿಕಾರ್ತಿಯಾಗಿಯೂ ಕೀರ್ತಿಭಾಜನರಾಗಿದ್ದಾರೆ.

ಆಂಗ್ಲ ಪತ್ತೇದಾರಿ ಬರಹಗಾರ್ತಿ ಅಗಾಥ ಕ್ರಿಸ್ತಿಯಂತೆ ಕನ್ನಡ ಸಾಹಿತ್ಯದಲ್ಲಿ ಪತ್ತೇದಾರಿ ಕಾದಂಬರಿಕರ್ತೆಯಾಗಿ ಹೆಸರು ಮಾಡಿದ ಮೊಟ್ಟ ಮೊದಲ ಮಹಿಳೆ ಇವರು. ಬಾಲ್ಯವಿವಾಹ, ವೈಧವ್ಯ, ಅನಕ್ಷರತೆ, ಆರ್ಥಿಕವಾಗಿ ಪರಾವಲಂಬನೆ ಇತ್ಯಾದಿಯಾಗಿ ಸ್ತ್ರೀಯರನ್ನು ಕಾಡಿದ, ಕಾಡುತ್ತಿರುವ

ಸಾಮಾಜಿಕ ಪಿಡುಗನ್ನು ತಮ್ಮ ಮಾತು, ಕೃತಿ, ಬರಹ, ಬದುಕಿನಲ್ಲಿ ದಿಟ್ಟ ವಾಗಿ ಇವರು ಎದುರಿಸಿದ್ದಾರೆ. ಇನ್ನು ಆರ್. ಕಲ್ಯಾಣಮ್ಮನವರು ಕೂಡಾ ಸ್ವಾತಂತ್ರ್ಯಪೂರ್ವದ ಬೆರಳೆಣಿಕೆಯ ಬರಹಗಾರ್ತಿಯರಲ್ಲಿ ಪ್ರಮುಖರಾಗಿ ದ್ದರು. ಅಂತೆಯೇ ಕೊಡಗಿನ ಗೌರಮ್ಮನನ್ನು ಅಂದಿನ ಕತೆಗಾರ್ತಿಯರ ಸಾಲಿಗೆ ಸೇರಿಸುವುದನ್ನು ಮರೆಯುವಂತಿಲ್ಲ.

ನವೋದಯ, ನವ್ಯ ಕಾಲದ ಮಹಿಳಾ ಸಾಹಿತ್ಯವನ್ನು ಕೈಗೆತ್ತಿಕೊಂಡಾಗ ಸಂಖ್ಯೆಯ ದೃಷ್ಟಿಯಲ್ಲಿ ಹೆಚ್ಚಳವಾಗಿದೆಯಾದರೂ ಸತ್ವದ ದೃಷ್ಟಿಯಿಂದ ಗಟ್ಟಿಸಾಹಿತ್ಯವೆನಿಸಿದ್ದು ಕಡಿಮೆಯೆನ್ನಬೇಕು. ಹೆಣ್ಣಿಗಿರುವ ಮನೆಗೆಲಸದ ಹೊರೆ, ಮತ್ತಿತರ ಹೊಣೆಗಾರಿಕೆಗಳ ನಡುವೆ ಬಿಡುವು ದೊರೆತು ಬರೆಯುವು ದಿರಲಿ, ಓದಲೂ ವಿರಾಮ ಸಿಗದಿರುವುದು ನಿಜ. ಇನ್ನು ದೇಶ ಪರ್ಯಟನ, ಸಮಾಜದ ಹಿರಿಯ ಕಿರಿಯ ವ್ಯಕ್ತಿಗಳೊಂದಿಗೆ ಅರಿವು, ಪರಿಚಯ, ಪ್ರಯೋಜನ ವೆನ್ನುವುದು ಕನಸಿನ ಗಂಟಲ್ಲವೆ? ಇಷ್ಟೆಲ್ಲ ಪ್ರತಿಕೂಲ ಪರಿಸರದಲ್ಲೂ ಎಂ. ಕೆ. ಇಂದಿರಾ, ತ್ರಿವೇಣಿ ಮೊದಲಾದವರ ಕೃತಿಗಳು ವಿವಿಧ ಕಾರಣ ಗಳಿಂದ ತಮ್ಮ ಮಹತ್ವ ತೋರಿಸಿ ಪ್ರಾಧಾನ್ಯ ಪಡೆದವು.

ವೃತ್ತಿಯಲ್ಲಿ ವೈದ್ಯರೂ ಪ್ರವೃತ್ತಿಯಲ್ಲಿ ಸಾಹಿತಿಯೂ ಆಗಿದ್ದ ಅನುಪಮಾ ನಿರಂಜನರ ಕೃತಿಗಳು ವೈವಿಧ್ಯಮಯವಾಗಿ ಜೀವಂತಿಕೆಯಿಂದ ಕೂಡಿವೆ. ಅವರ ಜೀವನಾನುಭವದ 'ಸಿಹಿ–ಕಹಿ' 'ಶಾಶ್ವತಿ' ಪ್ರಶಸ್ತಿಯನ್ನು ಪಡೆದಿದೆ ಎಂದ ಮೇಲೆ ಬೇರೆ ಹೊಗಳಿಕೆ ಬೇಡ.

ಮಹಿಳೆಯರಿಂದ ಭಾಷಾಂತರ ಕಾರ್ಯವೂ ತಕ್ಕಮಟ್ಟಿಗೆ ನಡೆದಿದೆ. ಚಿ. ನ. ಮಂಗಳಾ, ಎಚ್. ವಿ. ಸಾವಿತ್ರಮ್ಮ ಈ ದಿಸೆಯಲ್ಲಿ ಸ್ತುತ್ಯ ರಾಗಿದ್ದಾರೆ.

ಮಕ್ಕಳ ಸಾಹಿತ್ಯದಲ್ಲಿ ಮಹಿಳೆಯರು ಸಾಕಷ್ಟು ಕೈಯಾಡಿಸಿ ಹೆಸರು ಗಳಿಸಿದ್ದಾರೆ. ಕಾವ್ಯ, ಸಂಶೋಧನೆ, ವಿಚಾರ, ವಿಮರ್ಶೆ, ಪ್ರವಾಸ, ಜೀವನ ಚರಿತ್ರೆ, ನಾಟಕ ಮೊದಲಾದ ಕ್ಷೇತ್ರಗಳನ್ನು ವೀಕ್ಷಿಸಿದಾಗ ಮಹಿಳಾ ಸಾಹಿತಿ ಗಳ ಕೃಷಿಕಾರ್ಯ ಸಾಕಷ್ಟು ಕಂಡುಬರುತ್ತದೆ. ಆದರೂ ವಿಮರ್ಶೆಯ ವಿಷಯದಲ್ಲಿ ಮಹಿಳೆಯರ ಸ್ಥಾನ ಶೂನ್ಯಕ್ಕೆ ಹತ್ತಿರವಾಗಿರುವುದು ಖೇದಕರ.

ಮಾನವನ ಮನೋಧರ್ಮದಲ್ಲಿ ಹಾಸ್ಯ ಒಂದು ಸ್ಥಾಯಿಪ್ರಜ್ಞೆ. ನಗು ಸಹಜ ಧರ್ಮ. ನಗಿಸುವುದು, ಅದನ್ನು ಕೃತಿರೂಪಕ್ಕಿಳಿಸುವುದು ಅಪರೂಪದ ಅರ್ಹತೆ. ಇಂತಹ ಹಾಸ್ಯ ಸಾಹಿತಿಗಳ ಸಾಲಿನಲ್ಲಿ ಟಿ. ಸುನಂದಮ್ಮ ಅಗ್ರ ಗಣ್ಯರು.

ದಲಿತ, ಬಂಡಾಯ, ಸಂಘರ್ಷದಲ್ಲಿಯೂ ಮಹಿಳಾ ಸಾಹಿತಿಗಳಿಗೆ ಕೊರತೆಯಿಲ್ಲ. ಅನೇಕರ ಹೆಸರುಗಳನ್ನು ಉದಾಹರಿಸಬಹುದಾಗಿದೆ. ಬೇಸರದ ಒಂದು ವಿಷಯವೆಂದರೆ ಇತ್ತೀಚಿನ ಕೆಲವು ಲೇಖಕಿಯರು ವ್ಯಾಪಾರಿ ಮನೋಭಾವನೆಯಿಂದ ಗೃಹಕೈಗಾರಿಕೆಯಂತೆ ಏಕತಾನತೆಯ ಕೃತಿಗಳನ್ನೇ ರಚಿಸುವ ಕೆಲಸ ಕೈಗೆತ್ತಿಕೊಂಡಿರುವುದು.

ಆದರೂ ಮಹಿಳಾಸಾಹಿತ್ಯವೆಂದಾಗ ಉಡುಗೆ, ತೊಡುಗೆ, ಸಂಸಾರ, ಹಾಗೂ ಅಡುಗೆ ಮನೆಯ ಸಾಮಾಜಿಕ ಚಿತ್ರಣ ಎಂಬುದಾಗಿ ಅಪಹಾಸ್ಯ ಮಾಡುವುದು, ಅಲ್ಲಗಳೆಯುವುದು ಸರಿಯಲ್ಲ. ಹೊಗಳಿ ಹೊನ್ನಶೂಲಕ್ಕೇರಿಸ ಬೇಕೆಂಬುದೂ ನನ್ನ ಅಭಿಪ್ರಾಯವಲ್ಲ. ಉತ್ತಮ ಸಾಹಿತ್ಯಕ್ಕೆ ಯಾರಿಂದಲೂ ಹೊಗಳಿಕೆ, ಶಿಫಾರಸ್ಸು ಬೇಡ.

ವೈಯಕ್ತಿಕವಾಗಿ ಹೇಳುವುದಾದರೆ ನನಗೆ ಪುರುಷ ಸಾಹಿತ್ಯ ಮಹಿಳಾ ಸಾಹಿತ್ಯ ಎಂಬ ಪ್ರಭೇದವೇ ಸರಿಯಲ್ಲ ಎನಿಸುತ್ತದೆ. ಒಟ್ಟಾರೆ ವರ್ತಮಾನಕ್ಕೆ ಮಾತ್ರ ಸಲ್ಲುವ ಸಾಹಿತ್ಯ, ಮತ್ತು ವರ್ತಮಾನದಲ್ಲಿದ್ದು ಭವಿಷ್ಯದ ಚಿಂತನೆ ಯನ್ನು ಪಡೆದು ಕಾಲಗರ್ಭದಲ್ಲಿ ಕರಗಿ ನೀರಾಗದ ಗಟ್ಟಿಸಾಹಿತ್ಯ ಇವೇ ಎರಡು ಮುಖ್ಯ ಭೇದಗಳು ಎನಿಸುತ್ತದೆ.

ಮಹಿಳೆಯರಲ್ಲಿ ಆಳವಾಗಿ ಚಿಂತನೆ ಮಾಡಿ ಓದಿ ಬರೆಯುವವರು ಹೆಚ್ಚಾಗಬೇಕು. ಅಂತಹ ಬರಹಗಳನ್ನು ಸ್ವೀಕರಿಸುವ ಸಹೃದಯರ ಸಂಖ್ಯೆಯೂ ಬೆಳೆಯಬೇಕು. ಇಂತಹ ಪರಿಸರಕ್ಕಾಗಿ ನನ್ನ ಹಾರೈಕೆ.

ಮನೆ ಮತ್ತು ಮಕ್ಕಳು

—ಡಾ। ಪುಷ್ಪಗಂಧಿನಿ

"ಮಹಿಳೆಯ ಆಸಕ್ತಿ ಎಷ್ಟೇ ವಿಸ್ತರಿಸಿದರೂ 'ಮನೆ ಮತ್ತು ಮಕ್ಕಳು' ಆಕೆಯ ಬದುಕಿನ ಅವಿಭಾಜ್ಯ ಅಂಗವೇ ಆಗಿದೆ. ಮುಂದಿನ ಜನಾಂಗದ ಆಧಾರಸ್ತಂಭಗಳೆನಿಸುವ ಇಂದಿನ ಮಕ್ಕಳನ್ನು ಸುಯೋಗ್ಯ ನಾಗರಿಕರನ್ನಾಗಿ ರೂಪಿಸುವಲ್ಲಿ, ಅವರ ಮಾನಸಿಕ, ದೈಹಿಕ ವಿಕಸನಗಳಿಗೆ ಅನುವು ದೊರಕಿಸುವಲ್ಲಿ ಮಹಿಳೆಯ ಅರ್ಥಾತ್ ಮಾತೆಯ ಹೊಣೆ ಗುರುತರವಾದುದು."

—ಸಂ.

ಮಕ್ಕಳಿರುವ ಮನೆ ಚಲಿಸುವಂತಿರುತ್ತದೆ ಮಕ್ಕಳಿಲ್ಲದ ಮನೆಯಲ್ಲಿ ಒಂದು ತರಹದ ಜಡತ್ವ ತುಂಬಿರುತ್ತದೆ. ಇಟ್ಟವಸ್ತು ಇದ್ದಲ್ಲಿಯೇ ಇರುತ್ತದೆ. ಯಾವ ವಿಷಯದಲ್ಲಿಯೂ ಚಟುವಟಿಕೆ ಇಲ್ಲವಾಗುತ್ತದೆ. ಮಕ್ಕಳು ವರ್ಷ ವರ್ಷಕ್ಕೆ ಬೆಳೆಯುತ್ತಾರೆ. ಅವರ ಮಾನಸಿಕ ಹಾಗೂ ದೈಹಿಕ ಅಭಿವೃದ್ಧಿ ವೇಗವಾಗಿ ಆಗುತ್ತಿರುತ್ತದೆ. ಅವರ ಜತೆ ತಮ್ಮ ಪೋಷಕರ ಮನಸ್ಸನ್ನೂ ವಿಕಸಿಸುವಂತೆ ಮಾಡುತ್ತಾರೆ. ಮಕ್ಕಳು ಉತ್ಸಾಹದ ಚಿಲುಮೆಗಳು. ಪ್ರತಿಯೊಂದರಲ್ಲೂ ಕುತೂಹಲ ತೋರಿಸಿ ಸಾವಿರ ಪ್ರಶ್ನೆ ಕೇಳುತ್ತಾರೆ. ಪೋಷಕರು ಅದಕ್ಕೆ ಉತ್ತರಿಸುವಷ್ಟು ತಾಳ್ಮೆ ತೋರಬೇಕು. ತಂದೆ – ತಾಯಿಗಳೂ, ಗುರುಗಳೂ, ಉತ್ತೇಜನ ಕೊಟ್ಟಷ್ಟೂ ಮಕ್ಕಳ ಮನಸ್ಸು ಹಿಗ್ಗುತ್ತದೆ. ಆದರೆ ಅವರಲ್ಲಿ ಒಳ್ಳೆಯ ಹಿತಾಸಕ್ತಿ ಬೆಳೆಯುವಂತೆ ಮಾಡುವುದು ಹಾಗೂ ಅವರಲ್ಲಿನ ಸಹಜ ಪ್ರತಿಭೆ ಗುರುತಿಸಿ ಅದನ್ನು ಬೆಳೆಸುವುದು ತಂದೆ– ತಾಯಿಯರ ಆದ್ಯ ಕರ್ತವ್ಯ.

ಆದರೆ ವೈದ್ಯಳಾಗಿ ನಾನು ಇತ್ತೀಚಿನ ಜನರಲ್ಲಿ ಕೆಲವು ವ್ಯತಿರಿಕ್ತ ಬದಲಾವಣೆ ಕಾಣುತ್ತಿದ್ದೇನೆ. ನನ್ನ ಮಗು ಜಾಹೀರಾತು ಮಗುವಿನ ತರಹ ದಪ್ಪವಾಗಬೇಕು ಯಾವಾಗಲೂ trim ಉಡುಪಿನಲ್ಲಿರಬೇಕು (ಬೂಟು,

ಕಾಲುಚೀಲ, ಟೋಪಿ), ಕಾಹಿಲೆ ಬರಬಾರದು, ಅದಕ್ಕಾಗಿ ಸದಾ ಔಷಧಿ ನಡೆಯುತ್ತಿರಬೇಕು, ಕ್ಲಾಸಿಗೆ ಮೊದಲ ರ‍್ಯಾಂಕೇ ಬರಬೇಕು, ಮುಂದೆ ಡಾಕ್ಟರೋ, ಅಥವಾ ಇಂಜಿನಿಯರೇ ಆಗಬೇಕು. ಹೀಗೆ ಮಗು ಹುಟ್ಟುತ್ತಾ ಅದರ ಮೇಲೆ ಸಾವಿರ ಕಟ್ಟಪ್ಪಣೆಗಳು. ಈ ರೀತಿ ಅವರ ಸಹಜ ಆಸಕ್ತಿಗಳನ್ನೆಲ್ಲಾ ಅದುಮಿ ಬೆಳೆಸಲ್ಪಟ್ಟ ಮಕ್ಕಳಿಂದ ಖಂಡಿತಾ ಒಳ್ಳೆಯ ಸಮಾಜ ನಿರ್ಮಿಸಲು ಸಾಧ್ಯವಾಗಲಾರದು. ಆ ಮಗು ಮುಂದೆ ಒಬ್ಬ ತೃಪ್ತ ನಾಗರಿಕನಾಗಿ ಬೆಳೆಯಲಾರ. ಮಕ್ಕಳನ್ನು ಒಳ್ಳೆಯ ಗಿಡ ಬೆಳೆಸಿದ ಹಾಗೆಯೇ ಸಹಜವಾಗಿ ಬೆಳೆಯಲು ಬಿಡಬೇಕು. ಒಳ್ಳೆಯ ಪರಿಸರ ಒದಗಿಸಿ ಮಗು ದಾರಿತಪ್ಪದ ಹಾಗೆ ನೋಡುವುದು ಮಾತ್ರ ಪೋಷಕರ ಕರ್ತವ್ಯ.

ಮಗು ಜನಿಸಿ ಒಂದು ವರ್ಷದೊಳಗೆ ಜೀವಮಾನದಲ್ಲಿ ಎಂದೂ ಆಗದಷ್ಟು ವಿಪರೀತ ವೇಗವಾಗಿ ಮಾನಸಿಕ ಹಾಗೂ ದೈಹಿಕ ಬೆಳವಣಿಗೆ ಆಗುತ್ತದೆ. ಈ ಅವಧಿಯಲ್ಲಿ ಮಗುವಿಗೆ ಮೂರು ತಿಂಗಳವರೆಗೆ ತಾಯಿಯ ಹಾಲು, ಮಧ್ಯೆ ಮಧ್ಯೆ ನೀರು ಕುಡಿಸಿದರೆ ಸಾಕಾಗುತ್ತದೆ. ಕಡಿಮೆ ಎನಿಸಿದರೆ ದನದ ಹಾಲು ತೆಳುಮಾಡಿ ಕೊಡಬೇಕಾಗುತ್ತದೆ. ಜೀವಸತ್ವದ ಅಂಶ ತಾಯಿ ತಿನ್ನುವ ಒಳ್ಳೆಯ ಪೌಷ್ಠಿಕಾಂಶದ ಆಹಾರದಿಂದ ಎದೆಯ ಹಾಲಿನ ಮೂಲಕ ಮಗುವಿಗೆ ದೊರೆಯುತ್ತದೆ. ಆದುದರಿಂದ ತಾಯಿ ತರಕಾರಿ, ಹಣ್ಣು, ನೀರು ಚೆನ್ನಾಗಿ ಸೇವಿಸಬೇಕಾಗುತ್ತದೆ. ಮೂರು ತಿಂಗಳ ನಂತರ ಮಗುವಿಗೆ ಬೇರೆ ಮಣ್ಣಿ (Cerelac, Farex) ಕೊಡಬೇಕಾಗುತ್ತದೆ. ಹಣ್ಣಿನ ರಸ ಕೊಡತೊಡಗಿದರೆ ಮಲಬದ್ಧತೆ ಕಡಿಮೆ ಮಾಡಬಹುದು.

ಐದು ತಿಂಗಳಿಂದ ಮೆದು ಅನ್ನ, ಬೇಳೆ, ಬೆಂದ ತರಕಾರಿ ಹೋಳು, ಸ್ವಲ್ಪ ಸ್ವಲ್ಪ ಕೊಡುತ್ತಾ ಮಗುವಿನ ಆಸಕ್ತಿ ನೋಡಿ ಪ್ರಮಾಣ ಜಾಸ್ತಿ ಮಾಡುತ್ತಾ ಬರಬೇಕು. ಕ್ಲಪ್ತಕಾಲದಲ್ಲಿ ರೋಗ ನಿರೋಧಕ ಚುಚ್ಚುಮದ್ದು ಹಾಕಿಸಬೇಕು. ಪ್ರತೀ ಆರು ತಿಂಗಳಿಗೊಮ್ಮೆ ಹೊಟ್ಟೆ ಹುಳಕ್ಕೆ ಕೊಡುವುದು ಒಳ್ಳೆಯ ಪರಿಪಾಠ. ಚಾಕಲೇಟು, ಅಂಗಡಿಯ ಸಿಹಿತಿಂಡಿಗಳಿಂದ ಮಕ್ಕಳನ್ನು ದೂರವಿಡುವುದು ಒಳ್ಳೆಯ ಅಭ್ಯಾಸ.

ಮಕ್ಕಳ ಮಾನಸಿಕ ಬೆಳವಣಿಗೆ ಆಗಲು ಮಕ್ಕಳನ್ನು ಆಗಾಗ ಮಾತನಾಡಿಸುತ್ತಿರುವುದು, ಪ್ರೀತಿಸುವುದು ಅಲ್ಲದೆ ಪ್ರಾಣಿ, ಪಕ್ಷಿ ಮತ್ತು ಸುತ್ತಮುತ್ತಲ ಪರಿಚಯ ಮಾಡಿಕೊಡುತ್ತಿರಬೇಕು. ಆದಷ್ಟು, ಕಡಿಮೆ ಔಷಧ ಕೊಡಿಸುವುದು ಒಳ್ಳೆಯ ಕ್ರಮ. ಪ್ರತೀ ಸಣ್ಣ ತೊಂದರೆಗೆ ಔಷಧದಿಂದಲೇ ಉಪಶಮನ ಆಗಬೇಕೆಂಬ ಭಾವನೆ ಶುದ್ಧ ತಪ್ಪು. ಒಂದು ವರ್ಷದಿಂದ ನಾವು ತಿನ್ನುವ ಪ್ರತಿಯೊಂದನ್ನು ಮಗುವಿಗೆ ಕೊಡಬಹುದು. ಅದೇ ಸಮಯಕ್ಕೆ ಎದೆಹಾಲು ಬಿಡಿಸುವುದರಿಂದ ಮಗುವಿಗೆ ಬೇರೆ ಆಹಾರ ತಿನ್ನುವುದರಲ್ಲಿ ಆಸಕ್ತಿ ಹುಟ್ಟುತ್ತದೆ.

ಮಗುವನ್ನು ಪ್ರತ್ಯೇಕಿಸದೇ ನಮ್ಮ ಜತೆಯೇ ಕುಳ್ಳಿರಿಸಿಕೊಂಡು ಊಟ ಮಾಡಿಸುವುದು ಒಳ್ಳೆಯಕ್ರಮ. ಮಗುವಿನ ಪ್ರತೀಸಾಧನೆಯನ್ನು, ಉದಾ:- ಕುಳಿತುಕೊಳ್ಳುವುದು, ನಿಲ್ಲುವುದು, ನಡೆಯುವುದು ಮೊದಲಾದುವನ್ನು ಉತ್ತೇಜಿಸಿ ಮನೆಯವರೆಲ್ಲಾ ಕುಳಿತು ನೋಡಿ ನಕ್ಕು ಖುಷಿಪಡಬೇಕು. ಮಣ್ಣು ಹಾಗೂ ನೀರಿನಲ್ಲಿ ಆಡುವುದನ್ನು ಇಷ್ಟಪಡದ ಮಗುವೇ ಇಲ್ಲ. ಇದನ್ನು ಮಾಡಲು ಬಿಡದ ತಂದೆ-ತಾಯಿ ಮಕ್ಕಳ ಮೊದಲ ಶತ್ರು. ಸ್ನಾನ, ಊಟ, ಉಗುರು, ತಲೆಕೂದಲಿನ ಶುಚಿತ್ವ ಪ್ರತಿಯೊಂದರಲ್ಲೂ ಮಕ್ಕಳಿಗೆ ಆಸಕ್ತಿ ಬರುವಂತೆ ಮಾಡಬೇಕು. ಮನೆಯೇ ಮೊದಲ ಪಾಠಶಾಲೆ ಜನನಿ ತಾನೆ ಮೊದಲ ಗುರುವು ಎಂಬ ನಾಣ್ನುಡಿಯನ್ನು ಮಕ್ಕಳ ಮೊದಲ ನಾಲ್ಕು ವರ್ಷಗಳಲ್ಲಾದರೂ ಸರಿಯಾಗಿ ಬಳಕೆಗೆ ಬರುವಂತೆ ಮಾಡಬೇಕು. ಎರಡು ಯಾ ಮೂರು ವರ್ಷಕ್ಕೆ ಶಾಲೆಗೆ ಕಳುಹಿಸುವುದರಿಂದ ಮಕ್ಕಳು ಮನೆ - ತಾಯಿಯ ಪ್ರೇಮದಿಂದ ವಂಚಿತರಾಗುತ್ತಾರೆ.

ಶಾಲೆಗೆ ಕಳುಹಿಸಿತೊಡಗಿದ ಮೇಲೂ ಒಂದೇ ದಿನ ಎಲ್ಲಾ ಕಲಿಸಿ ಹುಷಾರು ಮಾಡಲು ಹೋಗಬಾರದು. ಸ್ವಲ್ಪವೇ ವಿಷಯಗಳನ್ನು ಹೇಳಿಕೊಟ್ಟು ಮಧ್ಯೆ ಮಧ್ಯೆ ಕತೆ ಕವಿತೆಗಳನ್ನು ಹೇಳಿ ಮಕ್ಕಳ ಮನಸ್ಸನ್ನು ಗೆಲ್ಲಬೇಕು, ತಪ್ಪುಗಳನ್ನು ತಿದ್ದಬೇಕು. ಉಡುಗೆ - ತೊಡುಗೆ ಕೂಡಾ ಒಂದು ಗೊಂಬೆಗೆ ಮಾಡಿದಂತೆ ಮಾಡದೇ ಹವಾಗುಣಕ್ಕೆ ತಕ್ಕಂಥದ್ದು ಇದ್ದರೆ ಒಳ್ಳೆಯದು. ಮಕ್ಕಳನ್ನು ಬೇರೆಯವರ ಮುಂದೆ ಅವಹೇಳನ ಮಾಡು

ವುದು, ಮಾಡಿದ ತಪ್ಪುಗಳನ್ನು ಎತ್ತಿ ಹೇಳಿ ಮಗುವಿನ ಮನಸ್ಸನ್ನು ನೋಯಿಸುವುದು ಈ ಹಕ್ಕು ನಮಗಿಲ್ಲ. ಮಕ್ಕಳ ಮುಂದೆ ಮನೆಯಲ್ಲಿ ದೊಡ್ಡವರು ಜಗಳವಾಡುವುದು, ಅಳುವುದು, ಒಳ್ಳೆಯದಲ್ಲ. ಸುಮಾರಾಗಿ ಮಕ್ಕಳು ತಂದೆ ತಾಯಿಯರನ್ನು ಮಾದರಿಯಾಗಿಟ್ಟುಕೊಂಡು ಬೆಳೆಯುತ್ತಾರೆ. ಸುಳ್ಳು ಹೇಳುವುದು, ಕದಿಯುವುದು, ಹೊಡೆಯುವುದು ಮುಂತಾದುವು ಗಳನ್ನು ಮಕ್ಕಳಲ್ಲಿ ಕಂಡಾಗ ಕೂಡಲೇ ವಿರೋಧಿಸಿ ಸರಿಯಾದುದನ್ನು ಮನದಟ್ಟು ಮಾಡಬೇಕು. ನಾವು ನಕ್ಕು ಬೇರೆಯವರನ್ನು ನಗಿಸುವುದು ಎಲ್ಲರ ಆರೋಗ್ಯಕ್ಕೆ ಒಳ್ಳೆಯದು.

ಇತ್ತೀಚಿನ ದಿನಗಳಲ್ಲಿ ಪರೀಕ್ಷೆಯ ಹಿಂದಿನ ದಿನಗಳಲ್ಲಿ ಜ್ವರ ಅಂತ ಚಿಕಿತ್ಸೆಗೆ ಬರುವ ಮಕ್ಕಳ ಪ್ರಮಾಣ ಜಾಸ್ತಿಯಾಗುತ್ತಿದೆ. ಇದಕ್ಕೆ ಯಾರು ಕಾರಣರು? ಪೋಷಕರು. ವಿಪರೀತ ಓದಿಸುವುದು, ಮೊದಲ ರ್‍ಯಾಂಕೇ ಬರಬೇಕು ಮುಂತಾದ ಮಾನಸಿಕ ಒತ್ತಡ, ಇವುಗಳಿಗೆ ಒಳಗಾಗಿ ಮಕ್ಕಳಲ್ಲಿ ಜ್ವರ ಬರುತ್ತದೆ. ಸುಮಾರು 4 ಯಾ 5ನೇ ತರಗತಿಯವರೆಗೆ ಓದಿಸಬೇಕಾ ಗುತ್ತದೆ. ಆಮೇಲೆ ಮಕ್ಕಳು ಅವರಾಗಿ ಅರಿತು ಓದಲು ಶುರುಮಾಡು ತ್ತಾರೆ. ಆದರೆ ಕ್ಲಪ್ತಕಾಲದಲ್ಲಿ ಜೀವಸತ್ವಯುತ ಆಹಾರ ಒದಗಿಸುವುದು, ವ್ಯಾಯಾಮದ ಅವಶ್ಯಕತೆ ಹೇಳಿಕೊಡುವುದು, ಆಟೋಟಗಳಲ್ಲಿ ಭಾಗವಹಿಸು ವಂತೆ ಪ್ರೇರೇಪಿಸುವುದು ಮುಖ್ಯ. ಹೆಣ್ಣು–ಗಂಡು ಎಂಬ ತಾರತಮ್ಯ ತೋರದೆ ಅವರವರ ಆಸಕ್ತಿ, ಸಾಮರ್ಥ್ಯಕ್ಕನುಗುಣವಾಗಿ ಮಕ್ಕಳನ್ನು ಓದಿಸಿ, ಅವರ ಕಾಲಮೇಲೆ ನಿಂತು ಅವರು ಬದುಕುವಂತೆ ಮಾಡಿದರೆ ತಂದೆ – ತಾಯಿಯರು ತಮ್ಮ ಅತಿಮುಖ್ಯ ಕರ್ತವ್ಯ ಮಾಡಿದಂತೆ.

ಇತ್ತೀಚಿನ ದಿನಗಳಲ್ಲಿ ಮನುಷ್ಯ–ಮನುಷ್ಯ ಸಂಬಂಧಗಳೇ ದೂರವಾಗ ತೊಡಗಿದುದರಿಂದ, ಹಾಗಾಗದಂತೆ ಮಕ್ಕಳನ್ನು ಒಳ್ಳೆಯ ಸಂಘಜೀವಿಗಳಾಗಿ ಬೆಳೆಸಬೇಕು. ಮುಂದೆ ಅವರನ್ನು ಒಳ್ಳೆಯ ನಾಗರಿಕರನ್ನಾಗಿ ಮಾಡುವ ಜವಾಬ್ದಾರಿ ಯೋಚಿಸಿಯೇ ಮಕ್ಕಳನ್ನು ಹೊಂದುವಂತಾಗಬೇಕು.

ಮಹಿಳೆ ಮತ್ತು ಧರ್ಮಾಚರಣೆ

— ಸುಶೀಲಾ ಆರ್. ರಾವ್

"ದೇವರ ಭಯವೇ ಜ್ಞಾನದ ಆರಂಭ" ಎಂಬ ಗಾದೆ ಮಾತು ಇದೆಯಲ್ಲ. ಧರ್ಮ, ದೇವರು, ವ್ರತ, ನಿಯಮ ಇವುಗಳೆಲ್ಲ ಸುಸಂಸ್ಕೃತ ಮಾನವತೆಯತ್ತ ಮುನ್ನಡೆಸುವ ಸಾಧನೆಯ ಹಾದಿಯಲ್ಲಿನ ದಿಕ್ಸೂಚಿ ಬಿಂಬಗಳು. ಸಂಸಾರದ ಕೇಂದ್ರ ಬಿಂದುವೆನಿಸಿದ ಮಹಿಳೆ ತಾನು ಸದ್ಧರ್ಮನಿರತಳಾಗಿ ತನ್ನವರನ್ನು ಉತ್ತಮ ಜೀವನಧರ್ಮದೆಡೆಗೆ ನಡೆಸುವುದು ನಿಜಕ್ಕೂ ಶ್ರೇಯಸ್ಕರ.

—ಸಂ.

ಮಾನವ ಜೀವನದಲ್ಲಿ ಧರ್ಮಕ್ಕೆ ಪ್ರಮುಖ ಸ್ಥಾನ ಸಲ್ಲಬೇಕು. 'ಧರ್ಮ' ಪದವು "ಧೃ" ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. "ಧೃ" ಧಾತುವಿಗೆ ಧಾರಣ, ಪೋಷಣ ಎಂಬ ಅರ್ಥವಿದೆ. ಯಾವುದು ತನ್ನನ್ನು ರಕ್ಷಿಸಿಕೊಂಡು, ಇತರರ ರಕ್ಷಣೆ, ಉದ್ಧಾರ ಮಾಡುವುದೋ ಅದು ಧರ್ಮ. ಸಾರ್ವಕಾಲಿಕವೂ ದೇಶಕಾಲಾತೀತವೂ ಆದದ್ದು ಧರ್ಮ. "ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ" ಎಂದು ವೇದ ಸಾರುತ್ತದೆ. ಅಂದರೆ ಜಗತ್ತಿನ ಪ್ರತಿಷ್ಠೆಗೆ ಕಾರಣವಾದುದು ಧರ್ಮ. ಅದು ಅನಂತ ಹಾಗೂ ಅಪಾರ.

ಇಂದಿನ ಸ್ಥಿತ್ಯಂತರದ ಭಾರತದಲ್ಲಿ ಸ್ತ್ರೀಯರಲ್ಲಿ ಧಾರ್ಮಿಕ ಪ್ರವೃತ್ತಿಯು ಇರಬೇಕಾದುದು ಅತ್ಯಂತ ಅಗತ್ಯ. ಕೆಲವು ಆಧುನಿಕ ಮನೋಭಾವದ ಮಹಿಳೆಯರು, ತಾವು ಧಾರ್ಮಿಕರಾದರೆ ಇತರರು ತಮ್ಮನ್ನು ದುರ್ಬಲ ಮನಸ್ಸಿನವರೆಂದು ತಿಳಿಯಬಹುದೆಂದು ಅಳುಕುತ್ತಾರೆ. ಈ ಭಾವನೆ ಸರಿಯಲ್ಲ. ಧಾರ್ಮಿಕ ಪ್ರವೃತ್ತಿಯಲ್ಲಿ ಸ್ತ್ರೀಯು ಪುರುಷನಿಗಿಂತ ಕಡಿಮೆಯಲ್ಲ. ಈ ದೃಷ್ಟಿಯಲ್ಲಿ ಪುರುಷರು ಸ್ತ್ರೀಯರನ್ನು ಮಾನ್ಯ ಮಾಡಲೇಬೇಕು. ಹೀಗೆ ಪುರುಷರಿಂದ ಮಾನಿತಳಾದ್ದರಿಂದಲೇ ಸ್ತ್ರೀಯನ್ನು 'ಮೇನಾ' ಎಂದು ಕರೆಯಲಾಗಿದೆ ಎಂದು ವಿದ್ವಾಂಸರು ವರ್ಣಿಸಿದ್ದಾರೆ.

ಧಾರ್ಮಿಕ ಪ್ರವೃತ್ತಿ ಇರುವ ಮಹಿಳೆಯನ್ನು ವ್ಯಾಸಮಹರ್ಷಿಗಳು "ತಪೋಧನಾ" ಎಂದು ಕರೆದು ಗೌರವಿಸಿದ್ದಾರೆ. ಇಂದಿನ ಮಹಿಳೆಯರು ಅಡುಗೆ ಕೋಣೆಯ ನಾಲ್ಕುಗೋಡೆಗಳ ಹೊರಗಿನ ವಿವಿಧ ಕ್ಷೇತ್ರಗಳಲ್ಲಿ ಕಾಲಿರಿಸಿದ್ದಾರೆ. ಅವರಿಗೆ ಇರುವ ಸಮಯಾವಕಾಶ ಸೀಮಿತವಾದರೂ ಕೆಲವ ರಾದರೂ ವಿವಿಧ ಧಾರ್ಮಿಕ ವ್ರತಗಳನ್ನು ಆಚರಿಸುತ್ತಿದ್ದಾರೆ. ಇಂತಹ ವಿವಿಧ ವ್ರತಗಳಾದ ವರಲಕ್ಷ್ಮೀವ್ರತ, ಗಜಗೌರೀವ್ರತ, ಪತಿಸಂಜೀವಿನೀ ವ್ರತ, ಮಂಗಳ ಗೌರೀವ್ರತ, ಸರಸ್ವತೀ ವ್ರತ ಇತ್ಯಾದಿ ವ್ರತಗಳು ಧಾರ್ಮಿಕ ಆಚರಣೆಗಳಾಗಿವೆ. ಇಂತಹ ಆಚರಣೆಗಳಿಂದ ಮಹಿಳೆಯರಲ್ಲಿ ದೈವಭಕ್ತಿ, ಮಾನಸಿಕ ಸ್ಥಿರತೆ, ಶಾಂತಿ, ಸೌಹಾರ್ದ ಮನೋಭಾವನೆಗಳು ಹೆಚ್ಚುತ್ತವೆ. ದುಡಿಯುವ ಮಹಿಳೆಯರಿಗಂತೂ ಅವುಗಳು ಅಡುಗೆಕೆಲಸ, ಹೊರಗಿನ ದುಡಿತಗಳ ಅವಿರತವಾದ ಏಕತಾನತೆಯನ್ನು ಹೋಗಲಾಡಿಸಿ, ನವೋಲ್ಲಾಸ ತುಂಬುತ್ತವೆ.

ಮಾನವ ಜೀವಿತದಲ್ಲಿ ಧರ್ಮ, ಅರ್ಥ, ಕಾಮ, ಮೋಕ್ಷ – ಈ ನಾಲ್ಕು ಪುರುಷಾರ್ಥಗಳೂ ಅಗತ್ಯ. ಅರ್ಥ, ಕಾಮಗಳು ಧರ್ಮ ವಿರುದ್ಧ ವಾಗಿರುವಂತಿಲ್ಲ, ಅಲ್ಲದೆ ಜೀವನದಲ್ಲಿ ಅವಕ್ಕೆ ಪ್ರಧಾನ ಸ್ಥಾನವೂ ಸಲ್ಲದು. "ಅರ್ಥ, ಕಾಮಗಳು ತುಂಟ ಹಸುಗಳಂತೆ. ಧರ್ಮ ಮೋಕ್ಷಗಳು ಆ ತುಂಟ ಹಸುಗಳನ್ನು ಬಿಗಿಯುವ ಕಂಬಗಳಂತೆ. ಆಗ ಅವುಗಳು ಅಮೃತ ಧಾರೆ ಯನ್ನೇ ಸುರಿಸುತ್ತವೆ" ಎಂಬ ವಿದ್ವಾಂಸರ ಮಾತಿನಲ್ಲಿ ಧರ್ಮ, ಮೋಕ್ಷಗಳ ಹಿರಿಮೆ ಅರಿವಾಗುತ್ತದೆ. ಇಂದು ವೈಭವದ, ಆಡಂಬರದ ಬದುಕನ್ನು ಸಾಗಿಸ ಬಯಸುವ ಮಹಿಳೆಯರಿಗೆ ಈ ವಿವೇಕ ಅತ್ಯಂತ ಅಗತ್ಯವಾಗಿದೆ.

ಧರ್ಮವು ಶಾಖೋಪಶಾಖೆಗಳಿಂದ ಕೂಡಿದ ಒಂದು ವಿಶಾಲ ವಟವೃಕ್ಷ. ಇದರ ಬೇರಿಗೆ, ಇದರ ಬೆಳವಣಿಗೆಗೆ, ಸುಸ್ಥಿತಿಗೆ ನೀರು ಅಗತ್ಯ. ಇದಕ್ಕೆ ಅಂತರ್ಗತವಾಗಿ ನೀರು ಎರೆಯಬೇಕಾದವಳು ಮಹಿಳೆಯೇ. ಏಕೆಂದರೆ ಅವಳು ಸಂಸಾರದ ಸಮರ್ಥ ವ್ಯಕ್ತಿ, ಹಾಗೂ ಕೇಂದ್ರಬಿಂದು; ಮುಖ್ಯವಾಗಿ ಮಕ್ಕಳಿಗೆ ಚೈತನ್ಯದಾಯಿ. ಭಾವನಾಮಯಿ ಸ್ತ್ರೀ ಧಾರ್ಮಿಕ

ಳಾದಷ್ಟೂ ಅವಳಿಗೆ ಭೂಷಣ. ಅವಳ ವಿವಿಧ ಕಾರ್ಯಾಚರಣೆಗಳು, ಭಕ್ತಿಯ ವರ್ತನೆ, ಮಾತುಗಳು, ನಯವಾದ ಉಪದೇಶಗಳು – ಮಕ್ಕಳನ್ನು ಧಾರ್ಮಿಕತೆಯತ್ತ ತಿರುಗಿಸಬಲ್ಲವು. ಮಾತೃ ಸ್ವರೂಪಿಯಾದ ಅವಳು ಮಾತೃಸದೃಶವಾದ ಸಹಜ ಆಂತರಿಕ ಮಮತೆಯಿಂದ ಈ ಧಾರ್ಮಿಕತೆಯನ್ನು ಉಳಿಸಿ ಬೆಳೆಸಿಕೊಂಡು ಬರಬೇಕಾಗಿದೆ. ಅಂತಹ ಗುಣ ನಮ್ಮಲ್ಲಿರಲಿ. ಆ ಮಹಾನ್ ಧರ್ಮವೇ ನಮ್ಮೆಲ್ಲರನ್ನೂ ರಕ್ಷಿಸಲಿ ಎಂದು ಹಾರೈಸೋಣವೇ?

ಉದ್ಯೋಗಸ್ಥ ಮಹಿಳೆ ತಾಯಿಯಾಗಿ

— ವಿದ್ಯಾಗಣೇಶ್

"ಉದ್ಯೋಗಸ್ಥ ಮಹಿಳೆ ತಾಯಿಯಾದಾಗ ಪಡಬೇಕಾದ ಉಭಯ ಸಂಕಟ ಅನುಭವಿಸಿದವರಿಗೆ ಮಾತ್ರ ಅರ್ಥವಾಗುವಂಥದ್ದು. ಆದರೂ ಕೈಹಿಡಿದಾತನ ಸಹಕಾರವಿದ್ದರೆ ಆಕೆ ತನ್ನ ಕರ್ತವ್ಯಗಳೆಲ್ಲವನ್ನೂ ಶಾಂತಚಿತ್ತದಿಂದ ನಿರ್ವಹಿಸಿ ತನ್ನ ಕರುಳಕುಡಿಯನ್ನು ಕೊರತೆ ಇಲ್ಲದೆ ಬೆಳೆಸಿ ಸಾರ್ಥಕ್ಯ ಹೊಂದುವ ಗುರಿಯನ್ನು ತಲುಪಬಲ್ಲಳು".

— ಸಂ.

ಇಂದಿನ ಆಧುನಿಕ ಯುಗದಲ್ಲಿ ಮಹಿಳೆ ಉದ್ಯೋಗಕ್ಷೇತ್ರದಲ್ಲಿ ಕಾಲಿಟ್ಟು ಪುರುಷನಿಗೆ ಸಮನಾಗಿ ದುಡಿಯುತ್ತಿರುವುದು ಸರ್ವ ಸಾಮಾನ್ಯವಾಗಿದೆ. ಮಧ್ಯಮ ವರ್ಗದ ಜನತೆಗೆ ಈಗಿನ ಏರುತ್ತಿರುವ ಬೆಲೆಗಳು, ದುಬಾರಿಯಾಗಿರುವ ಮಕ್ಕಳ ವಿದ್ಯಾಭ್ಯಾಸ, ಇನ್ನಿತರ ಖರ್ಚು ವೆಚ್ಚಗಳೊಂದಿಗೆ ಸಂಸಾರ ಸರಿದೂಗಿಸಲು ಮಹಿಳೆಯ ವರಮಾನವೂ ಅನಿವಾರ್ಯವಾಗಿದೆ. ಅಂತೆಯೇ ವಿದ್ಯಾವಂತೆ ಮಹಿಳೆ ಕೂಡಾ ಉದ್ಯೋಗಸ್ಥೆಯಾಗಿ ಆರ್ಥಿಕವಾಗಿ ಸ್ವಾವಲಂಬಿಯಾಗುವುದನ್ನೇ ಆಯ್ಕೆ ಮಾಡಿಕೊಳ್ಳುತ್ತಾಳೆ. ಆದರೆ ಆರ್ಥಿಕ ಸ್ವಾವಲಂಬನೆಯ ಜೊತೆಗೆ ತೆಕ್ಕೆಯಲ್ಲಿ ಹಲವಾರು ತಾಪತ್ರಯಗಳನ್ನು, ಸಂಕಟದ ಕ್ಷಣಗಳನ್ನು ಜೋತಾಡಿಸಿಕೊಂಡಿರಬೇಕಾದುದು ಅನಿವಾರ್ಯವಾಗಿದೆ.

ಮಹಿಳೆ ಉದ್ಯೋಗಸ್ಥಳಾದ ಮಾತ್ರಕ್ಕೆ ತನ್ನ ಜವಾಬ್ದಾರಿಗಳನ್ನೆಲ್ಲ ತೊಡೆದು ಹಾಕುವಂತಿಲ್ಲ. ಉದ್ಯೋಗಿಯಾಗಿ, ಗೃಹಿಣಿಯಾಗಿ ಪಾತ್ರ ನಿರ್ವಹಿಸುವಾಗ ಎಷ್ಟೋ ಸಂದರ್ಭಗಳಲ್ಲಿ ಎರಡು ದೋಣಿಗಳಲ್ಲಿ ಕಾಲಿಟ್ಟು ನೀರಲ್ಲಿ ಸಂಚರಿಸುವ ಅನುಭವ. ಎಷ್ಟೇ ಎಚ್ಚರ ವಹಿಸಿದರೂ ಸಮತೋಲನ ತಪ್ಪುವ ಸಾಧ್ಯತೆಗಳು ಇರುತ್ತವೆ. ಜಾಣ ಗೃಹಿಣಿ ತನ್ನ ವೃತ್ತಿಜೀವನವು ಸಂಸಾರಕ್ಕೆ ಮುಳ್ಳಾಗದಂತೆ ಜಾಗ್ರತೆ ವಹಿಸುವುದರಿಂದ ಎರಡೂ ಪಾತ್ರ

ಗಳನ್ನು ಸಮರ್ಥವಾಗಿ ನಿರ್ವಹಿಸುವುದರಲ್ಲಿ ಸಫಲಳಾಗುತ್ತಾಳೆ. ಆದರೆ ಸಮಸ್ಯೆಗಳ ವಿರಾಟ ಸ್ವರೂಪ ಪ್ರಾರಂಭವಾಗುವುದೇ ಆಕೆ ತಾಯಿಯಾದಾಗ.

ತಾಯ್ತನ ಒಂದು ಸುಂದರ ಅನುಭವ. ಸ್ತ್ರೀ ಗರ್ಭ ಧರಿಸಿದ ದಿನದಿಂದ ಪ್ರತಿಕ್ಷಣವೂ ನಿರೀಕ್ಷೆಯಲ್ಲೇ ಕಳೆದು, ದಿನ ತುಂಬಿ, ಶಿಶುವಿಗೆ ಜನ್ಮವಿತ್ತು ಮಡಿಲಲ್ಲಿ ಇರಿಸಿಕೊಂಡಾಗ ಮನದಲ್ಲೆಲ್ಲ ಸಾರ್ಥಕ್ಯದ ಭಾವ. ಆ ಕ್ಷಣದಲ್ಲಿ ತಾಯಿಗೆ ಪ್ರಪಂಚದಲ್ಲೆಲ್ಲಾ ಸುಂದರ ವಸ್ತು ಮಗು. ಮುಂದೆ ಮಗುವನ್ನು ಮುದ್ದಾಡುತ್ತಾ ಅದರೊಂದಿಗೆ ಆಟವಾಡುತ್ತಾ ಹಾಯಾಗಿರುವ ಸಂಭ್ರಮ. ಆದರೆ ಉದ್ಯೋಗಸ್ಥೆ ತಾಯಿಗೆ ಆ ಗಳಿಗೆಯಿಂದಲೇ ಚಿಂತೆ, ಆತಂಕ ಆರಂಭ. ಎದುರಾಗಿರುವ ದೊಡ್ಡ ಸಮಸ್ಯೆ ಮಗುವನ್ನು ಹೇಗೆ ಬೆಳೆಸುವುದೆಂಬುದೊಂದೇ. ಇಂದಿನ ಜೀವನಕ್ರಮದಲ್ಲಿ ಅವಿಭಕ್ತ ಕುಟುಂಬ ಕಡಿಮೆ, ಚಿಕ್ಕಪುಟ್ಟ ಸಂಸಾರವೇ ಜಾಸ್ತಿ. ಮನೆಯಲ್ಲಿ ಅತ್ತೆಯೋ, ಅಥವಾ ಸಂಬಂಧಿಕ ಮಹಿಳೆಯರೋ ಇದ್ದಲ್ಲಿ ಒಳ್ಳೆಯದು, ಇಲ್ಲದಿದ್ದರೆ ಮಕ್ಕಳನ್ನು ದೊಡ್ಡವರಾಗಿ ಬೆಳೆಸುವವರೆಗಿನ ಸಮಸ್ಯೆ ಬಲು ದೊಡ್ಡದು. ಪುಟ್ಟ ಕಂದನ ಬೇಕು ಬೇಡಗಳನ್ನು ಗಮನಿಸಿ, ಅತ್ತರೆ ಸಂತೈಸಿ, ಹಸಿವು, ನಿದ್ರೆ, ನೀರಡಿಕೆಗಳ ಕೂಗಿಗೆ ಓಗೊಟ್ಟು ಬೆಳೆಸುವುದು ಗುರುತರವಾದ ಹೊಣೆ. ಈ ಹೊಣೆ ಹೊರಲು ಸಿದ್ಧರಾಗಿ ಯಾರಾದರೂ ಸಹಾಯ ಹಸ್ತ ಚಾಚಿದರೆ ಉದ್ಯೋಗಸ್ಥೆ ತಾಯಿಗೆ ದೊಡ್ಡ ಭಾರ ಇಳಿಸಿದಂತೆ. ಅದಕ್ಕಾಗಿ ಯಾರ ಮೂಲಕವಾದರೂ ವಿಚಾರಿಸಿ, ಹೇಗೋ ಪ್ರಯತ್ನಿಸಿ, ಮಗುವನ್ನು ನೋಡಿಕೊಳ್ಳುವ ಹೆಂಗಸು, ಹುಡುಗಿ ದೊರೆತರೆ ಒಮ್ಮೆಗೆ ಸಮಾಧಾನದ ನಿಡಿದುಸಿರು. ಈಗೀಗ ಪಟ್ಟಣವೇಕೆ, ಹಳ್ಳಿಗಳಲ್ಲಿ ಕೂಡಾ ಕೆಲಸಕ್ಕೆಂದು ಬರುವವರು ದೊರೆಯುವುದೇ ಅಪರೂಪ. ಅಂತೂ ಸಿಕ್ಕಿದರಲ್ಲಾ ಎಂದು ಸಂತೋಷಪಟ್ಟು, ಅವರಿಗೆ ತರಬೇತಿ, ಸಲಹೆಗಳನ್ನೆಲ್ಲಾ ಕೊಟ್ಟು ಮಗುವನ್ನು, ಮನೆಯನ್ನು ಅವರ ವಶಕೊಪ್ಪಿಸಿ, ಬಂದಾಗಲೂ ಸಮಸ್ಯೆ ಮುಗಿಯುವುದಿಲ್ಲ. ಕೆಲವರು ಸಣ್ಣಪುಟ್ಟ ಕಳ್ಳತನ, ಸುಳ್ಳು ಮೋಸಗಳಲ್ಲಿ ಪರಿಣತರಾಗಿರುತ್ತಾರೆ. ಆಗ ಮನೆಯಲ್ಲಿದ್ದ ಪಾತ್ರೆ, ತಟ್ಟೆ, ಚಮಚ, ಅಲಂಕಾರದ ವಸ್ತುಗಳು ಮಂಗಮಾಯವಾಗಿ ಬಿಡುವುದುಂಟು. ಹೀಗಿದ್ದರೂ ಮಗುವನ್ನಾದರೂ ಚೆನ್ನಾಗಿ ನೋಡಿ

ಕೊಂಡಿರಲಿ ಎಂದು ಬಾಯ್ಮುಚ್ಚಿಕೊಳ್ಳಬೇಕಾದ ಅಸಹಾಯಕತೆ. ಆದರೆ ಕೆಲವೊಮ್ಮೆ ಮಗುವನ್ನು ಅದರ ಪಾಡಿಗೆ ಬಿಟ್ಟು ಪಕ್ಕದ ಮನೆಯವರೊಂದಿಗೆ ಹರಟುತ್ತಾ ನಿಂತರೆ ಮಗುವಿನ ಅಳು, ಹಸಿವು, ನಿದ್ರೆಗಳನ್ನು ಅಲಕ್ಷಿಸಿಯೇ ಬಿಡುವ ಮಂದಿ ಕಂಡು ಬರುತ್ತಾರೆ. ಮತ್ತೆ ಕೆಲವರು ಒಂದು ದಿನ ಬಂದರೆ ನಾಲ್ಕು ದಿನ ರಜಾ. ಉದ್ಯೋಗಸ್ಥೆ ತಾಯಿ ಆಫೀಸಿನಲ್ಲಿ ತನಗೆ ಸಿಗುವ ರಜೆಯನ್ನು ಲೆಕ್ಕಾಚಾರ ಹಾಕಿಯೇ ವರ್ಷವಿಡೀ ಹೊಂದಿಸಿಕೊಳ್ಳಬೇಕಲ್ಲವೆ? ಇಲ್ಲದಿದ್ದರೆ ಸಂಬಳ ಕಡಿತ, ಮೇಲಧಿಕಾರಿಗಳಿಂದ ಎಚ್ಚರಿಕೆ, ಸಹೋದ್ಯೋಗಿಗಳಿಂದ ಮೂದಲಿಕೆ, ಇದರಿಂದ ಸಾಕಪ್ಪಾ ಸಂಸಾರ ಎನಿಸುತ್ತದೆ. ಮಗುವನ್ನು ಚೆನ್ನಾಗಿ ನೋಡಿಕೊಳ್ಳುವವರು ಕೆಲವೊಮ್ಮೆ ಪುಣ್ಯವಶಾತ್ ದೊರೆತಾಗ ತಾಯಿಯ ನೆಮ್ಮದಿ ವರ್ಣನಾತೀತ. ಕೆಲವೊಮ್ಮೆ ಉದ್ಯೋಗಸ್ಥೆ ತಾಯಿ ಬೇರಾವ ಮಾರ್ಗವೂ ಇಲ್ಲದಾಗ ಮಗುವನ್ನು ದೂರದಲ್ಲಿರುವ ತನ್ನ ತವರಿನಲ್ಲೋ, ಅತ್ತೆಮನೆಯಲ್ಲೋ ಬಿಟ್ಟು ವಾರಕ್ಕೊಮ್ಮೆ, ತಿಂಗಳಿಗೊಮ್ಮೆ, ಮೂರು ತಿಂಗಳಿಗೊಮ್ಮೆ ನೋಡಲು ಹೋಗುವ ದಯನೀಯ ಸಂದರ್ಭಗಳೂ ಇವೆ. ಅಂತಹ ಪ್ರಸಂಗದಲ್ಲಿ ತನ್ನ ಪ್ರೀತಿಯ ಕರುಳ ಕುಡಿಯನ್ನು ಹಲವಾರು ದಿನಗಳವರೆಗೆ ನೋಡದೇ, ಮುದ್ದಿಡದೆ ಅದನ್ನು ತಾಯಿಯ ಪ್ರೀತಿಗೆ ಎರವಾಗಿಸುತ್ತೇನೆಂಬ ಮಾನಸಿಕ ಯಾತನೆ ಆಕೆಗೆ ತಪ್ಪಿದಲ್ಲ. ಆದರೆ ಭವಿಷ್ಯದ ಭದ್ರತೆಗಾಗಿ, ಮಕ್ಕಳ ಮುಂದಿನ ಒಳಿತಿಗಾಗಿ ಉದ್ಯೋಗಕ್ಕೆ ಅಂಟಿಕೊಂಡು ಪರಿಸ್ಥಿತಿಯೊಂದಿಗೆ ರಾಜಿ ಮಾಡಿಕೊಳ್ಳುವ ಅನಿವಾರ್ಯತೆ ಇರುತ್ತದೆ.

ಇತ್ತೀಚೆಗೆ ಪಟ್ಟಣಗಳಲ್ಲಿ ಅಲ್ಲಲ್ಲಿ ಕೆಲವು ಮಹಿಳೆಯರು ಹಣ ಸಂಪಾದನೆಯ, ಇಲ್ಲವೇ ಸಮಯದ ಸದುಪಯೋಗದ ಉದ್ದೇಶದಿಂದ 'ಬೇಬಿ ಸಿಟ್ಟಿಂಗ್,' 'ಪ್ಲೇ ಹೋಂ' ಇತ್ಯಾದಿಗಳನ್ನು ನಡೆಸುತ್ತಿರುವುದು ಉದ್ಯೋಗಸ್ಥ ತಾಯಂದಿರಿಗೆ ವರದಾನವಾದಂತಿದೆ. ಆದರೆ ಅಲ್ಲಿ ಮಗುವು ಹೊಂದಿಕೊಳ್ಳುವವರೆಗೆ ತಾಯಿಗೆ ಮಾನಸಿಕ ತಾಕಲಾಟ ಇದ್ದೇ ಇದೆ. ಬೆಳಿಗ್ಗೆ ಬೇಗನೇ ಎದ್ದು ತಿಂಡಿ, ಕಾಫಿ, ಅಡುಗೆ, ಮನೆಗೆಲಸದ ಜೊತೆಗೆ ಶಾಲೆಗೆ

ಹೋಗುವ ಮಕ್ಕಳಿಗೆ ಬೇಕಾದ ತಯಾರಿ, ಆಫೀಸಿಗೆ ಹೊರಡುವ ಸಿದ್ಧತೆ, ಇವೆಲ್ಲವನ್ನೂ ಉಸಿರು ಬಿಗಿಹಿಡಿದು ಪೂರೈಸಿ ಕಣ್ಣನ್ನು ಗಡಿಯಾರದಲ್ಲೇ ನೆಟ್ಟು, ನಡುನಡುವೆ ಅಮ್ಮನಿಗಾಗಿ ಅಳುತ್ತಿರುವ ಕಂದನನ್ನು ಸಂತೈಸಿ, ಮತ್ತೆ ಅದಕ್ಕೆ ಬೇಕಾಗುವ ಬಟ್ಟೆ, ಹಾಲು, ಊಟ ಎಲ್ಲ ಬ್ಯಾಗಿನಲ್ಲಿ ಹೊಂದಿಸಿಟ್ಟು, ಸಮಯಕ್ಕೆ ಸರಿಯಾಗಿ ಹೊರಡುವುದೆಂದರೇ ದೊಡ್ಡ ಯಾಗ ಪೂರೈಸಿದಂತೆ. ಹೊಸ ಜಾಗ, ಹೊಸ ಪರಿಸರ, ಹೊಸ ಜನರೊಂದಿಗೆ ಮಗುವನ್ನು ಒಪ್ಪಿಸಿ ಅಲ್ಲಿಂದ ಹೊರಡುವಾಗ ಮಗುವಿನ ಏರುಧ್ವನಿಯ ಅಳು ತಾಯಿಗೂ ಕಣ್ಣೀರು ತರಿಸುತ್ತದೆ. ಮಗುವಿಗೆ ಬೇಕಾದ ತಾಯಿಯ ಪ್ರೀತಿ, ಬಿಸಿಯಪ್ಪುಗೆ, ಅಕ್ಕರೆ, ಒಡನಾಟಗಳನ್ನು ಕೊಡಲಾರದ ಬಗ್ಗೆ ಕಂಪ್ಲೇಂಟುಗಳನ್ನು, ಬೇಡಿಕೆಗಳನ್ನು ಇನ್ನೂ ಏನೇನನ್ನೋ ಮಗುವಿನ ಅಳು ವಿನಲ್ಲಿ ಕಲ್ಪಿಸಿಕೊಳ್ಳುತ್ತಾ ಮನದಲ್ಲೇ ತಾಯಿ ಕೊರಗಬೇಕಾಗುತ್ತದೆ. ಆಫೀಸು ತಲುಪಿದರೂ ಮಗುವಿನ ಅಳುವೇ ನಿಂತಲ್ಲಿ, ಕುಳಿತಲ್ಲಿ, ಕಿವಿಯ ಬಳಿ ಮೊರೆಯುವಂತಿರುತ್ತದೆ. ಎಂತಹ ದೃಢಚಿತ್ತದ ಮಹಿಳೆಗೂ ತನ್ನ ಕೆಲಸದಲ್ಲಿ ತಲ್ಲೀನಳಾಗಲು ಕಷ್ಟಸಾಧ್ಯವಾಗುತ್ತದೆ. ಕ್ರಮೇಣ ಮಗು ಅಲ್ಲಿ ಹೊಂದಿಕೊಂಡರೂ ತಾಯಿಯ ಮನಸ್ಥಿತಿಯಲ್ಲಿ ಹೆಚ್ಚು ಸುಧಾರಣೆ ಎನಿಸುವುದಿಲ್ಲ. ಮಗುವಿನ ಲಾಲನೆ ಪಾಲನೆ, ಆರೈಕೆ, ಆಟಪಾಠ, ಬಾಲಲೀಲೆಗಳನ್ನು ನೋಡಿ, ಅನುಭವಿಸಿ, ಅದರೊಂದಿಗೆ ತಾನೂ ಸಡಗರ ಪಡುವ ಅವಕಾಶ ದಿಂದ ವಂಚಿತಳಾದೆನೆಂಬ ಮನಃಕ್ಲೇಶ. ಹಾಗೆಯೇ ಮಗು ಬೆಳೆದು ಶಾಲೆಗೆ ಸೇರಿ ಶಿಕ್ಷಣ ಪಡೆಯುವಂತಾದಾಗಲೂ ತಾಯಿಗೆಲ್ಲಿಯ ನೆಮ್ಮದಿ? ಮಗನನ್ನು ತಿದ್ದಲು, ವಿದ್ಯೆ, ಬುದ್ಧಿ ಹೇಳಲು, ಶಿಸ್ತು, ನಡತೆ ಕಲಿಸಲು ತನಗಿರುವ ಸಮಯದ ಅಭಾವದಿಂದ ತಾನು ಇತರ ತಾಯಂದಿರಿಗಿಂತ ಕರ್ತವ್ಯ ಪಾಲನೆಯಲ್ಲಿ ಕಡಿಮೆಯಾದೇನೋ ಎಂಬ ಆತಂಕ. ಒಟ್ಟಿನಲ್ಲಿ ತಾಯಿಯ ಚಿಂತೆಗೆ ಮುಕ್ತಾಯವಿಲ್ಲ. ಆದರೂ ಅಕ್ಕಪಕ್ಕದವರೊಂದಿಗೆ ಹರಟೆ ಹೊಡೆಯುತ್ತಾ, ನೆಂಟರಮನೆ, ಪೇಟೆ, ಪಾರ್ಕು, ಕ್ಲಬ್ಬುಗಳೆಂದು ವ್ಯರ್ಥ ಸಮಯ ಕಳೆಯುತ್ತಾ ಇರುವ ಕೆಲವು ಮಂದಿ ತಾಯಂದಿರಿಗಿಂತ ಉದ್ಯೋಗಸ್ಥ ಮಹಿಳೆ ತನ್ನ ಮಕ್ಕಳನ್ನು ಉಪಯುಕ್ತ ಶಿಕ್ಷಣ, ಉತ್ತಮ ಶಿಸ್ತು

ಗಳೊಂದಿಗೆ ಸ್ವಾವಲಂಬಿಗಳಾದ ಆದರ್ಶ ಬಾಲ, ಬಾಲಿಕೆಯರಾಗಿ ಬೆಳೆಸಿದ ಉದಾಹರಣೆಗಳಿವೆ. ಉದ್ಯೋಗಸ್ಥ ಮಹಿಳೆ ಗೃಹಿಣಿಯಾಗಿ, ಸಮರ್ಪಕ ರೀತಿಯಲ್ಲಿ ಕರ್ತವ್ಯ ನಿರ್ವಹಿಸಲು ಕೈಹಿಡಿದಾತನ ಸಹಕಾರವೂ ಅತ್ಯಂತ ಪ್ರಾಮುಖ್ಯವಾದುದು.

ಗ್ರಾಮೀಣ ಮಹಿಳೆ ಎದುರಿಸುತ್ತಿರುವ ಸಮಸ್ಯೆಗಳು

—ವನಜಾ ವಿ. ರಾವ್

"ಪ್ರಗತಿ, ಸಮಾನತೆ, ಸ್ವಾತಂತ್ರ್ಯ" ಈ ಶಬ್ದಗಳನ್ನೆಲ್ಲ ಕಲ್ಪಿಸಿಕೊಳ್ಳದೆ, ಅದಕ್ಕೆ ಅರ್ಥ ಹುಡುಕಲು ಹೋಗದೆ ಅನಕ್ಷರಸ್ಥರಾಗಿಯೇ ಹೊಲ, ಮನೆಗಳಲ್ಲಿ ಕತ್ತೆ ದುಡಿತ ದುಡಿಯುತ್ತಿರುವ ಗ್ರಾಮೀಣ ಮಹಿಳೆಯರನ್ನು ಹೆಚ್ಚಿನವರು ಕಂಡಿರಬೇಕಲ್ಲ? ಶ್ರಮ ಜೀವನ, ಆಪತ್ತಿನಲ್ಲಿ ಅತಿ ಧೈರ್ಯ ಈ ಎರಡು ಗುಣಗಳನ್ನು ರೂಢಿಸಿಕೊಂಡು ಪಾಲಿಗೆ ಬಂದುದೇ ಪಂಚಾಮೃತವೆಂದು ತಿಳಿದು ಹೆಚ್ಚಿನ ಪ್ರಲೋಭನೆ ಇಲ್ಲದೆ ಬದುಕುವ ಇವರಿಗಾಗಿ "ಸಾಕ್ಷರತೆ" ಯೊಂದು ವರದಾನವಾಗಬಹುದು. —ಸಂ.

ನಮ್ಮದು ಕೃಷಿ ಪ್ರಧಾನವಾದ ಹಳ್ಳಿಗಳ ದೇಶ. ಗಂಡಸು ಹೆಂಗಸು ಎಂಬ ಭೇದಭಾವವಿಲ್ಲದೆ ಕೃಷಿಯಲ್ಲಿ ಎಲ್ಲರೂ ತೊಡಗುತ್ತಾರೆ. ಆದರೆ ಮನೆಯ ಒಳಗೂ ಹೊರಗೂ ದುಡಿಯುತ್ತಿರುವ ಗ್ರಾಮೀಣ ಮಹಿಳೆ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಮೂಲಭೂತವಾದ ಅವಶ್ಯಕತೆಗಳೂ ಕೂಡ ಇವಳಿಗೆ ದೊರಕುವುದಿಲ್ಲ. ಇವಳ ದುಡಿತ ಕತ್ತೆಯ ದುಡಿತದಂತೆ. ಇದಕ್ಕೆ ಅನೇಕ ವೇಳೆ ಎಳ್ಳುಕಾಳಿನಷ್ಟು ಬೆಲೆ ಇಲ್ಲ. ಎಲ್ಲವನ್ನೂ ವೈಜ್ಞಾನಿಕ ದೃಷ್ಟಿಯಿಂದ ನೋಡುತ್ತಿರುವ, 21ನೇ ಶತಮಾನಕ್ಕೆ ಕಾಲಿಡುತ್ತಿರುವ ಇಂದಿನ ಯಾಂತ್ರಿಕಯುಗದ ಬದುಕಿನಲ್ಲೂ, "ಸಮಾನತೆ ಸ್ವಾತಂತ್ರ್ಯ" ಎಂಬ ಪದಗಳಿಗೆ ಇವಳಿನ್ನೂ ಅರ್ಥ ಹುಡುಕಬೇಕಾಗಿದೆ. ಇಂದು ಇವಳೆದುರಿಸುತ್ತಿರುವ ಒಂದು ದೊಡ್ಡ ಸಮಸ್ಯೆಯೆಂದರೆ "ಬದುಕುಳಿಯುವುದು ಹೇಗೆ?" ಎಂಬುದು ಮಾತ್ರ.

ನಮ್ಮದು ಪಿತೃ ಪ್ರಧಾನವಾದ ಕುಟುಂಬವಾದ್ದರಿಂದ ಇಲ್ಲಿ ಮನೆಯ ಯಜಮಾನ ಗಂಡಸೇ ಹೊರತು ಹೆಂಗಸಲ್ಲ. ಆದ್ದರಿಂದ ಆಸ್ತಿಪಾಸ್ತಿ, ಜವಾಬ್ದಾರಿ, ಉಸ್ತುವಾರಿ ಎಲ್ಲವೂ ಅವನಿಗೇ ಸೇರುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಸ್ತ್ರೀ ಅನಕ್ಷರಸ್ಥಳಾಗಿರುವುದು.

ಹೆಣ್ಣು ಮಗು ಹುಟ್ಟಿದಾಗಿನಿಂದ ಸಮಸ್ಯೆಗಳು ಆರಂಭವಾಗುತ್ತದೆ. ತಂದೆ ತಾಯಿಯರು ಕೃಷಿ ಕೆಲಸಕ್ಕೆ ತೊಡಗಿದಾಗ ಸಣ್ಣಮಕ್ಕಳನ್ನು ನೋಡಿಕೊಳ್ಳುವುದು, ಅಡುಗೆ ಮಾಡುವುದು, ದನ ಕುರಿ ಮೇಯಿಸುವುದು, ದೂರದಿಂದ ನೀರು ತರುವುದು, ಬಟ್ಟೆ ಒಗೆಯುವುದು, ಇತ್ಯಾದಿ ಹೊಣೆ ಹೆಣ್ಣು ಮಕ್ಕಳಿಗೆ. ಈ ಮಧ್ಯೆ ಇವಳಿಗೆ ಸಮಯವಾದರೂ ಎಲ್ಲಿದೆ? ಮನೆಯಲ್ಲೇ ಉಳಿಯುವ ಇವಳು ಸಹಜವಾಗಿಯೇ ಅನಕ್ಷರಸ್ಥಳಾಗುತ್ತಾಳೆ. ಮನೆಯ ಆಗುಹೋಗುಗಳೇ ಇವಳ ಸಂಗಾತಿಗಳಾಗುತ್ತವೆ.

ಆದರೆ ಇಂದು ಸಾಕ್ಷರತೆಯ ಆಂದೋಲನದಿಂದ ಕೆಲವರಾದರೂ ವಿದ್ಯೆ ಕಲಿತಾರು ಎಂಬ ಆಶಯ ಇಟ್ಟುಕೊಳ್ಳಬಹುದು. ದಕ್ಷಿಣ ಕನ್ನಡ ನೂರಕ್ಕೆ ನೂರು ಸಾಕ್ಷರತೆಯನ್ನು ಸಾಧಿಸಿದೆ ಎಂದು ಹೆಮ್ಮೆಪಟ್ಟುಕೊಳ್ಳುತ್ತಿದೆ. ಆದರೆ ಇದು ಎಷ್ಟರಮಟ್ಟಿಗೆ ಸಾಫಲ್ಯ ಪಡೆದಿದೆ ಎಂದು ನೋಡಬೇಕಾದರೆ, ಗ್ರಾಮೀಣ ಮಹಿಳೆಯರನ್ನು ಒರೆಗಲ್ಲಿಗೆ ಹಚ್ಚಿ ಪರೀಕ್ಷಿಸಬೇಕಾಗುತ್ತದೆ. ಸಾಕ್ಷರತೆ ಒಂದು ವರ್ಷ ಆಚರಿಸಿ ಬಿಟ್ಟರೆ ಪ್ರಯೋಜನವಿಲ್ಲ. ಇದು ನಿರಂತರ ಕಲಿಕೆಯಾಗಬೇಕು. ಬಲವಂತ ಮಾಘಸ್ನಾನದಿಂದಲೇ ನಮ್ಮ ಗ್ರಾಮೀಣ ಮಹಿಳೆಯರು ಕೊಂಚವಾದರೂ ಅಕ್ಷರ ಕಲಿತಾರು.

ಇನ್ನು ಗದ್ದೆಯ ಕೆಲಸಗಳಲ್ಲಿ ಹೆಂಗಸಿನ ಪಾತ್ರ ಅಪಾರ. ಗೊಬ್ಬರ ಹೊರುವುದು, ನೆಡುವುದು, ಕೊಯ್ಯುವುದು, ತೆನೆ ಬಡಿಯುವುದು ಇತ್ಯಾದಿ. ಕೆಲಸಗಳಿಗೆ ಇವರಿಗೆ ಸಿಗುವ ಸಂಬಳ ಬಹಳ ಕಡಿಮೆ. ಮನೆಯವರೇ ಇದನ್ನೆಲ್ಲಾ ಮಾಡಿದಾಗ ಆ ಸಂಬಳವೂ ಇಲ್ಲ. ಅಂದರೆ ಕೆಲಸಕ್ಕೆ ತಕ್ಕ ಪ್ರತಿಫಲವಿಲ್ಲ. ಇವರು ಗಂಡಸಿನಷ್ಟು ಸಂಬಳ ಕೇಳುವ ಹಾಗಿಲ್ಲ. ಇವರದು ಶ್ರಮದಾಯಕವಲ್ಲದ ಕೆಲಸವೆನಿಸಿಕೊಂಡಿದೆ. ಉಳುವುದು, ಕೆತ್ತುವುದು ಮುಂತಾದ ಶ್ರಮದಾಯಕ ಕೆಲಸಗಳನ್ನು ಗಂಡಸರೇ ಇಂದಿಗೂ ಮಾಡುತ್ತಾರೆ. ಇತ್ತೀಚೆಗೆ ವೈಜ್ಞಾನಿಕ ಉಪಕರಣದಿಂದಾಗಿ (ಟ್ರಾಕ್ಟರ್ ಮುಂತಾದವು) ಗಂಡಸರ ಕೆಲಸ ಸುಲಭವಾದರೂ ಹೆಂಗಸಿಗೆ ಅವಳ ಕೆಲಸ ಇದ್ದೇ ಇದೆ. ಆದರೂ ಆರ್ಥಿಕವಾಗಿ ಇವಳು ಬಹಳ ಶೋಚನೀಯ ಸ್ಥಿತಿಯಲ್ಲಿದ್ದಾಳೆ. ಹಾಗೆಂದು ಅವಳೆಂದೂ ಸುಮ್ಮನೆ ಕೂರುವವಳಲ್ಲ, ಇರುವ ಅಲ್ಪ

ಸ್ವಲ್ಪ ಜಾಗದಲ್ಲಿ ತರಕಾರಿ ಹೂ ಹಣ್ಣು ಬೆಳೆದು ವಾರದ ಸಂತೆಯಲ್ಲಿ ಮಾರಿ ಬಂದ ಹಣದಿಂದ ತನ್ನ ಅವಶ್ಯಕತೆಗಳನ್ನೂ ಪೂರೈಸಿಕೊಳ್ಳುತ್ತಾಳೆ. ದನ ಎಮ್ಮೆಗಳನ್ನು ಸಾಕಿ ಹಾಲು, ತುಪ್ಪ ಮಾರಿ ಸ್ವಲ್ಪ ಹಣ ಗಳಿಸುತ್ತಾಳೆ; ಶ್ರಮಜೀವಿ ಇವಳು.

ಇಷ್ಟೆಲ್ಲಾ ದುಡಿಯುವ ಇವರಿಗೆ ಇನ್ನು ರಾಜಕೀಯದಲ್ಲಿ ಯಾವ ಆಸಕ್ತಿ ಇದ್ದೀತು? ಅದೆಲ್ಲಾ ಹೊಟ್ಟೆ ತುಂಬಿದವರಿಗೆ ಮಾತ್ರ ಎನ್ನುವುದು ಇವರಿಗೆ ಚೆನ್ನಾಗಿ ಗೊತ್ತು. ಆದರೆ ರಾಮ ಬರಲಿ ಕೃಷ್ಣ ಬರಲಿ ಬೀಸುವ ರಾಗಿ ಬೀಸಲೇಬೇಕಲ್ಲ ಎನ್ನುವ ಮಂದಿಯೇ ಜಾಸ್ತಿ. ಆದರೆ ಇಂದಿನ ರಾಜಕೀಯ ಎಷ್ಟು ಪ್ರಭಾವಶಾಲಿಯಾಗಿದೆಯೆಂದರೆ, ಎಂತಹ ಮೂಢರನ್ನೂ ತನ್ನ ಹಣದ ಪ್ರಭಾವದಿಂದ ತನ್ನೊಡಲಿಗೇ ಸೇರಿಸುತ್ತದೆ. ಹಾಗಾಗಿ ಇವಳು ಮತ ಚಲಾಯಿಸುವ ದಿನ ಪಡುವ ಸಂಭ್ರಮ ಅಷ್ಟಿಷ್ಟಲ್ಲ. ಶತಶತಮಾನ ಗಳಿಂದ ಜೀತದಾಳುಗಳಾಗಿ ದುಡಿದ ಇವರಿಗೆ ಮನೋಸಿದ್ಧತೆ ಇಲ್ಲ. ಜೊತೆಗೆ ಆತ್ಮ ವಿಶ್ವಾಸದ ಕೊರತೆಯೂ ತುಂಬಿಕೊಂಡಿದೆ.

ಗ್ರಾಮೀಣ ಮಹಿಳೆಗೆ ವರ್ಷಪೂರ್ತಿ ಒಂದಲ್ಲ ಒಂದು ಕೆಲಸ ಇದ್ದೇ ಇರುತ್ತದೆ. ಈ ಹೆಂಗಸರಲ್ಲಿ ಒಗ್ಗಟ್ಟಿಲ್ಲ, ಸಂಘಟನೆ ಇಲ್ಲ. ಚಳುವಳಿ ಮುಷ್ಕರ ಇವುಗಳಿಂದ ಮೈಲಿದೂರವೇ ಇದ್ದಾರೆ. ಹಗಲಿರುಳು ಎನ್ನದೆ ದುಡಿ ಯುವ ಇವರನ್ನು ಯಾವ ಸಂಘ ಸಂಸ್ಥೆಗಳೂ ಗುರುತಿಸಿಲ್ಲ.

ಗರ್ಭಿಣಿ ಹೆಂಗಸು ಹೆರಿಗೆ ಸಮಯದವರೆಗೂ ದುಡಿಯುತ್ತಿರುತ್ತಾಳೆ. ಆಸ್ಪತ್ರೆ ಹೆಸರಿಗೆ ಮಾತ್ರ. ಇಲ್ಲಿ ವೈದ್ಯರಿರುವುದಿಲ್ಲ, ಔಷಧಿಗಳಿರುವುದಿಲ್ಲ. ಇವಳ ಪಾಲಿಗೆ ಇವೆಲ್ಲಾ ಕನಸೇ ಸರಿ. ಸರಿಯಾದ ತಿಳುವಳಿಕೆ ಇಲ್ಲದೆ ಬೇಗ ಮದುವೆಯಾಗುವುದು, ಬೇಗ ಬೇಗ ಮಕ್ಕಳಾಗುವುದು, ಪೌಷ್ಟಿಕ ಆಹಾರ ಗಳು ಇಲ್ಲದಿರುವುದು, ಬಡತನ, ಕೊನೆಗೆ ಶುದ್ಧವಾದ ನೀರು ಕೂಡ ಇಲ್ಲ ದಿರುವುದು. ಮಳೆ, ಚಳಿ, ಗಾಳಿ, ಬಿಸಿಲುಗಳಿಂದ ರಕ್ಷಿಸಿಕೊಳ್ಳಲು ಮೂಲ ಭೂತವಾದ ಅವಶ್ಯಕತೆಗಳೇ ಇಲ್ಲದೇ ನರಳುತ್ತಿರುತ್ತಾಳೆ. ಇದಕ್ಕೆಲ್ಲಾ ಮೂಲಕಾರಣ ಅವಳಿಗೆ ಭದ್ರವಾದ ನೆಲೆ ಇಲ್ಲದಿರುವುದು ಮತ್ತು ಸಾಮಾಜಿಕ ಆರ್ಥಿಕ ಸ್ಥಾನಮಾನ ತೀರಾ ಕೆಳಮಟ್ಟದ್ದಾಗಿರುವುದೇ ಆಗಿದೆ. ಇದನ್ನೆಲ್ಲಾ ಸುಧಾರಿಸಿಕೊಳ್ಳಲು ಮುಖ್ಯವಾಗಿ ಅವಳಿಗೆ ವಿದ್ಯೆ ಬೇಕೇ ಬೇಕು.

ಇವಳ ಮೂಢನಂಬಿಕೆಗಳು ಅನೇಕ. ವಿದ್ಯಾವಂತರೆನಿಸಿಕೊಂಡವರೇ ಸಂತರು ಬಾಬಾಗಳನ್ನು ನಂಬಿ ಮೋಸ ಹೋಗುತ್ತಾರೆ. ಇನ್ನು ಇವಳ ಸ್ಥಿತಿ ಏನು? ಮನುಷ್ಯನಿಗೆ ಯಾವುದರಲ್ಲಾದರೂ ನಂಬಿಕೆ ಬೇಕೇ ಬೇಕು ನಿಜ. (ಭೂತ ಪ್ರೇತ ದೇವರು ವಿಜ್ಞಾನ ಇತ್ಯಾದಿ). ಆದರೆ ಇವುಗಳ ನಂಬಿಕೆಯ ವಿಷಯದಲ್ಲಿ ಅತಿರೇಕಕ್ಕೆ ಹೋದಾಗ ಅನಾಹುತಗಳು ತಪ್ಪಿದ್ದಲ್ಲ. ಉದಾ: ಗ್ರಾಮೀಣ ಪ್ರದೇಶದಲ್ಲಿ ಬಾಣಂತಿಗೆ ಜ್ವರ ಬಂದಾಗ ಭೂತದ ಕಾಟವೆಂದು ನಂಬಿ ಪೂಜೆ ಮಾಡಿಸುವುದುಂಟು. ಇದು ಮಾನಸಿಕ ನೆಮ್ಮದಿಗೆ ಕೈಗೊಳ್ಳುವ ಒಂದು ವಿಧವಾದ ಕೆಲಸವೇ ಸರಿ. ಆದರೆ ಇದು ಅತಿರೇಕಕ್ಕೆ ಹೋದಾಗ, ಮಂತ್ರ ತಂತ್ರ ಮಾಡಿಸಿ ಹೊಗೆ ಹಾಕುವುದು, ಕಹಿ-ಬೇವಿನ ಸೊಪ್ಪಿನ ಪೊರಕೆಯಿಂದ ಹೊಡೆಯುವುದು, ಕೊಡಗಟ್ಟಲೆ ನೀರು ಸುರಿಯು ವುದು ಮುಂತಾದವು ನಡೆದು ಜೀವ ಹಾನಿಯಾದ ಉದಾಹರಣೆಗಳೂ ಇವೆ. ಮೊದಲೇ ಮಾನಸಿಕವಾಗಿ ದುರ್ಬಲಳಾಗಿರುವ ಇಂತಹ ಮಹಿಳೆಯರ ಶೋಷಣೆ ತಪ್ಪಿದ್ದಲ್ಲ.

ಇಷ್ಟೆಲ್ಲಾ ತೊಂದರೆಗಳನ್ನು ಅವಳು ಅನುಭವಿಸುತ್ತಿದ್ದರೂ ಅವಳ ಧೈರ್ಯದ ಗುಣ ನಾವು ಮೆಚ್ಚಬೇಕು. ಆತ್ಮ ರಕ್ಷಣೆ ಮಾಡಿಕೊಳ್ಳಲು ಸದಾ ಸಿದ್ಧಳಾಗಿರುತ್ತಾಳೆ. ಧೈರ್ಯದ ಧ್ವನಿಯನ್ನು ನಾವು ಇವಳಲ್ಲಿ ಗುರುತಿಸ ಬಹುದು. ಗಂಡ ಕುಡಿದು ಬಂದಾಗ ಧ್ವನಿ ಏರಿಸಿ ಮಾತನಾಡಿ ಸಮಯ ಬಂದರೆ ನಾಲ್ಕು ಏಟು ಹಾಕಲೂ ಇವಳು ಹಿಂಜರಿಯುವುದಿಲ್ಲ. ತನ್ನಿಂದ ತಪ್ಪಾದಾಗ ಒಪ್ಪಿಕೊಳ್ಳುವ ಇವಳು, ತಾನು ಮೋಸ ಹೋದಾಗ ಅಷ್ಟೇ ಧೈರ್ಯದಿಂದ ನಾಲ್ಕು ಜನರಲ್ಲಿ ಅದನ್ನೇ ನಿವೇದಿಸಿಕೊಳ್ಳುತ್ತಾಳೆ.

ಆದರೂ, ಒಂದು ವಿಧವಾದ ಕೀಳರಿಮೆಯಿಂದ, ಮನೋ ದೌರ್ಬಲ್ಯ ದಿಂದ ಅವಳು ನಲುಗುತ್ತಾಳೆ. ಇಂದಿಗೂ ಬಗೆಹರಿಸಲಾಗದ ಅನೇಕ ತೊಂದರೆಗಳ ಸುಳಿಯೊಳಗೆ ಸಿಲುಕಿರುವ ಇವಳಿಗೆ 'ಸಾಕ್ಷರತೆ' ವರದಾನ ವಾಗಬಹುದು.

ಕರೆಂಟು ಪುರಾಣ

— ಅ. ನಾ. ಪೂರ್ಣಿಮಾ

"ಪಟ್ಟಣದಲ್ಲಿ ಕರೆಂಟಿನ ನಂಟು ಎಲ್ಲರ ಜೀವನದ ಗುಟ್ಟು. ಈ ನಂಟಿಗೆ ಸ್ತ್ರೀ ಪುರುಷ ಭೇದ ಭಾವವಿಲ್ಲ. ಮಹಿಳೆಯರ ದಿನಚರಿಯಲ್ಲಿ ಕರೆಂಟುರಾಯನ ಪಾತ್ರವೈವಿಧ್ಯವನ್ನು ರೋಚಕವಾಗಿ ಕೇಳಲಿಚ್ಛಿಸುತ್ತೀರಾ? ಕರೆಂಟು ಇದ್ದಾಗಲೇ ಓದಿಬಿಡಿ, ಮತ್ತೆ ಎಂದರೆ ಇದ್ದದ್ದೇ ಗಡಿಬಿಡಿ."

—ಸಂ.

ಇದಾವುದಪ್ಪಾ ಹೊಸ ಪುರಾಣ ಎಂದು ಹುಬ್ಬೇರಿಸಿದಿರಲ್ಲವೇ? ಅದೇ ಕರೆಂಟ್ ಗೊತ್ತಾಗಲಿಲ್ಲವೇ? ಆಂಗ್ಲಭಾಷೆಯ ಈ ಶಬ್ದವನ್ನು ಎರಡು ರೀತಿಯಲ್ಲಿ ಅರ್ಥೈಸಬಹುದು. ಮೊದಲನೆಯದು ವಿದ್ಯುತ್ ಪ್ರವಾಹ ಅಥವಾ ಸೆಳೆತ. ಎರಡನೆಯದು ಚಲಾವಣೆಯಲ್ಲಿರುವ ಅಥವಾ ಪ್ರಚಲಿತ. ಈ ಎರಡೂ ಅರ್ಥಗಳಲ್ಲಿ ಪ್ರಸ್ತುತ ದಿನಗಳಲ್ಲಿ ಸದಾ ಬಳಕೆಯಲ್ಲಿರುವ ಮಾತು ವಿದ್ಯುತ್ ಕುರಿತಾಗಿ ಎಂಬುದು ಅಕ್ಷರಶಃ ಸತ್ಯ. ಕರೆಂಟ್ ಕುರಿತಂತೆ ನೀವು ಯಾರೊಂದಿಗಾದರೂ ಮಾತಿಗೆ ತೊಡಗಿದರೋ ದೊಡ್ಡ ಪುರಾಣವೇ ಹೊರಡುತ್ತದೆ. ಕರೆಂಟ್ ಶಾಕ್ ಹೊಡೆಸಿಕೊಂಡಾಗಲೂ ಆಗಿರದ ಆಘಾತ ಈ ಪುರಾಣ ಕೇಳುವಾಗ ಆಗದಿರದು.

ಚಿಮಣಿದೀಪ, ಗ್ಯಾಸ್‌ಲೈಟುಗಳನ್ನು ನುಂಗಿಬಿಡುವಂತೆ ಅವತರಿಸಿದ ಈ ಪ್ರಕಾಶನ ಮಹಿಮೆ ಅಪಾರವಾದದ್ದು. ಕತ್ತಲೆಯ ಮೇಲೆ ಸವಾರಿ ಮಾಡುವ ಈತನನ್ನು ಬಳಸಿಕೊಳ್ಳುವ ಬಗೆ ಹತ್ತು ಹಲವಾರು. ಲೈಟು, ರೇಡಿಯೋ, ಟಿ.ವಿ., ಫ್ಯಾನ್, ಇಸ್ತ್ರಿ ಪೆಟ್ಟಿಗೆ, ಫ್ರಿಜ್ಜು, ವಾಶಿಂಗ್‌ಮೆಶಿನ್, ಮಿಕ್ಸಿ ಗ್ರೈಂಡರ್, ಅಬ್ಬಬ್ಬಾ... ಒಂದೇ ಎರಡೇ? ಕಸ ಗುಡಿಸಲೂ ಕರೆಂಟ್ ವ್ಯವಸ್ಥೆ. ಅದೆಲ್ಲಾ ಇರಲಿ; ಇತ್ತೀಚೆಗೆ ಬೆನ್ನು ನೋವೆಂದು ವೈದ್ಯರ ಬಳಿಗೆ ಹೋಗಿದ್ದೆ, ಆತ 'ನಿಮಗೆ ಕರೆಂಟ್ ಟ್ರೀಟ್‌ಮೆಂಟ್ ಕೊಡಬೇಕು' ಎಂದು

ಬಿಡುವುದೇ? ಒಟ್ಟಿನಲ್ಲಿ ಕರೆಂಟ್ ಇಲ್ಲದಿದ್ದರೆ ಜೀವನವೇ ಇಲ್ಲ; ಮಾತ್ರ ವಲ್ಲ, ಜೀವವೂ ಇಲ್ಲ ಎಂದಾಗಿಬಿಟ್ಟಿತಲ್ಲಾ.

ನಮ್ಮ ಬದುಕಿನ ಅವಿಭಾಜ್ಯ ಅಂಗ 'ಕರೆಂಟ್' ಎಂದರೆ ತಪ್ಪಾಗಲಾರ ದೇನೋ. ಒಂದು ದಿನ ಕರೆಂಟ್ ಇಲ್ಲದಿದ್ದರೆ ಹೇಗಿರುತ್ತದೆ? ಆ ಕಲ್ಪನೆಯೋ ಬೇಡ ಅಲ್ಲವೇ? ನಿಜ; ಬೆಳಿಗ್ಗೆ ಅಷ್ಟು ಬೇಗನೆ ಎದ್ದು, ಅಡಿಗೆ ಮಾಡಿ, ಮನೆ ಗೆಲಸಗಳನ್ನೆಲ್ಲಾ ಪೂರೈಸಿ, ಮನೆಯವರನ್ನೆಲ್ಲಾ ಹೊಂದಿಸಿಕೊಂಡು ಮಕ್ಕ ಳನ್ನು ಹೊರಡಿಸಿ ತಾನೂ ಹೊರಟು ಗಡಿಬಿಡಿಯಿಂದ ಆಫೀಸು ತಲುಪುವ ಷ್ಟರಲ್ಲಿ ಸಾಕಷ್ಟು ತಡವಾಗಿರುತ್ತದೆ. ಕುರ್ಚಿಯಲ್ಲಿ ಕುಳಿತು 'ಉಸ್ಸಪ್ಪಾ' ಎಂದು ಗಾಳಿಗಾಗಿ ಮೇಲೆ ನೋಡಿದರೆ ಕರೆಂಟ್ ಇಲ್ಲದ ಕಾರಣ ಫ್ಯಾನಿಗೂ ತಟಸ್ಥನೀತಿ. ತಡವಾದುದಕ್ಕೆ ಬಾಸ್ ಕಡೆಯಿಂದ ಅಸಮಾಧಾನದ ಕಿಡಿಗಳು, ಬೇಸರ, ಸುಸ್ತಿನ ಪರಿಣಾಮ ಕೆ. ಇ. ಬಿ.ಯವರಿಗೂ, ಕರೆಂಟಿಗೂ ಹಿಡಿಹಿಡಿ ಶಾಪ. ಮನೆಗೆ ಬಂದು ಮನೆಮಂದಿಯ ಮೇಲೆಲ್ಲಾ ಹರಿಹಾಯ್ದು ರಾವಣರಂಪ. "ಕರೆಂಟ್ ಇಲ್ಲ ಮಾರಾಯ್ರೇ, ಥತ್! ಇದಕ್ಕೇನು ರೋಗವೋ ಏನೋ!" ಎಂಬ ಗೊಣಗಾಟವಂತೂ ಅದೆಷ್ಟನೇ ಬಾರಿಯೋ ಏನೋ!

ಕರೆಂಟ್ ಇಲ್ಲದಿರುವುದು ಒಂದು ರೀತಿಯಾದರೆ, ಇತ್ತೀಚೆಗೆ ಮಾಮೂ ಲಾಗಿರುವ 'ವಿದ್ಯುತ್ ಕಡಿತ' ಎಂಬ ಹೊಸ ಬಗೆಯ ತುರಿಕೆ (!) ಭಯಾನಕ ವಾದದ್ದು. ಒಮ್ಮೊಂದೊಮ್ಮೆಲೆ ಕರೆಂಟ್ ಹೋಗಿ ಬಿಡುವುದರಿಂದ ಉಂಟಾ ಗುವ ಪಜೀತಿ ನಾನಾ ರೀತಿ. ಟಿ.ವಿ.ಯಲ್ಲಿ ಒಳ್ಳೆಯ ಸನ್ನಿವೇಶ ಬರುವಾಗ, ಸೆಕೆ ತಡೆಯದೆ ಗಾಳಿಗಾಗಿ ತಹತಹಿಸಿ ಕುಳಿತಾಗ, ಬಟ್ಟೆಗಳನ್ನು ವಾಷಿಂಗ್ ಮೆಷಿನ್ನಿಗೆ ಹಾಕುವಷ್ಟರಲ್ಲಿ, ಫ್ಯಾನಿನ ಪಂಕಗಳು ನಾಲ್ಕು ಸುತ್ತುಸುತ್ತುವಷ್ಟ ರಲ್ಲಿ, ಮಿಕ್ಸಿಗೆ ಮಸಾಲೆ ಹಾಕಿ ತಿರುಗುವಷ್ಟರಲ್ಲಿ, ರಾಶಿಬಟ್ಟೆಗಳನ್ನು ಇರಿಸಿ ಕೊಂಡು ಇಸ್ತ್ರಿಗೆ ನಿಂತಲ್ಲಿ...ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಅರ್ಧಕ್ಕೆ ಕೈ ಕೊಡುವ ಕರೆಂಟಿನ ಈ ಆಟ ತುಂಬಾ ಕೆಟ್ಟದ್ದು. ಕೆಲಸಗಳೆಲ್ಲಾ ಅಸ್ತವ್ಯಸ್ತ ಗೊಳ್ಳುವುದರೊಂದಿಗೆ ಸಿಟ್ಟು, ಅಸಹನೆ ಪರಮಾವಧಿಯನ್ನು ತಲುಪಿ ಬಿಡು ತ್ತದೆ. ವಿದ್ಯುತ್ ಕಡಿತಕ್ಕೆ ಕಾರಣ ಗೊತ್ತಿಲ್ಲದಿದ್ದರೂ, ಕೆ.ಇ.ಬಿ.ಯವರ ಮೇಲೆ ದೂರು ತಪ್ಪಿದ್ದಲ್ಲ.

ಕರೆಂಟಿನ ಈ ಕಣ್ಣು ಮುಚ್ಚಾಲೆಯಾಟ ಕೆಲವೊಮ್ಮೆ ತಮಾಷೆಯ ಸನ್ನಿವೇಶಗಳನ್ನು ಸೃಷ್ಟಿಸುವುದೂ ಇದೆ. ಸ್ನೇಹಿತೆಯ ಮನೆಗೆ ಹೋಗಿದ್ದಾಗಿನ ಒಂದು ಸಂದರ್ಭ ನೆನಪಾಗುತ್ತದೆ. ನಾನವರ ಮನೆಗೆ ಹೋದಾಗ ಮುಸ್ಸಂಜೆಯಾಗಿತ್ತು, ಕರೆಂಟ್ ಇರಲಿಲ್ಲ. ಮಕ್ಕಳೆಲ್ಲಾ ಒಳ್ಳೆ ಹುರುಪಿನಲ್ಲಿ ಕುಣಿದಾಡುತ್ತಿದ್ದರು. ಸ್ನೇಹಿತೆಯ ಅತ್ತಿಗೆ ಒಳಗಿನಿಂದ ಗೊಣಗಾಡುತ್ತಿದ್ದರು "ಕರೆಂಟೂ ಇಲ್ಲ. ಹೊರಗೆ ಹೋದವರೊಬ್ಬರೂ ಬಂದಿಲ್ಲ. ಎಷ್ಟು ಸಲ ಹೇಳಿದೆ ಇವರಿಗೆ ಒಂದು ಒಳ್ಳೆಯ ಲ್ಯಾಂಪ್ ತನ್ನಿರೆಂದು, ನನ್ನ ಮಾತಿಗೆ ಸ್ವಲ್ಪವೂ ಬೆಲೆಯಿಲ್ಲ, ಈಗ... ಇದರ ಬತ್ತಿಯೂ ಸರಿಯಿಲ್ಲ; ಬುರುಡೆಯೂ ಕಾಣುವುದಿಲ್ಲ. ಎಲ್ಲಕ್ಕೂ ಒಬ್ಬಳೇ ಸಾಯಬೇಕು" ಎನ್ನುತ್ತಲೇ ನಡುನಡುವೆ ಮಕ್ಕಳನ್ನೂ ಬೈದುಕೊಳ್ಳುತ್ತಿದ್ದರು. ನನ್ನನ್ನು ಕಂಡೊಡನೆ. "ಬಂದೆಯಾ? ಇಷ್ಟು ಹೊತ್ತಾಗಿ ಬರುವುದೇ? ಕಾದು ಕಾದು ಸಾಕಾಯ್ತು. ಹೋಗಲಿ, ನೀನೊಮ್ಮೆ ಇದರ ಬತ್ತಿ ಸರಿ ಮಾಡಿಡು, ನಾನು ಲ್ಯಾಂಪಿನ ಬುರುಡೆ ಹುಡುಕಿಕೊಂಡು ಬರುತ್ತೇನೆ" ಎಂದಂದು ದೀಪವನ್ನು ನನ್ನ ಕೈಗೊಪ್ಪಿಸಿ ಹೋದರು. ಅವರ ಮಾತಿನ ರೀತಿಯಲ್ಲೇ, ನನ್ನನ್ನು ತನ್ನ ನಾದಿನಿಯೆಂದು ತಪ್ಪಾಗಿ ಭಾವಿಸಿರುವುದು ಅರಿವಾಯ್ತು. ನಾನು ಅವರಿಗೆ ತಿಳಿಸುವ ಗೋಜಿಗೆ ಹೋಗದೆ ಬತ್ತಿ ಎಳೆದು ದೀಪ ಸರಿ ಮಾಡಿದೆ. ದೀಪ ಹೊತ್ತಿಸಿದ ನಂತರವೂ ಆಕೆ ನನ್ನನ್ನು ಗಮನಿಸಲಿಲ್ಲ. ಬುರುಡೆಯನ್ನು ಸಿಕ್ಕಿಸಿ, 'ಹೂಂ. ಬಾ ಕಾಫಿ ಮಾಡಿಟ್ಟಿದ್ದೇನೆ' ಎಂದರು. ಒಳಗೇ ನಗುತ್ತಿದ್ದ ನಾನು ಕಾಫಿ ಲೋಟವನ್ನು ಅವರ ಕೈಯಿಂದ ಪಡೆಯುತ್ತಿದ್ದಂತೆಯೇ ಒಮ್ಮೆಲೆ ಝಗಮಗಿಸಿದ ವಿದ್ಯುತ್‌ರಾಯ. ಪಕ್ಕನೆ ಕೈ ಹಿಂತೆಗೆದುಕೊಂಡ ಆಕೆ ತಲ್ಲಣಿಸಿ ಹೋದರು 'ನೀನು... ನೀನ್ಯಾವಾಗ ಬಂದೆ?' ತಡೆಹಿಡಿದಿದ್ದ ನಗು ಸ್ಫೋಟಿಸಿತು. 'ಕರೆಂಟ್ ಹೋದಾಗ' ಎಂದೆ. 'ಮತ್ತೆ, ಬತ್ತಿ ಸರಿ ಮಾಡಿದ್ದು ನೀನೇ ಹಾಗಾದ್ರೆ?' "ಹಾಂ. ನೀವು ಬುರುಡೆ ಇಲ್ಲವೆಂದು ತರಲು ಹೋಗಿದ್ದೀರಲ್ಲಾ?" ಆಕೆ ತಲೆಗೆ ಕೈ ಹೊತ್ತು "ಆಯ್ಯೋ ರಾಮಾ, ನೀನು ಮಾತನಾಡದ್ದು ಕಂಡಾದರೂ ತನ್ನ ತಲೆಗೆ ಹೊಳೆಯಲಿಲ್ಲವಲ್ಲಾ?" ಎಂದರು. ಸ್ನೇಹಿತೆ ತನ್ನ ಅಣ್ಣನೊಂದಿಗೆ ಬಂದಾಗ ನಡೆದಿದ್ದ ಘಟನೆ ರಂಜನೆಯನ್ನು ಪಡೆದಿತ್ತು. ದೀಪದ ಅವ್ಯವಸ್ಥೆ ಮರೆತೇ ಹೋಗಿತ್ತು.

ಸ್ವಿಚ್ಚಿನ ಭದ್ರಕಾವಲಿನಲ್ಲಿ ರಕ್ಷಿಸಲ್ಪಡುವ ಕರೆಂಟ್, ಸ್ವಿಚ್ಚನ್ನೊತ್ತಿದಾಗ ಚೆಲ್ಲುವ ಹಾಲುನಗೆ ಯಾರಿಗೆ ಬೇಡ? ದುಡಿಮೆಯನ್ನು ಸುಲಭವಾಗಿಸಿ ಕೊಳ್ಳಲು ಬೇಕಾಗುವಷ್ಟು ವಿದ್ಯುತ್ತನ್ನು ನಾನಾ ರೀತಿಯಲ್ಲಿ ಪಡೆಯಲಾಗುತ್ತದೆ. ಈ ನಿಟ್ಟಿನಲ್ಲಿ ಪ್ರಯತ್ನಿಸಿದ ಸಂಶೋಧಕರಿಗೆ ಕೃತಜ್ಞತೆ ಸಲ್ಲಲೇ ಬೇಕು.

ಕರೆಂಟ್ ವ್ಯವಸ್ಥೆ ಎಷ್ಟು ಸಹಕಾರಿಯೋ ಅಷ್ಟೇ ಅಪಾಯಕಾರಿ ಕೂಡಾ. ಸ್ವಲ್ಪ ವ್ಯತ್ಯಾಸವಾದರೂ ಅಪಾಯ ಕಟ್ಟಿಟ್ಟ ಬುತ್ತಿ. ಸ್ಪರ್ಶ ಮಾತ್ರದಲ್ಲಿ ಸ್ವರ್ಗ ಸುಖವನ್ನುಣಿಸುವ ರೀತಿ ಎಲ್ಲರಿಗೂ ವೇದ್ಯ. ಕರೆಂಟ್ ಶಾಕ್ ಹೊಡೀತು ಎಂದು ತತ್ತರಿಸಿದರೂ, ಅದರ ಗೈರು ಹಾಜರಿಯನ್ನು ಮಾತ್ರ ಸಹಿಸೆವು. ಇದಲ್ಲವೇ ನಂಟೆಂದರೆ? ಅಂತೂ ಕರೆಂಟಿನೊಡನೆ ಎಲ್ಲರ ನಂಟು.

ಮಹಿಳೆಯೊಂದಿಗೆ ಮೂಢನಂಬಿಕೆ

—ಯಶವಂತಿ ಎಸ್. ಸುವರ್ಣ

"ಶಾಸ್ತ್ರ, ಸಂಪ್ರದಾಯಗಳ ಹೆಸರಿನಲ್ಲಿ ಪುರುಷ ಸಮಾಜವು ತನ್ನ ಮೇಲೆ ಹೇರಿದ ನಿಷ್ಠುರ ನಿಬಂಧನೆಗಳಿಗೆಲ್ಲ ಕೋಲೇ ಬಸವನಂತೆ ತಲೆಯಾಡಿಸಿ ಒಪ್ಪಿಕೊಂಡ ಮಹಿಳೆ ಇಂದಿಗೂ ಆ ಚಕ್ರವ್ಯೂಹದಿಂದ ಪೂರ್ತಿ ಹೊರಬಂದಿಲ್ಲ. ಗಂಡ ತೀರಿಕೊಂಡಾಗ 'ವಿಧವೆ' 'ಅಮಂಗಲೆ' ಎಂದು ನಿಂದಿಸಿ ಸ್ತ್ರೀಯನ್ನು ಜೀವನ್ಮೃತಳಂತೆ ಇರಿಸಿದ ಸಮಾಜ ಹೆಂಡತಿ ಕಳೆದುಕೊಂಡ 'ವಿಧುರ'ನ ಬಗ್ಗೆ ಹೇಗೆ ವರ್ತಿಸಿತು? ಮಹಿಳೆಯರು ಇನ್ನಾದರೂ ಸದಸದ್ವಿವೇಕದಿಂದ ವರ್ತಿಸಿ ವೈಚಾರಿಕತೆ ಬೆಳೆಸಿಕೊಳ್ಳಬೇಕು."

—ಸಂ.

ಈ ಪ್ರಪಂಚದಲ್ಲಿ ಹುಟ್ಟಿ ಬೆಳೆಯುತ್ತಿರುವ ಎಲ್ಲಾ ಜೀವಕೋಟಿಗಳಿಗೂ ಬದುಕಿ ಬಾಳುವ ಹಕ್ಕು ಸರ್ವಸಮಾನವಾಗಿದೆ. ಅಲ್ಲದೆ ಪ್ರತಿಯೊಂದು ಜೀವ ವರ್ಗಗಳಲ್ಲೂ ಕೂಡಾ ಗಂಡು – ಹೆಣ್ಣುಗಳೆಂಬ ಪ್ರಭೇದಗಳಿವೆ. ತನ್ನ ಜೀವಕೋಶಗಳಲ್ಲಿ ಇನ್ನೊಂದನ್ನ ಬೆಳೆಯಗೊಟ್ಟು, ಅದನ್ನು ಈ ಸೃಷ್ಟಿಗೆ ತರುವ ಜೈವಿಕ ಶಕ್ತಿಯನ್ನು ಪ್ರಕೃತಿ ಹೆಣ್ಣಿಗೆ ನೀಡಿರುವುದರಿಂದಾಗಿ, ಹೆಣ್ಣು ಆಯಾಯಾ ಜೀವ ವರ್ಗಗಳಲ್ಲಿ ಒಂದು ರೀತಿಯ ವಿಶೇಷ ರಕ್ಷಣೆ ಹಾಗೂ ಸ್ಥಾನಮಾನಗಳನ್ನು ಪಡೆಯುತ್ತಿರುವುದು ಸಹಜ ಹಾಗೂ ಅವಶ್ಯಕವೆನಿಸಿದೆ.

ಹೆಣ್ಣನ್ನು ಪ್ರೀತಿಸುವುದು, ಗೌರವಿಸುವುದು, ವಿಶೇಷ ರಕ್ಷಣೆ ಒದಗಿಸಿಕೊಡುವುದು ಕೇವಲ ಮನುಷ್ಯ ವರ್ಗದಲ್ಲಿ ಮಾತ್ರವಲ್ಲ, ನಮ್ಮ ಜೊತೆಗೆ ನಮ್ಮ ಸುತ್ತಮುತ್ತಲಿರುವ ಪಶು, ಪಕ್ಷಿ, ಪ್ರಾಣಿಗಳಲ್ಲೂ ಕೂಡಾ ನಾವಿದನ್ನು ನೋಡಬಹುದು. ಉದಾಹರಣೆಗೆ – ನಮ್ಮ ಮನೆಯ ಸೂರುಗಳಲ್ಲೋ, ಕಪಾಟುಗಳ ಅರೆಯಲ್ಲೋ ಗೂಡುಕಟ್ಟಿ ವಾಸಿಸುತ್ತಿರುವ ಗುಬ್ಬಕ್ಕ, ಪಾರಿವಾಳಗಳ ಸಂಸಾರಗಳನ್ನೇ ನೋಡಿ. ಅಲ್ಲದೆ ಕಾಡುಗಳಲ್ಲಿ ವಾಸಿಸುತ್ತಿರುವ ಹುಲಿ, ಚಿರತೆ, ವೃಕ, ಮಿಕಗಳನ್ನೇ ನೋಡಿ. ಮರಿ ಇಡುವ

ಸಮಯ ಬಂದಾಗ ಅವುಗಳು ಅದೆಷ್ಟು ಕಾಳಜಿಯಿಂದ ಹೆಣ್ಣನ್ನು ನೋಡಿ ಕೊಳ್ಳುತ್ತವೆ! ಪರಸ್ಪರ ಪ್ರೀತಿ, ಅನ್ಯೋನ್ಯತೆ, ಏಕತೆಯ ಭಾವನೆಗಳಿಂದ ಕೂಡಿದ ದಾಂಪತ್ಯ. ಬದುಕಿನ ಸಫಲತೆಯನ್ನು ನಾವು ಅವುಗಳಿಂದ ಕಲಿಯ ಬೇಕಷ್ಟೆ?

ಮನುಷ್ಯ ಇತರೆಲ್ಲಾ ಜೀವ ವರ್ಗಗಳಿಗಿಂತ ಶ್ರೇಷ್ಠನೆನಿಸಿಕೊಂಡಿದ್ದಾನೆ. ಹಾಗೆ "ಮಾನವ ಜನ್ಮ ದೊಡ್ಡದು" ಎಂತ ಹಾಡಿ ಹೊಗಳುತ್ತಾ ಬಂದಿದೆ ನಮ್ಮ ಸಮಾಜ. ತನ್ನ ಬುದ್ಧಿಮತ್ತೆ, ವೈಜ್ಞಾನಿಕ ಸಂಶೋಧನೆ, ತಂತ್ರ ಜ್ಞಾನಗಳಿಂದ ತನಗೆ ಬೇಕು ಬೇಕೆನಿಸಿದ ಸುಖ ಸವಲತ್ತುಗಳನ್ನು ಪಡೆದು, ತನ್ನ ಹಿರಿಮೆಯ ಕಿರೀಟಕ್ಕೆ ಹೆಚ್ಚಿನ ಗರಿಗಳನ್ನು ಏರಿಸುತ್ತಲೇ ಹೋಗುತ್ತಿ ದ್ದಾನೆ. ಇದು ಇಡೀ ಮನುಕುಲವೇ ಅಭಿಮಾನ ಪಡುವಂತಹ ವಿಚಾರವೇ ಆಗಿದೆ. ಆದರೆ ಇದರ ಮರೆಯಲ್ಲಿ ಇನ್ನು ಗಟ್ಟಿಯಾಗಿ ಬೇರುಬಿಟ್ಟು ಆಲಂ ಗಾಡದೆ ಉಳಿದುಕೊಂಡ ಕೆಲವೊಂದು ಮೂಢನಂಬಿಕೆಗಳು ಸಮಾಜಘಾತುಕ ಶಕ್ತಿಯಾಗಿ ಬೆಳೆಯುತ್ತಾ ಬರುತ್ತಿರುವುದು ದುರದೃಷ್ಟಕರವೆಂತಲೇ ಹೇಳಬೇಕು. ಈ ವಿಘಾತಕ ಶಕ್ತಿಗಳಿಗೆ ಹೆಚ್ಚಾಗಿ ಬಲಿಯಾಗುತ್ತಿರುವವರು, ನಾನಾ ರೀತಿಯ ಮಾನಸಿಕ ಹಿಂಸೆಗಳಿಗೊಳಪಡುತ್ತಿರುವವರು ನಮ್ಮ ಸಮಾಜದ ಮಹಿಳೆಯರು ಎಂಬುದಕ್ಕೆ ಎರಡು ಮಾತಿಲ್ಲ. ಈ ಕಠೋರ ಸತ್ಯವನ್ನು ಅರಿತುಕೊಳ್ಳಲಾರದೆ, ಅರಿತುಕೊಳ್ಳುವ ಗೋಜಿಗೂ ಹೋಗದೆ ಬಸವನ ಹುಳುವಿನಂತೆ ಇದ್ದಲ್ಲೇ ಮುಲುಗಿ ಸಾಯುವ ಮಹಿಳೆಯರು ಅದೆಷ್ಟೋ ಮಂದಿ.

ನಮ್ಮ ದೇಶದ ಹೆಚ್ಚಿನ ಮಹಿಳೆಯರು ಪರಂಪರಾಗತವಾಗಿ ಬೆಳೆದು ಬಂದ ಮೂಢನಂಬಿಕೆಗಳನ್ನು ಮೈಗೂಡಿಸಿಕೊಂಡೇ ಬದುಕುತ್ತಿದ್ದಾರೆ ಎಂದರೆ ಅತಿಶಯೋಕ್ತಿಯಾಗಲಾರದು. ಅಶಿಕ್ಷಿತ ಮಹಿಳೆಯರಂತೂ ಇದಕ್ಕೆ ಬಲಿಯಾಗುವವರೇ. ಆದರೆ ಶಿಕ್ಷಿತ ಮಹಿಳೆಯರೂ ಕೂಡಾ ಇದನ್ನು ಕೆದ ಕುವ ಗೋಜಿಗೆ ಹೋಗದೆ ತೆಪ್ಪಗೆ ಕೊರಳೊಡ್ಡಿ ಬಿಡುತ್ತಾರೆ. ಧರ್ಮದ ಹೆಸರಲ್ಲಿ, ಜಾತೀಯ ಕಟ್ಟುಪಾಡುಗಳ ಅಂಧಶ್ರದ್ಧೆಗಳ ನೀತಿ ನಿಯಮ ಗಳಲ್ಲಿ, ಮಹಿಳೆ ಅನಾದಿ ಕಾಲದಿಂದಲೂ ಬಹಳಷ್ಟು ಶೋಷಣೆಗೊಳಗಾಗಿ

ನಾನಾ ರೀತಿಯ ಮಾನಸಿಕ ಹಿಂಸೆಗೊಳಪಡುತ್ತಿರುವುದನ್ನು ನಾವು ನೋಡುತ್ತಾ, ಕೇಳುತ್ತಾ ಇದ್ದೇವೆ. ಉದಾಹರಣೆಗೆ, – ಗಂಡ ಸತ್ತಾಗ ವಿಧವೆಯ ಪಟ್ಟ–ಆ ತನಕ ತಾನು ಧರಿಸುತ್ತಿದ್ದ ಶೃಂಗಾರ ಸಾಧನಗಳನ್ನೆಲ್ಲಾ ತ್ಯಜಿಸಬೇಕು, ಯಾವ ಮಂಗಳ ಕಾರ್ಯಗಳಿಗೂ ಆಕೆ ಮುಂದಾಗಿ ಹೋಗ ಬಾರದು. ಕೆಲವೊಂದು ಸಮಾಜಗಳಲ್ಲಿ ಇದು ಇನ್ನೂ ಕ್ರೂರ. ಗಂಡನ ಅಗಲಿಕೆಯ ದುಃಖದ ಜೊತೆಗೆ ಈ ಶಿಕ್ಷೆ ಅದೆಷ್ಟು ಭೀಕರ! ತಲೆ ಬೋಳಿಸಿ, ಕೆಂಪು ಸೀರೆ ಉಡಿಸಿ, ಒಪ್ಪೊತ್ತೂಟದಿಂದ ಜೀವನವಿಡೀ ಕಳೆಯುವ ವ್ಯವಸ್ಥೆ ಅದೆಷ್ಟು ಹಿಂಸಾದಾಯಕ! ಇದೆಲ್ಲಾ ಆಯಾಯ ಧರ್ಮ, ದೇವರುಗಳ ಹೆಸರಿನಲ್ಲಿ ಬೆಳೆಸಿ ಉಳಿಸಿಕೊಂಡು ಬಂದ ಮೂಢನಂಬಿಕೆಗಳೇ ವಿನಹಃ ಬೇರೇನಲ್ಲ. ಹಾಗೇ ಒಂದು ಜೀವ ಇನ್ನೊಂದು ಜೀವವನ್ನು ಹಿಂಸೆಗೆ ಹಚ್ಚುವುದರಲ್ಲಿ ಯಾವ ಅರ್ಥವೂ ಇಲ್ಲ. ಇದು ಒಬ್ಬರ ಅಂಧ ವಿಶ್ವಾಸಕ್ಕೆ ಇನ್ನೊಬ್ಬರ ಬಲಿದಾನವಷ್ಟೆ. ಇಂತಹ ವಿಪರ್ಯಾಸಗಳನ್ನು ಯಾವ ದೇವರೂ ಯಾವ ಧರ್ಮವೂ ಒಪ್ಪಿಕೊಳ್ಳಲಾರದು. ಎಲ್ಲಾ ಧರ್ಮಗಳ ಒಳ ತಿರುಳು ಅಥವಾ ಮೂಲಭೂತ ತಾತ್ವಿಕ ಧೋರಣೆಗಳು ಒಂದೇ ಆಗಿವೆ. ದಯೆ, ಅನುಕಂಪ, ಪರಸ್ಪರ ಪ್ರೀತಿ, ಸರಿ ಸಮಾನತೆಗಳಿಂದ ಸೌಹಾರ್ದಯುತವಾಗಿ ಬಾಳಿ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವಂತಹುದೇ ಧರ್ಮಗಳ ಒಳತಿರುಳು. ದಂಪತಿಗಳಲ್ಲಿ ಯಾರಾದರೊಬ್ಬರು ಹಿಂದು ಮುಂದೆ ಸಾಯು ವುದು ಪ್ರಕೃತಿ ಧರ್ಮ. ಇದರಲ್ಲಿ ಕೇವಲ ಹೆಣ್ಣನ್ನು ಮಾತ್ರ ಮೂಢನಂಬಿಕೆ ಗಳ ದಳ್ಳುರಿಯಲ್ಲಿ ಸಿಲುಕಿಸಿ ಹಿಂಸಿಸುವುದರಲ್ಲಿ ಯಾವ ನ್ಯಾಯವಿದೆ? ಗಂಡ ಸತ್ತಾಗ ವಿಧವೆಯ ಹಣೆಪಟ್ಟಿ ಹಚ್ಚುವ ಸಮಾಜ, ಅದೇ ಹೆಂಡತಿ ಸತ್ತಾಗ ವಿಧುರನ ಪಟ್ಟಕಟ್ಟಿ ಕತ್ತಲಲ್ಲಿ ಕೂರಿಸುತ್ತದೆಯೇ? ಇದು ಒಂದು ಗಮ ನಾರ್ಹ ಚಿಂತನೆಯಲ್ಲವೆ?

ದಂಪತಿಗಳಿಗೆ ಒಂದಾದರೂ ಗಂಡು ಮಗು ಇರಲೇಬೇಕು. ಪುತ್ರ ಸಂತಾನವಿಲ್ಲದವರಿಗೆ ಸ್ವರ್ಗವಿಲ್ಲ. ಸತ್ತ ನಂತರ ಉತ್ತಮ ಗತಿ ಸಿಕ್ಕಲು, ಸ್ವರ್ಗದಲ್ಲಿ ಜಾಗ ಗಿಟ್ಟಿಸಲು ಪುತ್ರ ಸಂತಾನ ಬೇಕು ಎನ್ನುವ ಅಂಧ ವಿಶ್ವಾಸ ಬೆಳೆಸಿಕೊಳ್ಳಲಾಗಿದೆ. ಇದು ಕೇವಲ ಅಶಿಕ್ಷಿತ ದಂಪತಿಗಳಲ್ಲಿ ಮಾತ್ರವಲ್ಲ

ಶಿಕ್ಷಿತರಲ್ಲೂ ಈ ಮೂಢನಂಬಿಕೆ ಇದೆ. ಇಂದಿನ ಈ ಜನಸಂಖ್ಯಾಸ್ಫೋಟ ನಕ್ಕೆ ಇದೂ ಒಂದು ಕಾರಣ. ಪರಿಸ್ಥಿತಿ ಹೀಗೇ ಮುಂದುವರಿದರೆ ಮುಂದೊಂದು ದಿನ ನಮ್ಮ ಈ ಅಂಧ ವಿಶ್ವಾಸದ ಪರಿಣಾಮ ನಮ್ಮನ್ನೇ ಬಲಿ ತೆಗೆದುಕೊಂಡು ಬಿಟ್ಟೀತು. ಹೆಣ್ಣಾಗಲಿ, ಗಂಡಾಗಲೀ ಲಿಂಗ ಬೇಧಕ್ಕೆ ನಾವು ಹೆಚ್ಚಿನ ಮಹತ್ವ ಕೊಡಬಾರದು. ಒಂದು ಕುಟುಂಬಕ್ಕೆ ಒಂದು ಅಥವಾ ಎರಡು ಮಕ್ಕಳಿದ್ದರೆ ಸಾಕು ಎನ್ನುವ ಸುಧಾರಣಾ ಮನೋಭಾವ ಇರಬೇಕು. ಇದರಿಂದ ಸಮಾಜ ವ್ಯವಸ್ಥೆಗಳನ್ನು ಸುಸ್ಥಿತಿಯಲ್ಲಿಡಲು ಸಾಧ್ಯವಾಗಬಹುದು. ಹಾಗೂ ಮಕ್ಕಳನ್ನು ಪಡೆಯುವ ಯಂತ್ರವಾಗಿ ಮುಪ್ಪಡರುವ ಮೊದಲೇ ಸೋತು ಸುಣ್ಣವಾಗಿ ನೆಲಕಚ್ಚುವ ಮಹಿಳೆಯರ ಸಂಖ್ಯೆಯೂ ಕಡಿಮೆಯಾಗ ಬಹುದು.

ಋತುಚಕ್ರ ಸಮಯವೆಂಬುದು ಪ್ರಕೃತಿ ಹೆಣ್ತನಕ್ಕೆ ನೀಡಿದ ಒಂದು ವೈಶಿಷ್ಟ್ಯಪೂರ್ಣ ಕ್ರಿಯೆ. ಈ ಸಂದರ್ಭದಲ್ಲಿ ಆಕೆ ಬಹಿಷ್ಠೆ ಎನಿಸಿಕೊಂಡು ಮನೆಯಿಂದ ಹೊರಗೆ ಕುಳಿತು ಅಸ್ಪೃಶ್ಯಳಂತೆ ಇರುವುದು ಅಂಧ ವಿಶ್ವಾಸದ ಪ್ರತೀಕ. ಈ ಕಟ್ಟುನಿಟ್ಟು ಹೆಚ್ಚು ಕಡಿಮೆ ಎಲ್ಲಾ ಸಮಾಜಗಳ ಹೆಣ್ಣು ಮಕ್ಕಳಿಗೂ ವಿಧಿಸಲ್ಪಟ್ಟಿದೆ. ಆಕೆ ಆಗ ಸುಗಂಧ ದ್ರವ್ಯಗಳನ್ನು ಮುಟ್ಟ ಬಾರದು, ತಲೆ ಬಾಚಬಾರದು, ಅಲಂಕರಿಸಿಕೊಳ್ಳಬಾರದು. ಈ ಸಂದರ್ಭ ಕ್ಕಾಗಿಯೇ ಕಾದಿರಿಸಲ್ಪಟ್ಟ ಮನೆಯ ಒಂದು ಮೂಲೆಯಲ್ಲಿ ಕೈದಿಯಂತೆ ಕೂತು ಕಂಬಿ ಎಣಿಸಬೇಕು ಇದು ಸಂಪ್ರದಾಯ. ವೈಜ್ಞಾನಿಕವಾಗಿ ವಿಶ್ಲೇಷಿಸಿ ದರೆ ಈ ಸಂದರ್ಭದಲ್ಲಿ ದೇಹದಲ್ಲಿ ಹಾರ್ಮೋನುಗಳು ಅಧಿಕವಾಗಿ ಬಿಡುಗಡೆ ಯಾಗಿ ದೇಹಸ್ಥಿತಿ ವ್ಯತ್ಯಸ್ತಗೊಳ್ಳುವುದರಿಂದ ಹೆಣ್ಣಿಗೆ ಸ್ವಲ್ಪ ಹೆಚ್ಚಿನ ವಿಶ್ರಾಂತಿ ಅವಶ್ಯ. ಅಲ್ಲದೇ ಆ ಸಮಯದಲ್ಲಿ ಸ್ವಚ್ಛತೆಯ ಕಡೆಗೂ ಹೆಚ್ಚಿನ ಗಮನ ಕೊಡುವುದು ಅವಶ್ಯಕ ಹೊರತು ಮೂಢನಂಬಿಕೆಗೆ ಸ್ಥಾನವಿಲ್ಲ.

ಗಂಡು--ಹೆಣ್ಣು ಒಂದೇ ಕ್ಷೇತ್ರದಲ್ಲಿದ್ದುಕೊಂಡು ದುಡಿಯುತ್ತಿರುವ ಇಂದಿನ ಕಾಲದಲ್ಲಿ ಇಂತಹ ಮೂಢನಂಬಿಕೆಗಳು ತುಸು ಮಟ್ಟಿಗೆ ಕಡಿಮೆಯಾ ಗಿದ್ದರೂ ಸುಧಾರಣೆ ಆಗಬೇಕಾದಷ್ಟು ಆಗಿಲ್ಲ. ನಮ್ಮ ಗ್ರಾಮೀಣ ಪ್ರದೇಶ

ಗಳಲ್ಲಿ ಅನೇಕ ಮೂಢನಂಬಿಕೆ ಹೆಚ್ಚಿನ ಕಡೆ ಇನ್ನೂ ಹಾಗೇ ಉಳಿದುಕೊಂಡಿವೆ. ಕೆಲವೆಡೆ ಮಹಿಳೆಯರಿಗೆ ಪೂಜಾಸ್ಥಳಗಳಿಗೆ ಪ್ರವೇಶವೂ ಇಲ್ಲ.

ಪುರುಷ ಪ್ರಧಾನವಾದ ನಮ್ಮ ಸಮಾಜ ರಚನೆ ಹೆಣ್ಣನ್ನು ಕೇವಲ ತನ್ನ ಸುಖಭೋಗಗಳಿಗಾಗಿಯೇ ಮೀಸಲಾಗಿಟ್ಟ ವಸ್ತು ಎಂಬಷ್ಟರ ಮಟ್ಟಿಗೆ ಆಕೆಯ ಸ್ವತಂತ್ರ ವಿಚಾರ ಶಕ್ತಿ, ವಿವೇಚನೆಗಳು ಹೊರ ಬರದ ಹಾಗೆ ಮೂಢನಂಬಿಕೆಗಳ ಮಧ್ಯೆ ಕೈ ಸೆರೆಯಾಗಿಟ್ಟು ಬಿಟ್ಟಿದೆ ಎಂದರೆ ತಪ್ಪಾಗದು. ಇದರಿಂದಾಗಿ ಮೂಲಭೂತವಾಗಿ ಮಹಿಳೆಯರಲ್ಲಿ ಹುಟ್ಟಿನಿಂದಲೇ ಒಂದು ರೀತಿಯ ಪುಕ್ಕಲುತನ, ದೌರ್ಬಲ್ಯ ಆವರಿಸಿಕೊಂಡು ಬಂದು ತನ್ನ ವಿವೇಚನಾ ಶಕ್ತಿಯನ್ನು ಕಳಕೊಂಡವಳಾಗಿ ಪರಂಪರಾಗತವಾಗಿ ತನ್ನನ್ನು ಬಂದಣಿಕೆ ಯಂತೆ ಅಂಟಿಕೊಂಡು ಬಂದ ಅಂಧ ವಿಶ್ವಾಸಗಳ ಬೇಲಿಯನ್ನು ದಾಟಿ ಹೊರ ಬರುವ ಧೈರ್ಯ ಮಾಡಲಾರದವಳಾದಳು. ಗಂಡನಾದವನು ಒದೆ ಕೊಟ್ಟರೂ ಅದನ್ನು ಸಹಿಸಿ ಆ ಒದೆವ ಕಾಲನ್ನು ಹಣೆಗೊತ್ತಿಕೊಂಡು ಬಾಳಬೇಕು ಎನ್ನುವ ಪತಿವ್ರತಾ ಧರ್ಮಬೋಧನೆ ಮಾಡಿದ ನಮ್ಮ ಧರ್ಮಶಾಸ್ತ್ರಗಳು ಗಂಡಿಗೆಲ್ಲೂ ಪತ್ನೀವ್ರತನಾಗಿ ಬಾಳುವಂತೆ ಬೋಧಿಸಿಲ್ಲ.

ಅಜ್ಜ ನೆಟ್ಟ ಆಲದ ಮರಕ್ಕೆ ಜೋತು ಬೀಳುತ್ತಾ ಮುಂದುವರಿಯುವು ದರಲ್ಲಿ ಯಾವ ಹಿರಿಮೆಯೂ ಇಲ್ಲ. ಮಹಿಳೆ ಅಂಧ ವಿಶ್ವಾಸಗಳ ಪೊರೆ ಯಿಂದ ಹೊರಬಂದು ತನ್ನ ಸುತ್ತಮುತ್ತಲಿನ ಜಗತ್ತಿನ ಜೊತೆ ಬೆರತು, ರಾಜಕೀಯವಾಗಿ, ಸಾಮಾಜಿಕವಾಗಿ ಹೆಚ್ಚೆಚ್ಚು ಭಾಗವಹಿಸಿ ಕ್ರಿಯಾಶೀಲ ಳಾಗಬೇಕು. ಪ್ರತಿಯೊಂದು ಮೂಢನಂಬಿಕೆಗಳ ಹಿಂದಿರುವ ವೈಜ್ಞಾನಿಕ ಸತ್ಯ ವನ್ನು ಬಯಲಿಗೆಳೆದು ಅದನ್ನು ಜೀವನಕ್ಕೆ ಅಳವಡಿಸಿಕೊಳ್ಳುವಂತಹ ಮನೋಭಾವ ಬೆಳೆಸಿಕೊಳ್ಳಬೇಕು. ಆಗ ಮಾತ್ರ ಒಂದು ಸುವ್ಯವಸ್ಥಿತ ಸಮಾಜದ ರಚನೆಯಾಗಲು ಸಾಧ್ಯವಾಗುವುದು.

ವೈಧವ್ಯದ ವಿಧಿನಿಯಮ

—ಶೀಲಾ ಕೆ. ಶೆಟ್ಟಿ

"ನಿಯಮಗಳು ಕಾಲಕಾಲಕ್ಕೆ ಬದಲಾವಣೆಯಾಗುತ್ತವೆಂಬುದು ತ್ರಿಕಾಲ ಸತ್ಯ. 'ವೈಧವ್ಯ'ವೆಂಬ ಬೆಂಕಿಯಲ್ಲಿ ಸ್ತ್ರೀಯನ್ನು ಬೇಯಿಸಿ ಗಾಯದ ಮೇಲೆ ಬರೆ ಎಳೆಯುವ ಸಮಾಜ ಎಂದಿಗಾದರೂ ಉದ್ಧಾರವಾದೀತೆ? ಆಧುನಿಕ ಕಾಲದಲ್ಲೂ "ಅಯ್ಯೋ... ಆಕೆಗೆ ಕುಂಕುಮ ಕೊಟ್ಟಿರಾ? ..ಹೂವೆ? ....ಛೀ ಬೇಡ! ಅವಳು ವಿಧವೆ!..." ಎನ್ನುತ್ತಿರುವ ಸ್ತ್ರೀಯರನ್ನು ಕಾಣುವಾಗ ಬರಿಯ ಪುರುಷರನ್ನು ಮಾತ್ರ ದೂಷಿಸಿ ಫಲವಿಲ್ಲ. ಸ್ತ್ರೀ ತನಗೆ ತಾನೇ ಮಿತ್ರಳು, ಮತ್ತು ತನಗೆ ತಾನೇ ಶತ್ರು. ತನ್ನ ಏಳಿಗೆಗೆ ತಾನೇ ಕಾರಣಳಾಗಬೇಕಾದ ಕಾಲ ನಿಧಾನವಾಗಿಯಾದರೂ ಬರತೊಡಗಿದೆ."

—ಸಂ.

ವೈಧವ್ಯ! ಬಹುಮಂದಿ ಹೆಂಗಸರ ಬಾಳಿನಲ್ಲಿ ಬರಬಹುದಾದ ಬಲು ದೊಡ್ಡ ಆಘಾತ. ಈ ಬರಸಿಡಿಲು ಬಾಳಸಂಜೆಯಲ್ಲಿ ಬಂದೆರಗಿದರೆ ಒಂದು ರೀತಿ. ತಾರುಣ್ಯದ ಹೊಸ್ತಿಲಲ್ಲಿ ಬಾಳವಸಂತದ ಚಿಗುರು ಲತೆ ಪಲ್ಲವಿಸಿ, ಹೂ ಬಿಡುವ ಸಮಯದಲ್ಲಿ ಘಾತಿಸಿದರೆ ಇನ್ನೊಂದು ರೀತಿ. ವಿಧಿಯ ಸಂಕಲ್ಪದಂತೆ, ಯಾರಿಗೆ ಯಾವ ಹೊತ್ತಿನಲ್ಲಿ ಇದು ಬಡಿಯುವುದು ಎಂಬುದನ್ನು ಯಾರಿಗೂ ಹೇಳಲಸಾಧ್ಯ.

ಆದರೆ ಈ ವೈಧವ್ಯದ ಬಿಸಿಯನ್ನು ನಮ್ಮ ಸಮಾಜ ವಿಧವೆಯರಿಗೆ ಮುಟ್ಟಿಸುವ ರೀತಿ ಮಾತ್ರ ತುಂಬಾ ಅಮಾನುಷವಾದುದು.

ಹಿಂದೂ ಧರ್ಮದ ಶುಭ ಕಾರ್ಯಗಳ ಅನುಷ್ಠಾನದಲ್ಲಿ ವಿಧವೆಯ ಪಾತ್ರ ತೀರಾ ಅಮಂಗಳಕಾರಿ, ಯಾವ ಮಂಗಳ ಕಾರ್ಯಕ್ಕೂ ಆಕೆ ಅರ್ಹಳಲ್ಲ. ತನ್ನ ಬಸಿರಲ್ಲಿ ಬಂದ ಕಂದಮ್ಮಗಳ ಕಲ್ಯಾಣಕಾರ್ಯವೇ ಆದರೂ ಆಕೆ ದೂರದಲ್ಲೇ ನಿಂತು ನೋಡಿ ತೃಪ್ತಿಪಟ್ಟುಕೊಳ್ಳಬೇಕು. ಹೋಗಲಿ, ಇಷ್ಟು ಮಾತ್ರವೇ ಏನು ಆಕೆಯ ದುಃಖ? ಮೃತ ಪತಿಯ ಕಳೇಬರ ಇನ್ನೂ

ಮನೆಯಲ್ಲಿರುವಂತೆಯೇ, ಪತ್ನಿಯ ಸೌಭಾಗ್ಯ ಮತ್ತು 'ಸೌಭಾಗ್ಯವಲ್ಲದ' ಚಿಹ್ನೆಗಳನ್ನು ಆಗಲೇ ಕಸಿದುಕೊಳ್ಳುವ ದೌರ್ಜನ್ಯ ನಮ್ಮಲ್ಲಿ ನಡೆಯುತ್ತಿದೆ.

ಶೋಕತಪ್ತಳಾದ ಹೆಣ್ಣು ತನ್ನ ಜೀವನ ಸರ್ವಸ್ವನಾದ ಸ್ವಾಮಿಯನ್ನು ಕಳೆದುಕೊಂಡು, ತನ್ನ ದುರ್ವಿಧಿಗಾಗಿ ದುಃಖಿಸುತ್ತಿರುವಾಗಲೇ ಗಾಯದ ಮೇಲೆ ಬರೆ ಎಳೆದಂತೆ ಅನೇಕ ಪೈಶಾಚಿಕ ಆಚರಣೆಗಳು!

ಪತಿಯನ್ನು ಕಳೆದುಕೊಂಡ ಹೆಣ್ಣಿಗೆ "ತನಗೆ ಯಾವ ಅಲಂಕಾರಗಳೂ ಬೇಡವೆಂದು ಆಕೆಗೇ ಅನಿಸಲಿ. ಇದರಲ್ಲಿ ಬಲಾತ್ಕಾರವೇಕೆ? ತನ್ನ ಅಲಂಕಾರ, ಶೃಂಗಾರ, ಸೊಬಗನ್ನು ನೋಡಿ, ಮೆಚ್ಚಿ ಆನಂದಿಸಬಲ್ಲ ಪತಿಯೇ ಹೋದ ಬಳಿಕ, ಯಾವ ಸೌಭಾಗ್ಯವಾದರೂ ಏಕೆ? ಯಾರ ಮೆಚ್ಚಿಕೆಗೆ?" ಎಂಬ ವೈರಾಗ್ಯ ಆಕೆಗೇ ಇದ್ದರೆ ಸರಿ, ಇದು ಒತ್ತಾಯದಿಂದ ಮಾಡಬಹುದಾದ ಕಾರ್ಯವಲ್ಲ. ಒತ್ತಾಯದ ವೈರಾಗ್ಯ ಹೇರಿಕೆ ಅಂತರಂಗದಲ್ಲೂ ವೈರಾಗ್ಯ ಹುಟ್ಟಿಸುವುದು ಎಂಬ ಭ್ರಮೆ ಸುಳ್ಳು.

ಹೆಣ್ಣು ಬಾಲಕಿಯಾಗಿರುವಾಗಲೇ ಹೂವು, ಕುಂಕುಮ, ಗಾಜಿನಬಳೆ, ಮೂಗುಬಟ್ಟುಗಳಿಂದ ಅಲಂಕೃತಳಾಗಿರುತ್ತಾಳೆ. ವಿವಾಹದ ಪವಿತ್ರ ಘಳಿಗೆಯಲ್ಲಿ ಆಕೆಗೆ, ವೈವಾಹಿಕ ಚಿಹ್ನೆಯಾಗಿ ಪತಿಯಿಂದ ದೊರಕುವುದು ಮಾಂಗಲ್ಯ ಅಥವಾ ಕರಿಮಣಿ ತಾಳಿ ಮಾತ್ರ, ಜೊತೆಗೆ ಕಾಲುಂಗುರ. ಆದರೆ ಅದೇ ಹೆಣ್ಣು ದುರದೃಷ್ಟವಶಾತ್ ವಿಧವೆಯಾದರೆ, ಆಕೆ ತಾನು ಬಾಲ್ಯದಿಂದಲೂ ಉಪಯೋಗಿಸಿದ ವಸ್ತುಗಳೆಲ್ಲದರ ಮೇಲೆ ತನ್ನ ಸ್ವಾಮಿತ್ವವನ್ನು ಕಳೆದುಕೊಳ್ಳಬೇಕಾಗುತ್ತದೆ. ಇದು ಸಮಂಜಸವೆ?

ಪತಿಯ ಮರಣಾನಂತರ, ಮಾಂಗಲ್ಯವೊಂದನ್ನು ಕಳಚಿದರೆ ಸಾಲದೆ? ಹೆಣ್ಣಿಗೆ ಜನ್ಮದತ್ತ ಅಧಿಕಾರವಾಗಿ ಪ್ರಕೃತಿ ನೀಡಿದ ಹೂವು, ತಾಯಿ ತಂದೆಯರು ತೊಡಿಸಿದ ಗಾಜಿನಬಳೆ, ಮೂಗು ಬಟ್ಟುಗಳ ಮೇಲೆ ಏಕೆ ವಕ್ರನೋಟ?

ಇಂದಿನ ಯಾಂತ್ರಿಕ ಯುಗದಲ್ಲಿ ಮನೆ ಬಿಟ್ಟು ಹೊರಟ ಗಂಡಸು, ಮನೆ ಸೇರುವ ತನಕ, ಗೃಹಿಣಿಯಾದವಳು ದಾರಿ ನೋಡುತ್ತಲೇ ಇರುವ ಪರಿಸ್ಥಿತಿ ಇದೆ. ಅಪಘಾತಗಳ ಮೂಲಕ, ಇನ್ನಿತರ ಕಾರಣಗಳಿಂದ ಪತಿಯನ್ನು ಶಾಶ್ವತ

ವಾಗಿ ಕಳೆದುಕೊಳ್ಳುವ ಎಳೆಹರೆಯದ ವಿಧವೆಯರ ಪಾಡು ಯೋಚಿಸು ವುದಕ್ಕೂ ಅಸಾಧ್ಯ. ಪ್ರಥಮ ವಿವಾಹವೇ ಭಗೀರಥ ಸಾಹಸವಾಗಿರುವ ಈ 'ಡೌರಿ ಪಿಶಾಚಿ' ಯ ಯುಗದಲ್ಲಿ ವಿಧವಾ ವಿವಾಹದ ಕಲ್ಪನೆ ಕೇವಲ ಕನಸೇ ಸರಿ. ಹೀಗಿರುವಾಗ ಜೀವನದುದ್ದಕ್ಕೂ, ಕತ್ತಲೆಯನ್ನೇ ಕಾಣಬೇಕಾದ ಈ ತರುಣಿಯರ ಮೇಲೆ, ನಮ್ಮ ಈ ಅನಿಷ್ಟ ಸಂಪ್ರದಾಯಗಳ ಹೊರೆಯನ್ನೂ ಹೇರಿದರೆ, ದುರ್ಭರ ಬಾಳಿನಲ್ಲಿ ಬೇಯುವ ಅವರ ನೊಂದ ಆತ್ಮದ ಬಿಸಿ ಯುಸಿರು ಸಮಾಜಕ್ಕೆ ಶಾಪವಾಗದಿದ್ದೀತೆ? ಇಂಥಾ ಸಂಪ್ರದಾಯಗಳು ಎಂದೂ ಬಲಾತ್ಕಾರದ ರೂಪ ತಾಳಕೂಡದು. ಬಲವಂತದ ಮಾಘಸ್ನಾನ ವಾಗಬಾರದು.

ವಿಧವೆಗೆ "ತಾನು ಏಕಾಕಿನಿ, ಸಮಾಜದಲ್ಲಿ ತನಗೆ ಮೊದಲಿನ ಸ್ಥಾನವಿಲ್ಲ, ಸಮಾಜ ತನಗೆ ಶೀತಲ ಬಹಿಷ್ಕಾರ ವಿಧಿಸಿದೆ" ಎಂಬ ಕ್ರೂರ ಅನಿಸಿಕೆಯೇ ಸಾಕು ಆಕೆ ಮಾನಸಿಕವಾಗಿ ಹಿಂದುಳಿಯಲು. ಇದಕ್ಕಿಂತ ಬೇರೆ ಚಿತ್ರವಧೆ ಬೇಕಿಲ್ಲ.

ಈ ಸಮಯದಲ್ಲಿ ಪತಿವಿರಹಿಯಾದ ಸ್ತ್ರೀಗೆ ಮಾನಸಿಕ ಧೈರ್ಯ ತುಂಬಿ, ಆಕೆಯ ಮುಂದಿನ ಬಾಳಿಗೆ ಚೇತನ ನೀಡಬಲ್ಲ ಸಂಜೀವಿನಿಯಾಗ ಬೇಕೇ ವಿನಾಃ ಗಾಯದ ಮೇಲೆ ಖಾರ ಎಸೆಯುವ ಪ್ರವೃತ್ತಿ ನಡೆಯ ಕೂಡದು. ಕಾಲ ಬದಲಾದಂತೆ ನಾಗರಿಕತೆಯ ಗಾಳಿ ಬೀಸುವುದರೊಡನೆ ಮೂಢನಂಬಿಕೆಗಳು ನಶಿಸಲು ತೊಡಗಿವೆ ಎಂಬುದು ಸಂತಸದ ಸಂಗತಿ.

ಹಿಂದೆ ಒಬ್ಬ ರಾಜನಿಗೆ ನೂರಾರು ಮಂದಿ ಪತ್ನಿಯರು; ವರ್ಷ ಗಟ್ಟಲೆ ರಾಜನ ಪ್ರೇಮಭಿಕ್ಷೆಗೆ ಕಾಯುತ್ತಿರುವ, ರಾಣೀವಾಸದಲ್ಲಿ ಕೊಳೆಯು ತ್ತಿರುವ ನಾರಿಯರ ಸೌಂದರ್ಯ, ಯೌವ್ವನದ ಬಿಸಿಯುಸಿರು, ಅಂತಃಪುರದ ಗೋಡೆಗಳನ್ನು ದಾಟಿ, ಹೊರಬರಲಾಗದೆ ವಿಲಪಿಸುತ್ತಿತ್ತು.

ಪ್ರಪಂಚದಲ್ಲಿರುವ ಸುಂದರಿಯರೆಲ್ಲ ರಾಜನ ಭೋಗವಸ್ತುಗಳು, ಅವರಿಗೆ ಇಷ್ಟವಿರಲಿ, ಇಲ್ಲದಿರಲಿ, ಅವರ ಅಭಿಪ್ರಾಯಕ್ಕೆ ಕವಡೆ ಬೆಲೆಯೂ ಇಲ್ಲದ ಆ ಕಾಲ ನಾರಿಯರನ್ನು ಕಂಗೆಡಿಸಿತ್ತು. ಆದರೆ ಇಂದು ಹಾಗಲ್ಲ.

ನಮ್ಮ ಮಹಿಳೆಯರು ಉನ್ನತ ವಿದ್ಯಾಭ್ಯಾಸ ಪಡೆದು, ಅರಿವಿನ ದೀವಟಿಗೆಯೊಂದಿಗೆ, ಅಜ್ಞಾನದ ಅಂಧಕಾರವನ್ನು ಹೊರದಬ್ಬುತ್ತಿದ್ದಾರೆ. ಮನೆಯ ಒಳಗೂ ಹೊರಗೂ ದುಡಿಯುತ್ತಾ, ಸಂಸಾರ ರಥದ ಸಮತೋಲನವನ್ನು ಕಾಪಾಡುತ್ತಾ, ಪತ್ನಿಯಾಗಿ, ತಾಯಿಯಾಗಿ, ಗೆಳತಿಯಾಗಿ, ಪುರುಷನ ಸಹವರ್ತಿನಿಯಾಗಿದ್ದಾಳೆ ಮಹಿಳೆ. ನಾರಿ ಮನಸ್ಸು ಮಾಡಿದರೆ ಯಾವ ಕೆಲಸವೂ ಅಸಾಧ್ಯವಲ್ಲ ಎಂಬ ಮಾತನ್ನು ಈಗಾಗಲೇ ಭಾರತೀಯ ಮಹಿಳೆಯರು ಸಾಧಿಸಿ ತೋರಿಸಿದ್ದಾರೆ.

ಹೆಣ್ಣು ಬಾಲ್ಯದಲ್ಲಿ ತಂದೆ ತಾಯಿಗಳ ಅಧೀನ, ಯೌವನದಲ್ಲಿ ಪತಿಯ ಅಧೀನ ಮತ್ತು ವೃದ್ಧಾಪ್ಯದಲ್ಲಿ ಮಕ್ಕಳ ಅಧೀನ ಎಂಬ ಆರ್ಯೋಕ್ತಿ ನಮ್ಮಲ್ಲಿತ್ತು; ಇದೆ. ಆದರೆ ಇಂದು ನಡೆಯುತ್ತಿರುವ ಅಪಮೃತ್ಯುಗಳ ಸರಮಾಲೆಯಿಂದ ಮಕ್ಕಳಾಗುವ ಮುನ್ನವೇ ಪತಿಯನ್ನು ಕಳೆದುಕೊಳ್ಳುವವರೆಷ್ಟು ಮಂದಿ ಇಲ್ಲ? ಆದುದರಿಂದ ಸ್ವಂತ ವ್ಯಕ್ತಿತ್ವ ಬೆಳೆಸಿಕೊಂಡರೆ ಮಾತ್ರ ಹೆಣ್ಣಿಗೊಂದು ಭದ್ರ ಜೀವನ. ಇಲ್ಲವಾದರೆ ಆಕೆ ಎಲ್ಲರಿಗೆ ಕಾಲಕಸ.

ಶ್ರೀರಾಮನ ರಾಮರಾಜ್ಯದಲ್ಲಿ ಮಕ್ಕಳಿಗೆ ಉತ್ತರಕ್ರಿಯೆ ಮಾಡಬೇಕಾದ ಸಂದರ್ಭ ತಾಯಿ ತಂದೆಯರಿಗೆ ಎಂದೂ ಬರುತ್ತಿರಲಿಲ್ಲವಂತೆ. ಒಂದು ವೇಳೆ ಹದಿಹರೆಯದ ಮಕ್ಕಳು ಮೃತ್ಯುವಶರಾದರೆ ಎಲ್ಲಿಯೋ ಧರ್ಮಗ್ಲಾನಿಯಾಯಿತು, ಅಥವಾ ಅಧರ್ಮಾಚರಣೆ ನಡೆಯಿತು ಎಂದರ್ಥವಾಗಿ, ಶ್ರೀರಾಮ ಅದನ್ನು ಕೂಡಲೇ ಸರಿಪಡಿಸುತ್ತಿದ್ದನಂತೆ. ಅಂಥಾ ಕಾಲ ಇದಲ್ಲ. ಇಂದಿನ ದಿನಗಳಲ್ಲಿ ವೃದ್ಧ ತಂದೆ ತಾಯಿಗಳು ಪುತ್ರಶೋಕದಿಂದ ಪೀಡಿತರಾಗಿ. ಅವರಿಗೆ ಚರಮಾಂಜಲಿ ಸಲ್ಲಿಸುವ ವೈಪರೀತ್ಯ ಎಲ್ಲೆಡೆಯೂ ನಾವು ಕಾಣಬಹುದಾದ ದೃಶ್ಯ.

ಹೀಗಿರುವಾಗ ತರುಣ ವಿಧವೆಯರ ಮಾನಸಿಕ ವಿಪ್ಲವವನ್ನು ಅರಿಯುವ ಪ್ರಯತ್ನ ಮಾಡದಿದ್ದರೆ ನಾವು ಕಟುಕರೆಂದು ಕರೆಸಿಕೊಳ್ಳಬೇಕಾದೀತು. ಕಾಲದ ಹೆಜ್ಜೆಯೊಂದಿಗೆ ಸಮಾಜವು ಒಳ್ಳೆಯ ಬದಲಾವಣೆಯತ್ತ ದಾಪುಗಾಲು ಹಾಕಬೇಕಾಗಿದೆ.

ರಾಷ್ಟ್ರದ ಚಾರಿತ್ರ್ಯ ನಿರ್ಮಾಣದಲ್ಲಿ ನಾರಿ

—ಬಿ. ಕೆ. ಯಶೋದಾ

"ತೊಟ್ಟಿಲು ತೂಗುವ ಕೈ ಜಗತ್ತನ್ನೂ ತೂಗಬಲ್ಲುದು." ಜನತೆಯನ್ನು ಎಚ್ಚರಿಸಲೂ ಬಲ್ಲುದು. ತತ್ವಜ್ಞಾನ, ರಾಜಯೋಗ ಇವುಗಳನ್ನೆಲ್ಲ ಅರಿತು ಅನುಭವಿಸಿದಾಗ ಸ್ತ್ರೀ ಕೇವಲ ಸ್ತ್ರೀಯಲ್ಲ, ಆತ್ಮಶಕ್ತಿ. ಆತ್ಮವು ಅವಿನಾಶಿ; ಅದಕ್ಕೆ ಲಿಂಗಭೇದವಿಲ್ಲ ಎನ್ನುವುದನ್ನು ತಿಳಿದುಕೊಳ್ಳಬಹುದು. ಏನಿದ್ದರೂ ಮುಂದಿನ ಜನಾಂಗದ ಚಾರಿತ್ರ್ಯ ನಿರ್ಮಾಣ ಪ್ರಾರಂಭವಾಗುವುದು ತಾಯ ಮಡಿಲಿನಿಂದಲೇ ಎಂಬುದಂತೂ ನಿಜ.

—ಸಂ.

ಮಾನವ ಜೀವನದಲ್ಲಿ ಸುಖ, ಶಾಂತಿಗೆ ಆಧಾರವೇ ಸಚ್ಚಾರಿತ್ರ್ಯ. ವಿಶ್ವದ ಅನೇಕ ಮಾನವರ ಬಳಿ ಇಂದು ಶಾರೀರಿಕ ಶಕ್ತಿ, ಧನ ಶಕ್ತಿ, ಅಧಿಕಾರದ ಶಕ್ತಿಗಳು ಇರಬಹುದು. ಆದರೂ ಚಾರಿತ್ರ್ಯದ ಶಕ್ತಿ ಇಲ್ಲದಿದ್ದರೆ ಅಂಥವರನ್ನು ತುಚ್ಛಮಾನವರೆಂದೇ ಪರಿಗಣಿಸಬೇಕಾಗುತ್ತದೆ. ಯಾರು ಶ್ರೇಷ್ಠ ಚಾರಿತ್ರ್ಯ ಹೊಂದಿರುವರೋ ಅವರಿಗೆ "ಅಗ್ನಿಯೂ ಶೀತಲವಾಗುವುದು, ಸಮುದ್ರವೂ ಕಾಲುವೆ ಆಗುವುದು, ಹಿಮಾಲಯವೂ ಶಿಲೆಯಂತೆ ಇರುವುದು, ಸಿಂಹವು ಸಾಧುವಾಗಿ, ಸರ್ಪವೂ ಮಾಲೆಯಾಗುವುದು, ವಿಷವೂ ಅಮೃತವಾಗುವುದು" ಎಂದು ನೀತಿ ಶತಕದಲ್ಲಿ ಹೇಳಲಾಗಿದೆ.

ಇಂತಹ ಅತ್ಯಮೂಲ್ಯವಾದ ಚಾರಿತ್ರ್ಯದ ನಿರ್ಮಾಣ ಆಗುವುದೆಲ್ಲಿ? ಎಂಬ ಪ್ರಶ್ನೆ ತಲೆದೋರುತ್ತದೆ. ಮಗುವಿನ ಚಾರಿತ್ರ್ಯ ನಿರ್ಮಾಣ ತಾಯಿಯ ಗರ್ಭದಲ್ಲಿದ್ದಾಗಲೇ ಪ್ರಾರಂಭವಾಗುತ್ತದೆ. ಆ ಅವಧಿಯಲ್ಲಿ ಮಾತೆಯು ಏನನ್ನು ಯೋಚಿಸುವಳೋ, ಯಾವ ಸಂಸ್ಕಾರವನ್ನು ಹೊಂದಿರುವಳೋ ಅದರ ಪ್ರಭಾವವು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಮಗುವಿನ ಮೇಲೆ ಪರಿಣಾಮ ಬೀರುವುದು. ಅನಂತರ ಮಗುವಿನ ಜನನವಾದ ಮೇಲೆ ತಾಯಿಯೇ ಮೊದಲ ಗುರುವೂ ಆಗುತ್ತಾಳೆ.

ಚಾಣಾಕ್ಷನಾದ ರಾಜ ನೀತಿಜ್ಞನೇ ಆಗಿರಲಿ, ಅಧ್ಯಾತ್ಮಿಕ ರಂಗದ ಮಹಾತ್ಮನೇ ಇರಲಿ, ಸಮಾಜ ಸುಧಾರಕನೇ ಆಗಲಿ, ಅಪರಾಧಿಯೋ ಆಗಿರಲಿ, ಅವನು ಹೃದಯದಲ್ಲಿ ತನ್ನ ತಾಯಿಗೆ ಅವಶ್ಯವಾಗಿ ಒಂದು ವಿಶೇಷ ಸ್ಥಾನ ವನ್ನು ಇಟ್ಟಿರುತ್ತಾನೆ. ಉದಾಹರಣೆಗೆ ಅಬ್ರಹಾಂ ಲಿಂಕನ್, ಗಾಂಧೀಜಿ, ಶಿವಾಜಿ ಮುಂತಾದವರು. ಕಾಳಿದಾಸನನ್ನು ವಿದ್ವಾಂಸ, ಮಹಾಕವಿಯನ್ನಾಗಿ ಮಾಡಿದವಳು, ಪುರಂದರದಾಸ, ಕನಕದಾಸರನ್ನು ಪರಿವರ್ತನೆ ಮಾಡಿದವಳು ನಾರಿ. ಆದುದರಿಂದ ನಾರಿಯು ನರನನ್ನು ಸಂರಕ್ಷಿಸಿದಳೆಂದು ತಿಳಿಯಬಹುದು ವಿನಹ ನರನು ನಾರಿಯನ್ನು ರಕ್ಷಿಸಿದುದಲ್ಲ. ಅಂತೆಯೇ ಮಗುವು ತಾಯಿ ಯೊಂದಿಗೆ ತೊದಲು ನುಡಿಗಳನ್ನಾಡುತ್ತಾ ಮಾತು, ಭಾಷೆ, ವರ್ತನೆ ಕಲಿತು ಕೊಳ್ಳುತ್ತದೆ. ಪ್ರಾಚೀನ ಕಾಲದಲ್ಲಿ ನಾರಿಯನ್ನು ಅಬಲೆ ಎನ್ನದೆ ಮಹಿಳೆ ಎನ್ನುತ್ತಿದ್ದರು. ಮಹಿಳೆ ಎಂದರೆ ಮಹಾನ್ ಶಕ್ತಿವಂತಳೆಂದೇ ಅರ್ಥ.

ಭಾರತೀಯ ಸಮಾಜದಲ್ಲಿ ಪಿತೃ ಪ್ರಧಾನತೆಯು ಹೆಚ್ಚಾಗತೊಡಗಿದಾಗ "ಸ್ತ್ರೀ"ಯರ ಕುರಿತು ಕೀಳುಭಾವನೆ ಉಂಟಾಯಿತು. ಈ ಕೀಳು ಭಾವನೆಗೆ ಒಂದು ವಿಶೇಷ ಕಾರಣವೆಂದರೆ ಅಂದಿನ ಓರ್ವ ಆಚಾರ್ಯರು ಸನ್ಯಾಸ ಧರ್ಮವನ್ನು ಸ್ಥಾಪಿಸಿದಾಗ ಪುರುಷರು ಮನೆ, ಸಂಸಾರ ಬಿಟ್ಟು ಸನ್ಯಾಸಿ ಗಳಾಗತೊಡಗಿದ್ದು, ನಾರಿಯರ ವೇದಾಧ್ಯಯನದ ಹಕ್ಕು ಕಸಿದುಕೊಂಡದ್ದು, ಅಲ್ಲದೆ ಕೊನೆಗೆ ಈ ಪುರುಷರು "ನಾರಿಯರ ಮುಖವನ್ನು ನೋಡುವುದು ಮಹಾಪಾಪ, ನಾರಿ ನರಕಕ್ಕೆ ದಾರಿ, ವಿಶ್ವಾಸಕ್ಕೆ ಅರ್ಹಳೇ ಅಲ್ಲ" ಎಂದು ಮುಂತಾಗಿ ದೂಷಿಸಿ ಅಂಧಕಾರದಲ್ಲಿ ನೂಕಿದರು. ಮಹಿಳೆ ಅಬಲೆ ಆದಳು. ರವಿಯಿಲ್ಲದ ಬಾನು, ಸವಿಯಿಲ್ಲದ ಜೇನು, ನೀರಿಲ್ಲದ ಮೀನು, ಆತ್ಮವಿಲ್ಲದ ದೇಹ, ದೇವರಿಲ್ಲದ ದೇಗುಲದಂತೆ ಚಾರಿತ್ರ್ಯಶೀಲಗಳಿಲ್ಲದ ಮಹಿಳೆಯ ಜೀವನವು ನಿಸ್ಸಾರ, ಸಚ್ಚಾರಿತ್ರ್ಯ, ಸುಶೀಲ, ಸದ್ಗುಣಗಳೇ ಸ್ತ್ರೀಜೀವನದ ಸುಂದರ ಸಮನ್ವಯತೆ.

ಮಾನಸಿಕ ಚಾರಿತ್ರ್ಯ ರಕ್ಷಣೆಗಾಗಿ ಮನಸ್ಸಿನಲ್ಲಿ ಸುಳಿಯುವ ಅಶುದ್ಧ ವಿಕಾರ ವಿಚಾರಗಳನ್ನು ದೂರಮಾಡಿ ಸದಾ ಒಳ್ಳೆಯದರ ಬಗ್ಗೆ ಯೋಚಿ

ಸುವುದು, ಈಶ್ವರನ ಕುರಿತು ಚಿಂತನೆ ಇವುಗಳನ್ನು ಮಹಿಳೆ ಜಾಗೃತಿಗೊಳಿಸ ಬೇಕು.

ವಚನಶಕ್ತಿಯಲ್ಲಿ ಚಾರಿತ್ರ್ಯದ ಹಿರಿಮೆ ಸೇರಿದಾಗ ಜೀವನ್ಮುಕ್ತಿಯ ವಿಚಾರ ಸುಲಭ ಸಾಧ್ಯ. ಅತಿಯಾಗಿ ಮಾತನಾಡುವುದು, ಅಸಂಬದ್ಧ ರೀತಿಯ ಮಾತನಾಡುವುದು ಸ್ತ್ರೀಯರ ಒಂದು ನ್ಯೂನತೆ. ಇದನ್ನು ತೊರೆದು ಮಿತಭಾಷಿಣಿಯಾಗಿ, ಮಧುರ ಮಾತು, ಹಿತನುಡಿಗಳನ್ನೇ ನುಡಿಯುವ ಅಭ್ಯಾಸ ಮಾಡಿಕೊಳ್ಳಬೇಕು.

ಕರ್ಮ ಚಾರಿತ್ರ್ಯವೂ ಆದರ್ಶವಾಗಿರಬೇಕು. "ಮನೆಯೆ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರುವು" ಎಂಬ ಮಾತಿನಂತೆ ಮಕ್ಕಳು ಬಾಲ್ಯದಲ್ಲಿ ಹೆಚ್ಚಿನ ಸಮಯವನ್ನು ತಾಯಿಯೊಂದಿಗೆ ಕಳೆಯುವರು. ಆದುದರಿಂದ ನೀತಿ ಧರ್ಮದಿಂದ ಕೂಡಿದ ಕರ್ಮವನ್ನೇ ತಾಯಿ ಅನುಸರಿಸಬೇಕು. ಜೀವನದಲ್ಲಿ ಪವಿತ್ರತೆಗೆ ಮೊದಲ ಸ್ಥಾನ ನೀಡಿ ಪವಿತ್ರ ತೆಯ ಸ್ವರೂಪವೇ ತಾಯಿಯೆನಿಸಬೇಕು. ಮಾತೆಯ ಪಾವಿತ್ರ್ಯದ ಶಕ್ತಿ ಎಷ್ಟೆಂಬುದಕ್ಕೆ ಅನೇಕ ಪೌರಾಣಿಕ ಕತೆಗಳು ಸಾಕ್ಷಿಯೊದಗಿಸುತ್ತವೆ.

ಅಜ್ಞಾನ ನಿದ್ರೆಯಲ್ಲಿ ಮಲಗಿರುವ ಅನೇಕ ಮಾತೆಯರಿಗೆ ಮನ-ವಚನ-ಕರ್ಮದಲ್ಲಿ ಪರಿಪೂರ್ಣ ಪವಿತ್ರತೆಯನ್ನು ಪಾಲಿಸುವ ಪ್ರತಿಜ್ಞೆಯನ್ನು ಮಾಡಿಸುವ ರಾಜಯೋಗದ ವ್ಯವಸ್ಥೆಯ ಬಗ್ಗೆ ಹಲವರು ತಿಳಿದಿರಬಹುದು. ಈ ವ್ಯವಸ್ಥೆಯಲ್ಲಿ ತಾವೂ ಪುನೀತರಾಗಿ ಇತರರ ಜೀವನವನ್ನೂ ಉತ್ತಮಗೊಳಿ ಸಲು ಸೇವೆಯಲ್ಲಿ ತತ್ಪರರಾಗುವ ಅವಕಾಶವಿದೆ. ಸಹಜ ರಾಜಯೋಗ ವನ್ನು ಕಲಿಸಲು "ಪ್ರಜಾಪಿತ ಬ್ರಹ್ಮ ಕುಮಾರಿ ಈಶ್ವರೀಯ ವಿಶ್ವವಿದ್ಯಾ ಲಯ"ವನ್ನು ಕ್ರಿ. ಶ. 1937ರಲ್ಲಿ ಸ್ಥಾಪಿಸಿದ್ದಾರೆ. ಸ್ವದೇಶ ಮತ್ತು ವಿದೇಶ ಗಳಲ್ಲಿ ಸುಮಾರು 3500ರಿಂದ 4000ದ ವರೆಗೆ ಶಾಖೆಗಳನ್ನು ಹೊಂದಿ ರುವ ಈಶ್ವರೀಯ ವಿಶ್ವವಿದ್ಯಾಲಯದ ಪ್ರಧಾನ ಕೇಂದ್ರವು ಅಬು ಪರ್ವತ [ರಾಜಸ್ಥಾನ]ದಲ್ಲಿದೆ. ಯಾವುದೇ ಜಾತಿ, ಮತ, ಪಂಥ, ಪಂಗಡಗಳ, ದೇಶ, ಭಾಷೆ, ಕಾಲ, ಕಾರ್ಯಗಳಿಗೆ ಒಳಪಡದ ಈಶ್ವರೀಯ ವಿದ್ಯಾಲಯವು ಶತ ಶತಮಾನಗಳಿಂದ ಬಂದ ಅಂಧಶ್ರದ್ಧೆಗಳನ್ನು ತೊಡೆದು ಹಾಕಿ ವರ್ತಮಾನದ

ಶ್ರೀ ಸಾಮಾನ್ಯನ ಜೀವನವನ್ನು ಸುಖ, ಶಾಂತಿ, ಪವಿತ್ರತೆಯ ಆಧ್ಯಾತ್ಮಿಕ ಕ್ರಾಂತಿಯತ್ತ ನಡೆಸಲು ಜ್ಞಾನ ಹಾಗೂ ಯೋಗತತ್ವದ ತಳಹದಿಯ ಮೇಲೆ ನಿಯೋಜಿತಗೊಂಡಿದೆ. ಇಂತಹ ವಿಶ್ವವ್ಯಾಪಕವಾದ ಸೇವಾಕೇಂದ್ರದ ಪ್ರಧಾನ ಸಂಚಾಲಕಿಯರು ಸೋದರಿಯರು. ಇವರು ಈ ಸಂಚಾಲನೆಯ ಸಾಧನೆಯನ್ನು ಸಫಲತಾಪೂರ್ವಕವಾಗಿ ನಡೆಸುತ್ತಿದ್ದಾರೆ. ನಾರಿಯರ ಮುಖಾಂತರವೇ ನಡೆಯುವ ಏಕಮೇವ ಬೃಹತ್ ಸಂಸ್ಥೆ ಇದು. ಇಲ್ಲಿ ಪರಮಾತ್ಮನನ್ನು ಅರಿತು, ತಮ್ಮ ಆತ್ಮಶಕ್ತಿಯನ್ನು ಪ್ರಬಲಗೊಳಿಸಿ ನಾರಿ ಅಬಲೆ ಅಲ್ಲ, ಸಬಲೆ ಎನ್ನುವುದನ್ನು ಅಸಂಖ್ಯ ಸೋದರಿಯರು ಜನತೆಗೆ ತಿಳಿಯಪಡಿಸುತ್ತಿದ್ದಾರೆ. ತೊಟ್ಟಿಲು ತೂಗುವ ಕೈ ಜಗತ್ತನ್ನೂ ತೂಗಬಲ್ಲದು.

ಹೆಣ್ಣು ಮಕ್ಕಳ ಮದುವೆ ಸಮಸ್ಯೆ

— ವರದಾ ಭಟ್

"ಹೆಣ್ಣು ಮಕ್ಕಳ ಮದುವೆ ಸಮಸ್ಯೆ" ಹೆಚ್ಚಿನವರ ತಲೆತಿನ್ನುವ ಪ್ರಶ್ನೆ. ಈ ಸಮಸ್ಯೆಯ ಆರಂಭ ಎಲ್ಲಿಂದ, ಯಾರಿಂದ? ಅಂತ್ಯ ಹೇಗೆ, ಯಾವಾಗ? ಎಂಬುದಕ್ಕೆ ಉತ್ತರಿಸುವುದು ಕಷ್ಟ. ವಿವಿಧ ವರ್ಗಗಳವರಿಗೆ ಅವರದೇ ಆದ ಕಾರಣಗಳಿಗಾಗಿ ಹೋರಾಟ ನಡೆಸುತ್ತಿರುವ ಪರಿಸ್ಥಿತಿ ಇದೆ. ಆದರೂ ಮದುವೆಯಂತಹ ಮಂಗಲ ಕಾರ್ಯಕ್ಕೆ ಮನಸ್ಸೇ ಮುಖ್ಯವಾಗಿರಬೇಕಲ್ಲದೆ ಹಣ, ಒಡವೆ, ಅಂತಸ್ತು, ಜಾತಕಗಳ ಕಾರಣ ಎಂದಿಗೂ ತೊಡಕಾಗಬಾರದು.

—ಸಂ.

ಹೆಣ್ಣು ಹೇಗಿದ್ದರೂ ಪರರ ಮನೆ ಸೇರುವವಳು. ಅವಳಿಗೆ ಹೆಚ್ಚಿನ ವಿದ್ಯೆ ಏಕೆ? ಗೃಹಕೃತ್ಯ, ಗಂಡ–ಮಕ್ಕಳ ಲಾಲನೆ ಪಾಲನೆ ಮಾತ್ರ ಅವಳ ಕರ್ತವ್ಯ. ಅದನ್ನು ಕಾಯಾ ವಾಚಾ ಮನಸಾ ಪಾಲಿಸುವುದೇ ಧರ್ಮ ಎಂಬ ಕಾಲ ಕಳೆದು ಇಂದಿನ ಸಮಾಜದಲ್ಲಿ ಹೆಣ್ಣು ಉತ್ತಮ ಸ್ಥಾನ, ಮಾನಗಳನ್ನು ಪಡೆಯುವಂತಾಗಿದೆ. ಹೀಗಿದ್ದರೂ ಹೆಣ್ಣು ಮಕ್ಕಳ ವಿವಾಹದ ವಿಷಯದಲ್ಲಿ ಇಂದಿಗೂ ಅಗಣಿತ ಸಮಸ್ಯೆಗಳನ್ನು ಕಾಣುತ್ತಿದ್ದೇವೆ. ಈ ಸಮಸ್ಯೆಗಳಿಗೆ ಪರಿಹಾರವಿಲ್ಲವೆ? ಪರಿಹಾರಕ್ಕೆ ಮಾರ್ಗೋಪಾಯಗಳೇನು? ಎಂಬ ಪ್ರಶ್ನೆಗಳು ನಮ್ಮನ್ನು ಕಾಡುತ್ತಿವೆ.

ಮದುವೆ ಎನ್ನುವುದು ಸಮಾಜದಲ್ಲಿ ಒಂದು ಸಂಪ್ರದಾಯ. ಶುಭ ಕಾರ್ಯ. ಉತ್ತಮ ಪದ್ಧತಿ. ಪಶುಗಳಿಗಿಂತ ಭಿನ್ನವಾಗಿ ಶ್ರೇಷ್ಠರೆನಿಸಿರುವ ಮಾನವರಲ್ಲಿ "ಒಂದು ಗಂಡು, ಒಂದು ಹೆಣ್ಣು ಅನ್ಯೋನ್ಯತೆಯಿಂದ ದಾಂಪತ್ಯ ಜೀವನ ನಡೆಸುವುದಕ್ಕೆ ಅನುವು ಮಾಡಿಕೊಡುವುದು" ಮದುವೆ. ತತ್ಸಂಬಂಧ ಹೆಣ್ಣು–ಗಂಡಿನ ಮನೆಯ ಹಿರಿಯರುಗಳಲ್ಲಿ ಆಗುವ ಪರಸ್ಪರ ಒಪ್ಪಂದ ಇದು ಎನ್ನಬಹುದು. ಇದರಲ್ಲಿ ಸಮಸ್ಯೆಗಳೇಕೆ? ಎಲ್ಲಿಂದ? ಯೋಚಿಸೋಣ.

ಹಿಂದೆಲ್ಲಾ ಬಾಲ್ಯವಿವಾಹ ಜಾರಿಯಲ್ಲಿದ್ದ ಕಾಲ. ಆಗ ಹೆಣ್ಣು ಶೈಶವ ದಲ್ಲಿರುವಾಗಲೇ ಅವಳ ಮದುವೆ ಏರ್ಪಡುತ್ತಿತ್ತು. ಮದುವೆ ಸಮಸ್ಯೆ ಬರುತ್ತಿರಲಿಲ್ಲ ಹೆಚ್ಚಾಗಿ. ನಿಜವಾಗಿ ಅದು ಕೆಟ್ಟ ಪದ್ಧತಿಯಾಗಿತ್ತು. ಹೆಣ್ಣು ಮಕ್ಕಳಿಗೆ ಭವಿಷ್ಯದಲ್ಲಿ ಮಾರಕಕಾರಿಯಾಗಿತ್ತು. ಹೀಗಾಗಿ ಇಂದು, 18 ವರ್ಷಗಳು ತುಂಬಿದ ನಂತರವೇ ಮದುವೆ ಮಾಡಬೇಕೆಂಬ ಕಾನೂನು ಜಾರಿಗೆ ಬಂದಿದೆ. ಇತ್ತೀಚೆಗಿನ ದಿನಗಳಲ್ಲಿ ಹೆಣ್ಣುಮಕ್ಕಳ ಮದುವೆ ಸಮಸ್ಯೆ ಯನ್ನು ಬಹಳವಾಗಿ ಕಾಣುತ್ತಿದ್ದೇವೆ. ಈ ಎಲ್ಲಾ ಸಮಸ್ಯೆಗಳ ಮೂಲ ಕಾರಣ ವರದಕ್ಷಿಣೆ, ಬಂಗಾರ, ಅಂತಸ್ತು, ಅಧಿಕಾರ, ಶಿಕ್ಷಣ, ಉದ್ಯೋಗ ಮತ್ತು ವಿವಾಹಯುಕ್ತ ವಯಸ್ಸಿನ ಹೆಣ್ಣು–ಗಂಡು ಮತ್ತವರ ಹಿರಿಯರು ಗಳ ಅಪೇಕ್ಷೆಗಳು, ಆಕ್ಷೇಪಗಳು ಇತ್ಯಾದಿ. ವಿವಾಹ ಸಮಸ್ಯೆಯನ್ನು ಎದುರಿ ಸುವ ಮೂರು ವರ್ಗದ ಜನಾಂಗವನ್ನು ನಾವಿಂದು ಗುರುತಿಸಬಹುದು. ಒಂದು ಶ್ರೀಮಂತ ವರ್ಗ, ಎರಡು ಮಧ್ಯಮ ವರ್ಗ, ಮೂರನೆಯ ಬಡ ವರ್ಗ.

ಶ್ರೀಮಂತ ವರ್ಗದಲ್ಲಿ ಹೆಣ್ಣು ಮಕ್ಕಳ ವಿವಾಹ ಸಮಸ್ಯೆ, ವರದಕ್ಷಿಣೆ ಬಂಗಾರಗಳಿಂದ ಮುಚ್ಚಲ್ಪಡುತ್ತದೆ. ಇಲ್ಲಿ ತಮ್ಮ ಅಂತಸ್ತಿಗೆ ತಕ್ಕಂತೆ ಇಲ್ಲವೇ ಇನ್ನೂ ಹೆಚ್ಚಿನ ಮನೆತನದ ನೆಂಟಸ್ತಿಕೆ ಮಾಡುತ್ತಾರೆ. ಇಲ್ಲವೇ ಹುಡುಗರನ್ನು ಮೊದಲೇ ಬುಕ್ಕಿಂಗ್ ಮಾಡುತ್ತಾರೆ. ಮತ್ತು ಅವರ ಬಹು ತೇಕ ಶಿಕ್ಷಣದ ಜವಾಬ್ದಾರಿಯನ್ನು ವಹಿಸಿಕೊಂಡು ಬಿಡುತ್ತಾರೆ. ಹಾಗಾಗಿ ಇಲ್ಲಿ ಮದುವೆಯು ಸಮಸ್ಯೆ ಹೆಚ್ಚಾಗಿ ಕಾಡುವುದಿಲ್ಲ.

ಆರ್ಥಿಕವಾಗಿ ಸಾಮಾಜಿಕವಾಗಿ ತೀರಾ ಕೆಳವರ್ಗದಲ್ಲಿರುವ ಹೆಣ್ಣು ಮಕ್ಕಳ ಮದುವೆಗೆ ಆರ್ಥಿಕ ಕೊರತೆ ಒಂದು ಕಾರಣವಾದರೆ, ಮತ್ತೊಂದು ಕುಟುಂಬದ ಯಜಮಾನನ ಬೇಜವಾಬ್ದಾರಿಯುತವಾದ ನಡವಳಿಕೆ ಕಾರಣ ವಾಗುತ್ತದೆ. ಇಲ್ಲಿ ಶಿಕ್ಷಣಕ್ಕೆ ಮಹತ್ವವಿಲ್ಲ. ವರದಕ್ಷಿಣೆ–ಬಂಗಾರದ ಮಾತು ಗಳು ಬಹಳ ಮಟ್ಟಿಗೆ ಶೂನ್ಯ. ಹಿರಿಯರು ಕುಡಿತ–ಜೂಜು ಇವುಗಳಿಗೆ ಬಲಿ ಬಿದ್ದ ಕಾರಣ ಮದುವೆಗೆ ಅಡೆತಡೆಗಳು ಉಂಟಾಗುತ್ತದೆ. ಆದರೂ ಇಲ್ಲಿ ಕೂಲಿ ಕೆಲಸವೇ ಜೀವನಾಧಾರವಾದುದರಿಂದ ಮದುವೆಯೂ ಯುಕ್ತ ವಯಸ್ಸಿನಲ್ಲಿ ಅನುಕೂಲಕ್ಕೆ ತಕ್ಕಂತೆ ನಡೆದು ಬಿಡುತ್ತದೆ.

ಅತೀ ಹೆಚ್ಚಾಗಿ ಈ ಸಮಾಜದಲ್ಲಿ 'ಕಂಕಣಬಲ' ಒದಗಿ ಬಾರದೆ ದುಃಖಿಗಳಾದವರು ಮಧ್ಯಮ ವರ್ಗದ ಕುಲೀನ ಮನೆತನದ ಹೆಣ್ಣು ಮಕ್ಕಳು ಮತ್ತು ಸಮಸ್ಯೆಗಳನ್ನು ಎದುರಿಸುತ್ತಿರುವ ಅವರ ಹೆತ್ತವರು 'ಆರಕ್ಕೇರದೆ, ಮೂರಕ್ಕಿಳಿಯದ' ಸ್ಥಿತಿಯಲ್ಲಿರುವವರು! ಇಲ್ಲಿ ತಮ್ಮ ಅನುಕೂಲಕ್ಕೆ ತಕ್ಕಂತೆ ವಿವಾಹ ಮಾಡುವುದೂ ದುಸ್ಸಾಧ್ಯವಾಗಿದೆ. ತಮ್ಮ ಹೆಣ್ಣು ಮಕ್ಕಳು ಒಳ್ಳೆಯ ಗಂಡನನ್ನು ಪಡೆಯಬೇಕು, ಅವನು ಉತ್ತಮ ಕುಲವಂತ ವಿದ್ಯಾವಂತನಾಗಿರಬೇಕು, ನೌಕರಿಯಲ್ಲಿರಬೇಕು. ಹಾಗೂ ಮಗಳು ಉನ್ನತ ಜೀವನ ನಡೆಸಬೇಕೆಂಬ ನಿರೀಕ್ಷೆ ಇರುತ್ತದೆ. ಇಂತಹ ಸಹಜವಾದ ಆಸೆ ಇರುವುದು ಮತ್ತು ಮನೆತನವನ್ನು ಬಯಸುವುದು ಸರ್ವೇಸಾಮಾನ್ಯ. ತಮಗಿಂತ ಕಡಿಮೆ ಆರ್ಥಿಕ ಸ್ಥಿತಿವಂತನಿಗೆ ಮದುವೆ ಮಾಡಲು ಇಚ್ಛೆ ಪಡದ ಸ್ಥಿತಿ. ಶ್ರೀಮಂತ ಸಂಬಂಧ ಬೆಳೆಸಲು ಆರಕ್ಕೇರದ ಗತಿ! ಒಂದು ವೇಳೆ ಮೇಲ್ಮಟ್ಟದವರ ಸಂಬಂಧ ಕೂಡಿ ಬಂದರಂತೂ ವರದಕ್ಷಿಣೆ-ಬಂಗಾರ, ವರೋಪಚಾರವೆಂದು ಮನೆ ಮಠ ತೊಳೆದು ಹೋಗುವ ಪರಿಸ್ಥಿತಿ! ಮತ್ತೂ ಹೆಚ್ಚಿನ ಹೆಣ್ಣು ಮಕ್ಕಳಿದ್ದರೆ ಅಧೋಗತಿಯೇ ಸರಿ. ಹೀಗಾಗಿ ಮಧ್ಯಮ ವರ್ಗದಲ್ಲಿ ಮದುವೆ ಸಮಸ್ಯೆ ಬಹಳಷ್ಟು ಕಾಡುತ್ತಿದೆ. ಶಿಕ್ಷಣವನ್ನು ಪೂರೈಸಿಕೊಂಡ ಹೆಣ್ಣು ಮಕ್ಕಳಂತೂ ಹಣ-ಒಡವೆ-ವಾಹನ ಕೇಳುವ ಹುಡುಗರ, ಹಿರಿಯರ ದಬ್ಬಾಳಿಕೆಗೆ ತಲೆಬಾಗಲಾರರು. ಮದುವೆ ಇಲ್ಲದೇ ಹೋದರೂ ಸರಿ, ಎಂಬ ವಾದವೂ ಇರುತ್ತದೆ. ಹಾಗಾಗಿ ಇಲ್ಲಿ ಹೆಣ್ಣು ಮಕ್ಕಳು ಮದುವೆಯ ವಯಸ್ಸು ದಾಟಿದರೂ ಇನ್ನೂ 'ಕಂಕಣಬಲ' ಕೂಡಿಬಾರದವರಾಗಿದ್ದಾರೆ.

ವರದಕ್ಷಿಣೆ ವಿರುದ್ಧ ಗಂಟಲುಗಟ್ಟಲೆ ಕೊರೆಯುವ ಗಂಡು ಇಲ್ಲವೇ ಗಂಡಿನ ಹಿರಿಯರು ತಮ್ಮ ಸರದಿ ಬಂದಾಗ ವರದಕ್ಷಿಣೆಗಾಗಿ ಕೈಚಾಚುತ್ತಾರೆ. ಅವರಿಗೆ ಇಲ್ಲಿ ಮುಖಭಂಗವಾಗುವುದಿಲ್ಲ. ತಮ್ಮನ್ನೇ ತಾವು ಮಾರಿಕೊಂಡು ಬಿಡುತ್ತಾರೆ. ಇಂತಹ ಸಂದರ್ಭದಲ್ಲಿ ಕೆಲವೊಮ್ಮೆ ವಿವಾಹ ನಂತರ ಹೆಣ್ಣಿಗೆ ಗಂಡಿನ ಮನೆಯಲ್ಲಿ ನರಕ ಪ್ರಾಪ್ತಿಯೇ ಸರಿ. ಈ ಕಿರುಕುಳ ತಾಳಲಾರದೆ ಹೆಣ್ಣು ಆತ್ಮಹತ್ಯೆಯಂತಹ ಘೋರ ಕಾರ್ಯಕ್ಕೆ ಮನಸ್ಸು ಮಾಡುತ್ತಾಳೆ. ಇನ್ನೊಂದು ವಿಚಾರ, ಹೆಣ್ಣು ಮಕ್ಕಳೂ ಕೆಲವೊಮ್ಮೆ ತಮಗಿಷ್ಟವಿಲ್ಲದಿದ್ದರೂ

ಹಿರಿಯರ ಒತ್ತಾಯಕ್ಕೆ ತಲೆಬಾಗಿ ವಿವಾಹದ ಹೆಸರಿನಲ್ಲಿ ತಮ್ಮ ಬದುಕನ್ನು ಬಲಿಗೊಡುತ್ತಾರೆ.

ಹೆಣ್ಣು ಮಕ್ಕಳ ವಿವಾಹಕ್ಕೆ ಸಂಬಂಧಿಸಿದ ಸಮಸ್ಯೆಗಳಿಗೆ ಪರಿಹಾರ ವಿದೆಯೇ? ಹೆಣ್ಣು ಹೇಗೆ ಇದನ್ನು ನಿಭಾಯಿಸಿಕೊಳ್ಳಬಲ್ಲಳು? ಗಂಡು ಈ ಸಮಸ್ಯೆಯಲ್ಲಿ ಸಹಕರಿಸಿ ಪರಿಹಾರ ಸೂಚಿಸಲಾರನೆ? ಹಿರಿಯರ ಜವಾಬ್ದಾರಿ ಏನು? ಎಂದು ಯೋಚಿಸಿದಾಗ ಈ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯ. ಮಾನವನ ಮನಸ್ಸು ಮುಖ್ಯವಾಗಿ ಬದಲಾಗಬೇಕು. ಅಲ್ಲದೆ ಎಲ್ಲಾ ವಿವಾಹಯುಕ್ತ ಹೆಣ್ಣು-ಗಂಡುಗಳಲ್ಲಿ ಹಾಗೂ ಹಿರಿಯರುಗಳಲ್ಲಿ ಮನೆ ಮಾಡಿಕೊಂಡಿರುವ ಆಸೆಗಳು ಸ್ವಲ್ಪ ಸ್ವಲ್ಪವೇ ಸಡಿಲವಾದಾಗ ಮಾತ್ರ ಪರಿಹಾರ ಸಾಧ್ಯವಾಗುತ್ತದೆ.

'ಹೆಣ್ಣು ಸಂಸಾರದ ಕಣ್ಣು' ಅವಳೆಂದೂ ಸಂಸಾರದಲ್ಲಿ ತೊಡಕಾಗಿ ಕಾಣಬಾರದು. ವಿವಾಹಯುಕ್ತ ವಯಸ್ಸಿನಲ್ಲಿ ಮದುವೆಯಾಗದೆ ಹೋದರೆ, ತನ್ನ ಆಸೆಗಳೆಲ್ಲಾ ನಾಶವಾದವು ಎಂದು ಖೇದಗೊಳ್ಳಬಾರದು. ಧೈರ್ಯ-ಸ್ಥೈರ್ಯದ ಛಲಬೇಕು. ವಿದ್ಯಾವಂತೆಯಾದರೆ ಯೋಗ್ಯತಾನುಸಾರ ಯಾವುದಾದರೂ ಉದ್ಯೋಗ ಹಿಡಿಯಬಹುದು. ಇಲ್ಲವೇ ಸ್ವಂತ ಉದ್ಯೋಗದ ಅವಲಂಬನೆ ಮಾಡಿ ತನ್ನ ಜೀವನವನ್ನು ಎದುರಿಸಬಹುದು.

ಗಂಡು, ತನ್ನ ಜೊತೆಗಾತಿಯನ್ನು ವರದಕ್ಷಿಣೆ-ಬಂಗಾರಗಳಿಂದ, ಉದ್ಯೋಗದಿಂದ ಅಳೆಯುವುದು ಸರಿಯಲ್ಲ. ಹೆಣ್ಣು, ತನ್ನ ಬದುಕಿನಲ್ಲಿ ಎಷ್ಟೋ ಆಸೆಗಳನ್ನು ಅದುಮಿಟ್ಟುಕೊಳ್ಳುವುದಿಲ್ಲವೆ? ಗಂಡೂ, ತನ್ನಿಂದ ಬೇರೊಬ್ಬರ ದುರಂತವನ್ನು ಕಾಣಲಿಚ್ಛಿಸದೆ ಆಸೆಗಳಿಗೆ ತಡೆ ಹಾಕಬೇಕು. ಸರಳ ವಿವಾಹ, ಸರಳ ಜೀವನವನ್ನು ರೂಢಿಸಿಕೊಳ್ಳಬೇಕು. ತನ್ನ ಅಧಿಕಾರ – ಅಂತಸ್ತುಗಳ ಕಾರಣಕ್ಕಾಗಿ ಹೆಣ್ಣು ಹೆತ್ತವರನ್ನು ಹಿಂಡುವುದು ಸರಿಯಲ್ಲ. ಎಷ್ಟೆಂದರೂ ಸಭೆ-ಸಮಾರಂಭಗಳಲ್ಲಿ ಭಾಷಣ ಕೊರೆದಂತೆ ಒಂದು ಹೆಣ್ಣು, ಈ ಸಮಾಜದಲ್ಲಿ ಪುರುಷನಂತೆ ಸೆಟೆದು ಬಾಳಲಾರಳು. ಹೆಣ್ಣನ್ನು ವರದಕ್ಷಿಣೆ-ಬಂಗಾರಗಳಿಂದ ಅಳೆಯದೆ, ಗುಣನಡತೆಗಳನ್ನು

ಮನ್ನಿಸಿ ಅವಳಿಗೆ ಮನೆಯಲ್ಲೇ ಕೈಗೊಳ್ಳಬಹುದಾದ ಸ್ವಉದ್ಯೋಗದ ಅವಕಾಶ ಮಾಡಿಸಿ ಕೊಡುವ ಕಾರ್ಯಕ್ಕೆ ಗಂಡಸರು ಮುಂದಾಗಬೇಕು.

ಹೆಣ್ಣಿನ ಮದುವೆ ಸಮಸ್ಯೆಗೆ ಹೆತ್ತವರೂ ಒಂದು ರೀತಿಯಲ್ಲಿ ಕಾರಣರು. ಇಲ್ಲಿ ಗಂಡಿನ ಹೆತ್ತವರಿರಬಹುದು, ಹೆಣ್ಣಿನ ಹೆತ್ತವರೂ ಇರಬಹುದು. "ವಿವಾಹವೆಂಬುದು ಎರಡು ಮನೆತನಗಳ ವ್ಯಕ್ತಿಗಳನ್ನು ಒಂದುಗೂಡಿಸುವ ಬಂಧನವೇ ಹೊರತು ವರದಕ್ಷಿಣೆಯ ವ್ಯಾಪಾರವಲ್ಲ." ಇಂತಹ ಅನಿಷ್ಟ ಪದ್ಧತಿಗಳನ್ನೆಲ್ಲಾ ನಾವು ಯಾಕೆ ಕೈಬಿಡಬಾರದು? ಮಗನ ಮದುವೆ ಸಂಬಂಧ ಒಳ್ಳೆಯದಾಗಬೇಕೆಂದು ಹೆತ್ತವರು ಬಯಸುವಾಗ ಅದಕ್ಕೆ ವರದಕ್ಷಿಣೆಯೇ ಮಾನದಂಡ ಯಾಕೆ ಆಗಬೇಕು? ಹೆಣ್ಣು ಹೆತ್ತವರೂ ಮಗಳ ಮಾತಿಗೆ ಬೆಲೆ ಕೊಡದೆ, ಅಂತಸ್ತಿಗೆ ಮೇಲ್ಪಟ್ಟ ಸಂಬಂಧ ಹುಡುಕುವುದೂ ಸರಿಯಲ್ಲ. 'God helps those who helps themselves' ಎಂಬ ಆಂಗ್ಲ ಗಾದೆಯಂತೆ, ತನ್ನ ಉದ್ಧಾರ ತಾನೇ ಮಾಡಿಕೊಳ್ಳುವ ಛಲ ಪ್ರವೃತ್ತಿ ಮಹಿಳೆಯರಲ್ಲಿ ಇದ್ದರೆ ಈ ಕಾರ್ಯಕ್ಕೆ ದೈವ ಸಹಾಯವೂ ಇರುತ್ತದೆ. ಮುಖ್ಯವಾಗಿ ಹೆಣ್ಣು–ಗಂಡು ಮತ್ತು ಅವರ ಹಿರಿಯರುಗಳಲ್ಲಿ ಮೂಲತಃ ಮನ ಪರಿವರ್ತನೆಯಾಗಬೇಕು. ಹಾಗಾದಾಗ ಮಾತ್ರ ಹೆಣ್ಣುಮಕ್ಕಳ ವಿವಾಹ ಸಮಸ್ಯೆಗೆ ಪರಿಹಾರ ಸಿಕ್ಕೀತು.

ಮಾತೆ ಹಾಗೂ ಶಿಶು ವಿದ್ಯಾಭ್ಯಾಸ

— ಎಚ್. ಶಕುಂತಲಾ ಭಟ್

"ಏನೂ ಅರಿಯದ ಕಂದನನ್ನು ಎಷ್ಟೋ ದೊಡ್ಡ ಮಹಾನುಭಾವನನ್ನಾಗಿ ಬೆಳೆಸಿ ಪರಿವರ್ತಿಸುವ ಮೂಲ ಹಂತ ಯಾವುದು? ಈ ಮಹತ್ಕಾರ್ಯದ ಬುನಾದಿ ಎಲ್ಲಿ? ದೈವೇಚ್ಛೆಯ ಜೊತೆಗೆ ದೇವಿಯರಂತೆ ತಿದ್ದಿ ಬೆಳೆಸಬಲ್ಲ ತಾಯಂದಿರು ನಿಜಕ್ಕೂ ಕೃತಾರ್ಥರು.

—ಸಂ.

ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಸ್ತ್ರೀಯರಲ್ಲಿ ಸರ್ವತೋಮುಖ ವಾದ ಹಾಗೂ ಕ್ರಾಂತಿಕಾರಕ ಬದಲಾವಣೆಗಳು ಕಂಡು ಬಂದವು. ರಾಜಕೀಯ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ, ಕ್ರೀಡಾ ಹಾಗೂ ವೈಜ್ಞಾನಿಕ ಕ್ಷೇತ್ರಗಳಲ್ಲಿ ಸ್ತ್ರೀ ಪುರುಷರ ಸಮಾನತೆಯನ್ನು ಭಾರತದ ಸಂವಿಧಾನ ಒಪ್ಪಿಕೊಂಡಿದೆ.

ಪ್ರಕೃತಿ ವಿನ್ಯಾಸದಂತೆ ಮಹಿಳೆಯೇ ಜನಾಂಗದ ಜನನಿ. ಆಕೆ ಗೃಹ ಕೃತ್ಯಗಳ ಜೊತೆಗೆ ಮಾತೆಯಾಗಿ ಕಾರ್ಯನಿರ್ವಹಿಸಿ, ತನ್ನ ಮಕ್ಕಳ ವ್ಯಕ್ತಿತ್ವದ ವಿಕಾಸಕ್ಕಾಗಿ ಅವರಿಗೆ ಸದ್ಗುಣಗಳನ್ನು ಕಲಿಸಿ…ಅವರನ್ನು ಸುಸಂಸ್ಕೃತರನ್ನಾಗಿ ಪರಿವರ್ತಿಸುವವಳು. ಮನೆಯ ಒಳಗೆ ಹಾಗೂ ಹೊರಗೆ ಒಂದಲ್ಲ ಒಂದು ರೀತಿಯ ಸ್ವಾವಲಂಬಿ ಜೀವನ ನಡೆಸುವ ಮಾತೆ ತಾಳ್ಮೆಯ ಪ್ರತಿರೂಪ. ಮನೆಯಲ್ಲಿ ವೇತನವಿಲ್ಲದ ಸೇವಕಿ. ಹಾಗಾಗಿ ತಾಯ್ತನದ ಹಿರಿಮೆಗೆ ಬೆಲೆ ಕಟ್ಟುವವರಿಲ್ಲ. ಮನೆಯಲ್ಲಿ ಆಕೆ ತನ್ನ ಕುಟುಂಬದ ಒಳ್ಳೆಯ ಮನೋಭಾವನೆಗಳನ್ನು ಮಕ್ಕಳು ಸೂಕ್ಷ್ಮವಾಗಿ ಗುರುತಿಸಿ ಅರಿತು, ಅದಕ್ಕೆ ತಕ್ಕಂತೆ ಹೊಂದಿಕೊಂಡು ಹೋಗುವಂತೆ ಕಲಿಸಬೇಕು. ತಾಯಿಯ ವ್ಯಕ್ತಿತ್ವದ ಪ್ರಭಾವವು ಮಕ್ಕಳ ಮೇಲೆ ವಿಶೇಷವಾಗಿ ಬೀರುವಂತೆ ಬೇರೆ ಯಾರೂ ಬೀರಲಾರರು.

ತಾಯಿ-ಮಕ್ಕಳ ಸಂಬಂಧವು ಬಾಲ್ಯದಲ್ಲಿ ಹೆಚ್ಚು ಪ್ರಭಾವಯುತ ಮಾದುದು. ಏಕೆಂದರೆ ಆಗ ಶಿಶುವಿನ ಸೌಖ್ಯ -ನೆಮ್ಮದಿಗಳಿಗೆ ತಾಯಿಯೇ ಮೂಲಾಧಾರ. ಸಾಮಾನ್ಯವಾಗಿ ಮಕ್ಕಳ ಪೋಷಣೆ ಎಂದರೆ ಊಟ, ನಿದ್ರೆ, ಸ್ನಾನ, ಉಡುಪು ಇವುಗಳ ಮೂಲಕ ದೈಹಿಕ ಬೆಳವಣಿಗೆ ಎಂದು ಹೆಚ್ಚಿನ ತಾಯಂದಿರು ತಿಳಿದಿರುತ್ತಾರೆ. ಆದರೆ ತಾಯಿಯಾದವಳು ಇದಕ್ಕಿಂತಲೂ ಮಹತ್ವವುಳ್ಳ ಶಿಶು ವಿದ್ಯಾಭ್ಯಾಸ ಮತ್ತು ಮಾನಸಿಕ ಬೆಳವಣಿಗೆಯ ಬಗೆಗೆ ತಿಳಿದಿರಬೇಕು. ಈ ಮೊದಲಿಗೆ ಹೆತ್ತವರ ಪ್ರೀತಿಯು ಮಕ್ಕಳ ಜ್ಞಾನ ವಿಕಸನಕ್ಕೆ ಸಹಾಯಕ. ಇದಕ್ಕಾಗಿ ತಾಯಿ-ತಂದೆಗಳ ಪರಸ್ಪರ ಸಂಬಂಧವು ಮಧುರವಾಗಿರಬೇಕು. ಮನೆಯಲ್ಲಿ ಜಗಳ, ಅಶಾಂತಿ, ಕೋಪ, ಹೊಡೆ ದಾಡುವುದು ಇತ್ಯಾದಿ ವಾತಾವರಣ ಮಕ್ಕಳ ಭದ್ರತೆಯ ಮೇಲೆ ಕೆಟ್ಟ ಪರಿಣಾಮವನ್ನು ಉಂಟು ಮಾಡುತ್ತದೆ.

ಶಿಶು ವಿದ್ಯಾಭ್ಯಾಸವು ಮುಂದಿನ ಶಿಕ್ಷಣ ಹಂತಗಳಿಗೆ ತಳಹದಿಯಾಗಿದೆ. ಪುರಾಣೇತಿಹಾಸಗಳಲ್ಲಿ ಪ್ರಖ್ಯಾತಿ ಪಡೆದ ಪ್ರಹ್ಲಾದ, ಅಭಿಮನ್ಯು ಮೊದ ಲಾದವರ ಚರಿತ್ರೆಯಿಂದ ಈ ವಿಷಯವು ವೇದ್ಯವಾಗಿರುತ್ತದೆ. ಗರ್ಭವಾಸ ದಲ್ಲಿರುವ ಶಿಶುವಿನ ದೈಹಿಕ-ಮಾನಸಿಕ ಮತ್ತು ನೈತಿಕ ಬೆಳವಣಿಗೆಗಳಿಗೆ ಯೋಗ್ಯವಾದ ವಾತಾವರಣವನ್ನು ತಾಯಿಗೆ ಕಲ್ಪಿಸಿಕೊಟ್ಟರೆ ಗರ್ಭದಲ್ಲಿರುವ ಶಿಶುವಿಗೂ ಇದರ ಫಲವು ಲಭಿಸುವುದು.

ಶಿಶುವಿನ ಜನನವಾದಂದಿನಿಂದ ಅದರ ಕರ್ಮೇಂದ್ರಿಯಗಳು ಮತ್ತು ಜ್ಞಾನೇಂದ್ರಿಯಗಳು ಈ ಪ್ರಪಂಚದ ವಾತಾವರಣಕ್ಕೆ ಹೊಂದಿಕೊಂಡು ಹೋಗಲು ಯತ್ನಿಸುವುವು. ಈ ಕಾರಣದಿಂದಲೇ ಮಗುವು ಅಂಗಚೇಷ್ಟೆಗಳನ್ನು ಮಾಡುವುದು, ಅಳುವುದು, ಸೀನುವುದು, ಮೈ ನಡುಗಿಸುವುದು, ಶಬ್ದ ಮಾತ್ರಕ್ಕೆ ಬೆಚ್ಚಿಬೀಳುವುದು, ಮೊದಲಾದ ಚೇಷ್ಟೆಗಳನ್ನು ಮಾಡುತ್ತ ಕ್ರಮೇಣ ಪ್ರಪಂಚದ ಪರಿಸರಕ್ಕೆ ಹೊಂದಾಣಿಕೆ ಮಾಡಿಕೊಳ್ಳುವುದು.

ಕಾಲಕ್ರಮೇಣ ತಾಯಿಯ ಗುರುತು ಹಿಡಿಯುವುದು, ಮುಖ ನೋಡಿ ನಗುವುದು, ಶಬ್ದದಿಂದ ಮತ್ತು ಸ್ಪರ್ಶದಿಂದ, ಸ್ತನ್ಯಪಾನದಿಂದ ತನ್ನ ಹಿತ ಚಿಂತಕಳಾದ ತಾಯಿ ಹತ್ತಿರವಿರಬೇಕು ಎಂದು ತಿಳಿದು ತಾಯಿಯನ್ನು

ಬರ ಮಾಡಲು ಅಳುವುದಕ್ಕೆ ಪ್ರಾರಂಭಮಾಡಿ ಆಕೆಯು ಬಂದು ಎತ್ತಿಕೊಂಡ ಕೂಡಲೇ ಅಳುವುದನ್ನು ನಿಲ್ಲಿಸುವುದು.

ಹೀಗೆ ಈ ಪ್ರಪಂಚದ ವಾತಾವರಣಕ್ಕೆ ತನ್ನ ಜೀವನವನ್ನು ಹೊಂದಾಣಿಕೆ ಮಾಡಿಕೊಂಡು ಹೋಗುತ್ತ ಪ್ರತಿಕ್ಷಣದಲ್ಲಿಯೂ ಹೊಸಹೊಸ ವಿಷಯಗಳನ್ನು ಕಲಿಯುತ್ತಾ ಬೆಳೆಯುವ ಪ್ರಯತ್ನವೇ ಶಿಶು ವಿದ್ಯಾಭ್ಯಾಸವೆನಿಸುವುದು. ಮಕ್ಕಳ ಶೀಲರಚನೆಯೇ ಶಿಶು ವಿದ್ಯಾಭ್ಯಾಸದ ಮುಖ್ಯ ಧ್ಯೇಯವಾಗಿರುವುದರಿಂದ ತಾಯಿಯಾದವಳು ಸರ್ವಪ್ರಯತ್ನದಿಂದ ಕರ್ತವ್ಯನಿಷ್ಠತೆಯಿಂದ ಮಗುವಿನ ಪ್ರಥಮ ಶ್ರೇಷ್ಠ ವಿದ್ಯಾಗುರುವೆನಿಸುವಳು.

ಮಕ್ಕಳನ್ನು ಅಸಡ್ಡೆಯಾಗಿ ಬೆಳೆಸುವುದು ಎಷ್ಟು ಹಾನಿಕಾರಕವೋ ಮಿತಿಮೀರಿದ ಪ್ರೀತಿಯಿಂದ ಮುದ್ದುಮಾಡುವುದು ಕೂಡ ಅಷ್ಟೇ ಹಾನಿಕರ.

ಮಗುವಿಗೆ ಮೂರು ವರ್ಷಗಳು ತುಂಬಿದ ಕೂಡಲೇ ಉತ್ತಮವಾದ ಶಿಶುವಿಹಾರಕ್ಕೆ ಕಳುಹಿಸಿಕೊಟ್ಟರೆ ಅವರ ಮಾನಸಿಕ, ದೈಹಿಕ ಮತ್ತು ನೈತಿಕ ಶಕ್ತಿಗಳು ಅಭಿವೃದ್ಧಿ ಹೊಂದುತ್ತವೆ.

ಮಗುವಿನ ಮೊದಲನೆಯ ಆರು ವರ್ಷಗಳ ಪ್ರಾಯದಲ್ಲಿ ಮನಸ್ಸು ಬಹಳ ಕೋಮಲವಾಗಿರುತ್ತದೆ. ಮತ್ತು ವಿಷಯ ಗ್ರಹಣ ಶಕ್ತಿಯು ಬಹಳ ಚುರುಕಾಗಿರುತ್ತದೆ. ಗುಣಾವಗುಣಗಳನ್ನು ಬೇಗನೇ ಗ್ರಹಿಸುತ್ತಾರೆ. ಶಿಶುವಿಹಾರದಲ್ಲಿ ಮಕ್ಕಳು ಸಮಾನ ವಯಸ್ಕರಾದ ಮಕ್ಕಳೊಂದಿಗೆ ಬೆರೆತು ಆಡುವುದರಿಂದ ತಮ್ಮ ಆರೋಗ್ಯವನ್ನು ಉತ್ತಮಪಡಿಸಿಕೊಳ್ಳುವುದಲ್ಲದೆ ಮಾನಸಿಕವಾಗಿ ಪ್ರವರ್ಧಮಾನಕ್ಕೆ ಬರುತ್ತಾರೆ.

ಉತ್ತಮ ಶಿಶುವಿಹಾರಕ್ಕೆ ಸೇರಿದ ಎಂತಹ ಮುಖಹೇಡಿ ಮಗುವಾದರೂ ಕೆಲವು ದಿನಗಳಲ್ಲಿಯೇ ಇತರ ಮಕ್ಕಳನ್ನು ಅನುಕರಣೆಮಾಡಿ ತನ್ನ ಮುಖಹೇಡಿತನವನ್ನು ಬಿಟ್ಟು ಧೈರ್ಯಸಾಹಸಗಳಿಂದ ವರ್ತಿಸಲಾರಂಭಿಸುತ್ತದೆ. ಉತ್ತಮವಾದ ಶೀಲರಚನೆಗೆ ಅಗತ್ಯವಾದ ಅನೇಕ ಸುಗುಣಗಳನ್ನು ಸಮಾನ ವಯಸ್ಕರಾದ ಸಹಪಾಠಿಗಳಿಂದ ಅನುಕರಣ ರೂಪದಲ್ಲಿ ಕಲಿಯುತ್ತಾರೆ. ಇಲ್ಲಿ ಸಂಘ ಜೀವನದ ಶಕ್ತಿ, ಸತ್ಯ, ಧರ್ಮ, ಅಹಿಂಸೆ, ಪರಸ್ಪರ

ಸಹಕರಿಸಿಕೊಂಡು ಹೋಗುವುದು ಮೊದಲಾದ ಸುಗುಣಗಳು ಅಭಿವೃದ್ಧಿ ಹೊಂದುತ್ತಾ, ಕೊನೆಗೆ ಅವುಗಳೇ ಸ್ವಾಭಾವಿಕ ಶೀಲವಾಗುವ ಸಾಧ್ಯತೆ ಇರುತ್ತದೆ. ನೀತಿ ಕಥೆಗಳಿಂದ, ಆಟ-ಪಾಠಗಳಿಂದ, ನೃತ್ಯಗೀತ ಅಭಿನಯ ಗಳಿಂದ ಮಕ್ಕಳ ಯೋಚನಾಶಕ್ತಿ, ಬುದ್ಧಿಕುಶಲತೆ ವಿಕಸನಗೊಳ್ಳುತ್ತವೆ.

ಮಕ್ಕಳಲ್ಲಿ ನೈಜವಾಗಿಯೂ...ಮತ್ತು ಗೋಪ್ಯವಾಗಿಯೂ ಅಡಗಿರುವ ಚೈತನ್ಯವನ್ನು ಹೊರಹೊಮ್ಮುವಂತೆ ಮಾಡಿ ಅದನ್ನು ಪ್ರಾಯೋಗಿಕ ಕುಶಲತೆಗಳ ಸಹಾಯದಿಂದ ತಿದ್ದಿ ರೂಪುಗೊಳಿಸಿ ಅಭಿವೃದ್ಧಿಪಡಿಸಲು ಶಿಶುವಿಹಾರಗಳು, ಅಲ್ಲಿಯ ಶಿಶು ವಿದ್ಯಾಭ್ಯಾಸ ಮಾತೃಪ್ರಾಯವಾಗಿರುತ್ತದೆ.

ಶಿಕ್ಷಣ ಶಿಕ್ಷೆಯಾಗಬಾರದು

—ಯಶೋದಾ ಜೆನ್ನಿ

"ಶಿಕ್ಷಣ – ಶಿಕ್ಷೆ ಸ್ವಲ್ಪ ಮಾತ್ರ ಅಂತರ. ಆದರೆ ಒಂದು ಇನ್ನೊಂದಾದಾಗ ಪರಿಣಾಮ ಮಾತ್ರ ಭೀಕರ. ದೈಹಿಕ ಶಿಕ್ಷೆಗೆ ಶಿಕ್ಷಣದಲ್ಲಿ ಸ್ಥಾನವಿರಲೇಬಾರದು. ಅಂತೆಯೇ ಮನಸ್ಸು ಮುದುಡುವಂತೆ ಮಾಡುವ ಶಿಕ್ಷೆಯೂ ಶಿಕ್ಷಣ ಸಾಧನೆಗೆ ಸಂಪೂರ್ಣ ವಿರುದ್ಧವೇ ತಾನೆ? — ಸಂಬಂಧಿಸಿದವರೆಲ್ಲ ಚಿಂತಿಸಿ ಕಾರ್ಯಪ್ರವೃತ್ತರಾದರೆ ಶಿಕ್ಷಣವೇ ಶ್ರೀ ರಕ್ಷೆಯಾಗಬಹುದು ಬಾಳಿಗೆ."

—ಸಂ.

ಮನೆಯಲ್ಲಿ ಅಕ್ಕರೆಯ ವಾತಾವರಣದಲ್ಲಿ ಸ್ವತಂತ್ರವಾಗಿ ಸಂತಸದಿಂದ ಕಾಲ ಕಳೆದ ಮಗು ಮೊದಲ ಬಾರಿ ಶಾಲೆಯನ್ನು ಪ್ರವೇಶಿಸುವಾಗ ಕುತೂಹಲ, ಗಾಬರಿಯಿಂದಲೇ ಕಾಲಿರಿಸುತ್ತದೆ. ಏಕೆಂದರೆ ಶಾಲೆಯ ವಾತಾವರಣ ಮನೆಗಿಂತ ಭಿನ್ನವಾಗಿ ಕಾಣಿಸುವುದರಿಂದ ಅಲ್ಲಿಯ ಹೊಸ ಪರಿಸರಕ್ಕೆ ಹೊಂದಿಕೊಳ್ಳುವವರೆಗೆ ಎಳೆಯ ಮಿದುಳಲ್ಲಿ ಸಹಜವಾಗಿಯೇ ಭೀತಿ ಆವರಿಸಿಕೊಂಡಿರುತ್ತದೆ. ಆದರೆ ಅಲ್ಲಿ ಶಿಕ್ಷಕ(ಕಿ) ಆಗಿರುವವರು ಮಕ್ಕಳ ಮನಸ್ಸನ್ನರಿತು ಅವರನ್ನು ಪ್ರೀತಿ, ವಿಶ್ವಾಸದಿಂದ ಒಲಿಸಿಕೊಳ್ಳುವವರಾದರೆ ಕೆಲವೇ ದಿನಗಳಲ್ಲಿ ಮಗು ಅಲ್ಲಿಯ ವಾತಾವರಣಕ್ಕೆ ಸುಲಭವಾಗಿ ಹೊಂದಿಕೊಳ್ಳಬಹುದು. ಅನೇಕ ಕಡೆ ಇದಕ್ಕೆ ವಿರುದ್ಧವಾಗಿ ಸಂಬಳಕ್ಕಾಗಿ ದುಡಿಮೆ ಎಂದುಕೊಳ್ಳುವ ಶಿಕ್ಷಕರಿಂದ ಮಕ್ಕಳಿಗೆ ಶಾಲೆಯ ಬಗ್ಗೆ ಆರಂಭದಲ್ಲೇ ಬೇಸರ, ಜಿಗುಪ್ಸೆಗಳು ಮೂಡಿ ಬರುವುದಿದೆ. ಮುಂದೆ ಅಂತಹ ಮಕ್ಕಳು ಶಾಲೆಗೆ ಹೋಗುವುದೇ ದೊಡ್ಡ ಶಿಕ್ಷೆ ಎಂದು ತಿಳಿದು ಅದನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾ ರಕ್ಷಕರಿಗೆ ಸಮಸ್ಯೆಗಳಾಗಿ ಗೋಚರಿಸತೊಡಗುತ್ತಾರೆ. ಅಂತಹ ಮಕ್ಕಳನ್ನು ಮನೆಯಲ್ಲಿ ಹೆದರಿಸಿ ಒತ್ತಾಯದಿಂದ ಶಾಲೆಗೆ ಕಳುಹಿಸಿದರೆ ಅಲ್ಲಿ ಅವರು ಶಾಂತಚಿತ್ತದಿಂದ ಕುಳಿತಿರಲಾರದೆ ಕಳವಳ

ದಿಂದ ಕಂಗಾಲಾಗುತ್ತಾರೆ, ಅಲ್ಲದೆ ಶಾಲೆಯ ಬಗ್ಗೆ ಬೇಸರ ಹೊಂದಿದ ಮಗುವಿನ ಮನಸ್ಸು ನಿರುತ್ಸಾಹದಿಂದ ಮುಂದಿ ಶಿಕ್ಷಣದಲ್ಲಿ ಆಸಕ್ತಿಯನ್ನೇ ಕಳೆದುಕೊಳ್ಳುತ್ತದೆ. ಆದುದರಿಂದ ಪ್ರಾಥಮಿಕ ಶಾಲೆಯ ಶಿಕ್ಷಕ, ಶಿಕ್ಷಕಿಯರು ಮಕ್ಕಳ ಮನಸ್ಸನ್ನರಿತು ಉತ್ತಮ ಶಿಕ್ಷಣದೊಂದಿಗೆ ಯೋಗ್ಯ ವಾತಾವರಣವನ್ನು ನಿರ್ಮಿಸಿಕೊಂಡು ವೃತ್ತಿಯ ಪಾವಿತ್ರ್ಯವನ್ನುಳಿಸಿಕೊಂಡು ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಡರೆ ಮಾತ್ರ ಎಳೆಯ ಮಕ್ಕಳಿಗೆ ಶಾಲೆ ಮತ್ತು ಶಿಕ್ಷಣದ ಬಗ್ಗೆ ಆಸಕ್ತಿ, ಅಭಿರುಚಿ ಹೆಚ್ಚಬಹುದು.

ಈಗ ಹೇಗಿದೆ? ಸಾಮಾನ್ಯವಾಗಿ ಈಗ ಎಲ್ಲೆಂದರಲ್ಲಿ ಬಾಲವಾಡಿ ತರಗತಿಗಳು ಹುಟ್ಟಿಕೊಂಡಿವೆ. ಅವುಗಳ ಪ್ರಯೋಜನ ಎಷ್ಟೇ ಇರಲಿ. ಒಮ್ಮೆಗೆ ಮಕ್ಕಳು ಮನೆಯಲ್ಲಿ ತಂಟೆ ಮಾಡಿಕೊಂಡು ತೊಂದರೆ ಕೊಡುವುದನ್ನು ಕಡಿಮೆ ಮಾಡಲಿ ಎಂಬ ಕಾರಣದಿಂದ ಹೆಚ್ಚಿನ ಹೆತ್ತವರು ಮಕ್ಕಳಿಗೆ ಮೂರು ವರ್ಷ ತುಂಬುವಷ್ಟರಲ್ಲೇ (ಕೆಲವರು ಅದಕ್ಕೂ ಮೊದಲು) ಬಾಲವಾಡಿ ತರಗತಿಗೆ ತಳ್ಳಿ ನಿಶ್ಚಿಂತರಾಗುತ್ತಾರೆ. ಹೀಗೆ ಬರುವ ಮುಗ್ಧ ಮಕ್ಕಳನ್ನು ಅಲ್ಲಿಯ ಶಿಕ್ಷಕಿ ಪ್ರೀತಿಯಿಂದ ಸ್ವಾಗತಿಸಿ, ಎಚ್ಚರಿಕೆಯಿಂದ ನೋಡಿಕೊಂಡರೆ ಮಾತ್ರ ಮಕ್ಕಳ ಕೋಮಲ ಮನಸ್ಸು ಉಲ್ಲಾಸದಿಂದ ಅರಳಬಲ್ಲುದು. ಆದರೆ ಇಂತಹ ವರ್ತನೆಯನ್ನು ನಾವು ಎಲ್ಲ ಶಿಕ್ಷಕರಿಂದಲೂ ನಿರೀಕ್ಷಿಸಿದರೆ ಮೂರ್ಖತನವಾದೀತು. ಬದಲಾಗಿ ಸದಾಕಾಲ ಕೈಯಲ್ಲೊಂದು ಬೆತ್ತ ಹಿಡಿದುಕೊಂಡು ಮಕ್ಕಳನ್ನು ಬೆದರಿಸಿ ಹಿಂಸಿಸಿ ಮೌನವಾಗಿ ಗೊಂಬೆಗಳಂತೆ ಕುಳ್ಳಿರಿಸಿ ಕರ್ತವ್ಯವನ್ನು ಪೂರೈಸುವ ಶಿಕ್ಷಕಿಯರಿಂದ ಕಿರಿಯರ ಮನಸ್ಸು ಬೆಂದು ಮುದುಡುತ್ತದೆ. ಮುಂದೆ ಅವರನ್ನು ಶಾಲೆಗೆ ಕಳುಹಿಸುವುದೇ ರಕ್ಷಕರಿಗೆ ದೊಡ್ಡ ಸಾಹಸದ ಕಾರ್ಯವಾಗುತ್ತದೆ. ಚಿಕ್ಕಮಕ್ಕಳನ್ನು ಶಾಲೆಯಲ್ಲಿ ಮೌನವಾಗಿ ಕೈ ಕಟ್ಟಿ ಕುಳ್ಳಿರಿಸುವುದೊಂದೇ ತಾವು ಮಾಡಬೇಕಾದ ಘನ ಕಾರ್ಯ ಎಂದು ತಿಳಿದುಕೊಂಡಿರುವ ಅನೇಕ ಶಿಕ್ಷಕಿಯರು ಇದ್ದಾರೆ. ಮಕ್ಕಳು ಮಾತನಾಡಿದರೆ, ಎದ್ದರೆ, ಚಲಿಸಿದರೆ ಶಿಸ್ತು ಭಂಗವಾಯಿತೆಂದು ಹೊಡೆದು ಹಿಂಸಿಸುವವರೂ ಇರುತ್ತಾರೆ. ಇದರಿಂದಾಗಿ

ಮಕ್ಕಳ ದೈಹಿಕ, ಮಾನಸಿಕ ಬೆಳವಣಿಗೆ ಕುಂಠಿತವಾಗಿ ಶಾಲೆಯ ಬಗ್ಗೆ ಜುಗುಪ್ಸೆ ಬೆಳೆಯುತ್ತದೆ.

ಶಾಲೆಯಲ್ಲಿ ಮಕ್ಕಳ ಅಭಿರುಚಿ, ಆಸಕ್ತಿ, ಚಟುವಟಿಕೆಗಳಿಗನು ಸಾರವಾಗಿ ಹಾಡು, ಕಥೆ, ಆಟ, ಅಭಿನಯ ಚಿತ್ರ ಇತ್ಯಾದಿ ಮನರಂಜನೆ ಗಳು ಸಾಕಷ್ಟು ಇದ್ದರೆ ಮಕ್ಕಳು ಸಂತಸದಿಂದ ಭಾಗವಹಿಸುತ್ತಾರೆ. ಇಂತಹ ವಿಷಯಗಳಿಂದ ಅವರ ಬೌದ್ಧಿಕ, ದೈಹಿಕ ಬೆಳವಣಿಗೆಗಳೂ ಚೆನ್ನಾಗಿ ಆಗುತ್ತವೆ. ಆದುದರಿಂದ ಮೂರರಿಂದ ಆರು ವರ್ಷಗಳವರೆಗಿನ ಮಕ್ಕಳನ್ನು ಮುಖ್ಯವಾಗಿ ಹಾಡು, ಕಥೆ, ಆಟಗಳ ಮೂಲಕವೇ ಸಂತೋಷ ಗೊಳಿಸಬೇಕು. ಓದಲು, ಬರೆಯಲು ಅವರನ್ನು ಅತಿಯಾದ ಒತ್ತಡಕ್ಕೊಳ ಪಡಿಸಬಾರದು. ಅವರು ಶಾಲೆಯ ವಾತಾವರಣವನ್ನು ಮೆಚ್ಚಿಕೊಂಡು, ಹೊಂದಿಕೊಂಡ ನಂತರ ಕ್ರಮೇಣ ಓದು, ಬರೆಹದತ್ತ ಗಮನ ಸೆಳೆಯ ಬಹುದು. ಆದರೆ ಶಿಕ್ಷಣವೆನ್ನುವುದು ಯಾಂತ್ರಿಕವಾಗಿ ಶಿಕ್ಷೆಯಾಗದಂತೆ ಜಾಗ್ರತೆ ವಹಿಸಬೇಕು,

ಚಿಕ್ಕ ಮಕ್ಕಳು ಅರಿತೋ ಅರಿಯದೆಯೋ ಸಣ್ಣ ಪುಟ್ಟ ತಪ್ಪು ಗಳನ್ನು ಮಾಡುತ್ತಾರೆ. ಅಂತಹ ಸಂದರ್ಭಗಳಲ್ಲಿ ಶಿಕ್ಷಕರು ತುಂಬ ತಾಳ್ಮೆ ಯಿಂದ, ಎಚ್ಚರಿಕೆಯಿಂದ ವರ್ತಿಸಬೇಕೇ ಹೊರತು ಮಕ್ಕಳನ್ನು ಹೊಡೆದು, ಹಿಂಸಿಸಿ ಬುದ್ಧಿಕಲಿಸುವ ಭ್ರಮೆಗೆ ಬಲಿಯಾಗಬಾರದು. ಇಲ್ಲವಾದರೆ ಕಿರಿ ಯರು ಮಾಡುವ ಸಣ್ಣ ತಪ್ಪಿಗೆ ಶಿಕ್ಷೆ ನೀಡುವ ಭರದಲ್ಲಿ ಹಿರಿಯರು ದೊಡ್ಡ ಅಪರಾಧವನ್ನು ಮಾಡಿದಂತಾಗುತ್ತದೆ.

ಉದಾಹರಣೆಗೆ ಒಂದು ಮಗು ಶಾಲೆಗೆ ತಡವಾಗಿ ಬಂದಾಗ ಸಿಟ್ಟಿ ನಿಂದ ಹೊಡೆದು ಹೊರಗೆ ನಿಲ್ಲಿಸಿ ಅಪಮಾನಿಸುವುದು, ಅಥವಾ ಅಪಹಾಸ್ಯ ಮಾಡಿ ಎಲ್ಲ ಮಕ್ಕಳು ನಗುವಂತೆ ಮಾಡುವುದು, ಎಳೆಯರ ಮಿದುಳನ್ನು ಘಾಸಿಗೊಳಿಸಬಲ್ಲುದು. ಅದಕ್ಕಿಂತ ಮಗುವನ್ನು ಹತ್ತಿರ ಕರೆದು ಪ್ರೀತಿ ಯಿಂದ ಮಾತನಾಡಿಸಿ ತಡವಾಗಿ ಬಂದ ಕಾರಣವನ್ನು ಕೇಳಿ ಮುಂದೆ ಹಾಗಾಗದಂತೆ ಪ್ರಯತ್ನಿಸುವುದು ಹೆಚ್ಚು ಪರಿಣಾಮಕಾರಿಯಾಗಬಲ್ಲುದು.

ಎಷ್ಟೋ ಸಂದರ್ಭಗಳಲ್ಲಿ ಬಡಕುಟುಂಬದ ಮಕ್ಕಳು ಶಾಲೆಗೆ ತಡವಾಗಿ ಬರಲು ನಿಜವಾದ ಕಾರಣಗಳಿರುತ್ತವೆ. ಮನೆಗೆಲಸ, ಮಗುವನ್ನು ನೋಡಿ ಕೊಳ್ಳುವುದು ಇತ್ಯಾದಿ. ಅನಿವಾರ್ಯ ಕಾರಣಗಳಿಂದ ತಡವಾಗಿ ಬರುವ ಮಕ್ಕಳನ್ನು ಶಿಕ್ಷಿಸಿದರೆ ಅವರು ಅಸಹಾಯಕರಾಗಿ ಅಳುತ್ತ ನಿಲ್ಲುವುದಲ್ಲದೆ ಇನ್ನೇನು ಮಾಡಬಲ್ಲರು? ಇದರಿಂದ ಶಿಕ್ಷಕರೇ ತಪ್ಪಿತಸ್ಥರಾಗಲಾರರೇ? ಅದೇ ರೀತಿ ಕಲಿಯುವಿಕೆಯಲ್ಲಿ ಹಿಂದುಳಿದ ಹುಡುಗನನ್ನು 'ದಡ್ಡ' 'ಹೆಡ್ಡ' ಎಂದು ಬಯ್ದು ಹಿಂಸಿಸಿ ಎಲ್ಲರಿದಿರು ಅವಮಾನಿಸಿದರೆ ಅವನು ಇನ್ನಷ್ಟು ನಿರುತ್ಸಾಹಿಯಾಗಿ ಕೀಳರಿಮೆಯಿಂದ ಕುಗ್ಗಿ ಅಪ್ರಯೋಜಕನಾದಾನೇ ಹೊರತು ಪ್ರಗತಿಯನ್ನು ಹೊಂದಲಾರ. ಏಕೆಂದರೆ ಮಕ್ಕಳನ್ನು ಶಿಕ್ಷಿಸಿ ತಿದ್ದುವ ಯತ್ನ ಹೆಚ್ಚಿನ ಸಂದರ್ಭಗಳಲ್ಲಿ ವ್ಯರ್ಥವಾಗುತ್ತದೆಯೇ ಹೊರತು ಫಲಕಾರಿ ಯಾಗುವುದಿಲ್ಲ.

ಶಾಲೆಗಳಲ್ಲಿ ಶಿಕ್ಷಣದ ಹೆಸರಲ್ಲಿ ನಡೆಯುವ ಶಿಕ್ಷೆ, ಹಿಂಸೆ ಕಡಿಮೆ ಯಾಗಬೇಕು. ಎಳೆಯರ ಸಮಸ್ಯೆಗಳನ್ನರಿತು, ಅವರ ಮನಸ್ಸನ್ನರಿತು ಪ್ರೀತಿ ಯಿಂದ ತಿದ್ದುವ, ಶಿಕ್ಷಣ ಕೊಡುವ ಪ್ರಯತ್ನ ಪ್ರಾಮಾಣಿಕವಾಗಿ ನಡೆಯ ಬೇಕು. ಎಲ್ಲಾ ಮಕ್ಕಳ ಬೌದ್ಧಿಕ ಮಟ್ಟ ಮಾನಸಿಕ ಸ್ಥಿತಿ ಒಂದೇ ರೀತಿ ಯಾಗಿರುವುದಿಲ್ಲ ಎನ್ನುವುದನ್ನು ಶಿಕ್ಷಕರೂ ರಕ್ಷಕರೂ ಅರಿತಿರಬೇಕು. ಆದು ದರಿಂದ ತರಗತಿಯ ಎಲ್ಲರೂ ಸಮಾನ ಸ್ಥಾನ ಪಡೆಯಲು ಸಾಧ್ಯವಿಲ್ಲ ಎನ್ನು ವುದು ತಿಳಿಯುತ್ತದೆ. ಮಕ್ಕಳ ಮಾನಸಿಕ ಮತ್ತು ದೈಹಿಕ ಸಾಮರ್ಥ್ಯ ಒಂದೇ ತೆರನಾಗಿರುವುದಿಲ್ಲ ಎನ್ನುವುದು ಮಾತ್ರ ಮಕ್ಕಳ ಅಸಮಾನತೆಗೆ ಕಾರಣ ವಲ್ಲ. ಅದರೊಂದಿಗೇ ಮಕ್ಕಳ ಮನೆಯ ವಾತಾವರಣವೂ ಅವರ ಶಿಕ್ಷಣ ದಲ್ಲಿ ಪ್ರಭಾವವನ್ನು ಬೀರುತ್ತದೆ. ಅವಿದ್ಯಾವಂತ ಬಡ ಕುಟುಂಬದ ಮಕ್ಕಳಿಗೆ ಮನೆಯಲ್ಲಿ ಶಿಕ್ಷಣಕ್ಕೆ ತಕ್ಕ ಪ್ರೋತ್ಸಾಹವಾಗಲೀ, ಮಾರ್ಗದರ್ಶನವಾಗಲೀ ದೊರೆಯುವುದಿಲ್ಲ. ಆದುದರಿಂದ ಶಿಕ್ಷಕರಾದವರು ಮಕ್ಕಳ ನ್ಯೂನತೆಗೆ ಕಾರಣವನ್ನರಿಯದೆಯೇ ದೂಷಿಸುವುದು, ಟೀಕಿಸುವುದು ಸಮಂಜಸವಲ್ಲ. ಇದರಿಂದ ಹಿಂದುಳಿದ ಮಕ್ಕಳು ಇನ್ನಷ್ಟು ನಿರಾಶರಾಗಿ ಶಿಕ್ಷಣದ ಬಗ್ಗೆ ತಾತ್ಸಾರ ಭಾವ ತೋರಬಹುದು.

ನಾವಿಂದು ಅನೇಕ ಶಾಲೆಗಳಲ್ಲಿ ಅತ್ಯಂತ ಶೋಚನೀಯ ಪರಿಸ್ಥಿತಿಯನ್ನು ಕಾಣುತ್ತಿದ್ದೇವೆ. ಶಿಕ್ಷಕ (ಕಿ) ರಾದವರೇ ಮಕ್ಕಳಲ್ಲಿ ಭೇದಭಾವ ತೋರಿಸುವುದು, ಎಳೆಯರ ಮನಸ್ಸು ಮುದುಡುವ ರೀತಿಯಲ್ಲಿ ಅವಹೇಳನ ಮಾಡುವುದು ಬಲು ಸಾಮಾನ್ಯ ಸಂಗತಿಯೆನಿಸಿದೆ. ಕೆಲವು ಶಿಕ್ಷಕರು ಶ್ರೀಮಂತರ ಮನೆಯ ಮಕ್ಕಳನ್ನು ತರಗತಿಯಲ್ಲಿ ಹೊಗಳಿ ಮೇಲಕ್ಕೇರಿಸಿ ಬಡ ಮಕ್ಕಳನ್ನು ಕ್ಷುಲ್ಲಕ ಕಾರಣಗಳಿಗಾಗಿ ಅಪಮಾನಿಸಿ ಶೋಷಿಸುವ ಸಂದರ್ಭಗಳೂ ಇರುತ್ತವೆ. ಬಹುಶಃ ನಮ್ಮ ದೇಶದಲ್ಲಿ 'ಸಮಾನತೆ' ಎನ್ನುವ ಪದ ಬರಿಯ ಭಾಷಣಗಳಿಗಷ್ಟೇ ಸೀಮಿತವಾಗಿರುವ ಸಂಗತಿ ಎಳೆಯರ ಮಟ್ಟಿಗೂ ನಿಜವಾಗಿರುವುದು ನಮ್ಮೆಲ್ಲರ ದೌರ್ಭಾಗ್ಯವೆನ್ನಬೇಕು.

ಶಾಲೆಗಳಲ್ಲಿ ಸದ್ಯ ರೂಢಿಯಲ್ಲಿರುವ ಕೆಲವು ಶಿಕ್ಷೆಗಳ ಬಗ್ಗೆ ತುಸು ವಿಮರ್ಶಿಸೋಣ. ಒಂದು ತರಗತಿಯಲ್ಲಿ ಮೊದಲ ದಿನ ಶಾಲೆಗೆ ಬರದ ಎಲ್ಲ ಮಕ್ಕಳೂ ತರಗತಿಯ ಹೊರಗೆ ಸಾಲಾಗಿ ನಿಂತಿರಬೇಕಂತೆ. ಇದು ಎಷ್ಟೊಂದು ಅಸಹನೀಯ ಎಂದರೆ ಕೆಲವು ಬಾರಿ ಆ ತರಗತಿಯ ಶಿಕ್ಷಕಿ ಶಾಲೆ ಆರಂಭವಾಗಿ ಅರ್ಧ ಗಂಟೆ ತಡವಾಗಿ ಬಂದರೂ ಮಕ್ಕಳು ಅವರ ಪ್ರತೀಕ್ಷೆಯಲ್ಲೇ ನಿಂತು ಕಾಲ ಕಳೆಯುತ್ತಿದ್ದರು. ಆದರೆ ಶಿಕ್ಷಕರಿಗೆ ಯಾವ ಶಿಸ್ತು, ನಿಯಮಗಳೂ ಅನ್ವಯಿಸುವುದಿಲ್ಲ. ಅಂತಹ ಸಂದರ್ಭಗಳಲ್ಲಿ ಎಳೆಯರ ಮಿದುಳು ಚಿಂತಿಸದಿರುತ್ತದೆಯೇ? ನಾವು ತಡಮಾಡಿ ಬಂದಾಗ ಹೆದರಿಸಿ ಶಿಕ್ಷಿಸುವ ಶಿಕ್ಷಕರು ತಾವೇ ತಡವಾಗಿ ಬರುವುದು ತಪ್ಪಲ್ಲವೇ ಎನ್ನುವುದನ್ನು ಕಿರಿಯರು ಖಂಡಿತ ಯೋಚಿಸುತ್ತಾರೆ. ಸಂದರ್ಭ ದೊರೆತಾಗ ತಮ್ಮ ಪುಟ್ಟ ಗೆಳೆಯರೊಡನೆಯೋ ಅಥವಾ ಹೆತ್ತವರೊಡನೆಯೋ ತಮ್ಮ ಸಂಶಯವನ್ನು ಆಡಿಯೂ ತೋರಿಸುತ್ತಾರೆ. ಈ ಶಿಕ್ಷೆಗಳು ಇಷ್ಟಕ್ಕೇ ಮುಕ್ತಾಯವಾಗುವುದಿಲ್ಲ. ಕಿವಿ ಹಿಡಿದುಕೊಂಡು ಕುಳಿತು ನಿಲ್ಲುವ (ಬಸ್ಕಿ) ಶಿಕ್ಷೆಯನ್ನು ಗಂಟೆಗಟ್ಟಲೆ ನೀಡುವ ಗುರುಗಳೂ ನಮ್ಮಲ್ಲಿದ್ದಾರೆ. ಹೀಗೆ ಅವಿರತವಾಗಿ ಶಿಕ್ಷೆ ಅನುಭವಿಸಿದ ಮಗು ತಲೆತಿರುಗಿ ಬಿದ್ದಿದಿದೆ. ಇನ್ನೊಮ್ಮೆ ಶಿಕ್ಷಕರು ಕೆನ್ನೆಗೆ ಹೊಡೆದ ರಭಸಕ್ಕೆ ಎಳೆಯ ಬಾಲಕನೊಬ್ಬ ಪ್ರಜ್ಞೆತಪ್ಪಿ

ನೆಲಕ್ಕುರುಳಿದ. ಹೀಗೆ ನಮ್ಮಲ್ಲಿ ಕೆಲವು ಶಿಕ್ಷಕರು ಮಾತಿನಲ್ಲಿ, ಕೃತಿಯಲ್ಲಿ ಮಕ್ಕಳನ್ನು ಹಿಂಸೆಗೀಡು ಮಾಡುವುದರಲ್ಲಿ ಬಹಳ ಮುಂದೆ ಇದ್ದಾರೆ ಎಂದ ಮೇಲೆ ಎಳೆಯ ಮಕ್ಕಳಿಗೆ ಶಾಲೆ ಎಂದರೆ ಭೀತಿ, ಜಿಗುಪ್ಸೆ, ತಾತ್ಸಾರ ಭಾವಗಳೇ ತುಂಬಿಕೊಂಡು ಶಿಕ್ಷಣದಲ್ಲಿ ಅನಾಸಕ್ತಿ ಬೆಳೆಯದಿರುತ್ತದೆಯೇ? ಇನ್ನು ಇಂದಿನ ಶಿಕ್ಷಣದ ಪಾಠಪಟ್ಟಿ, ಪಠ್ಯಪುಸ್ತಕ, ಬೋಧನಾಕ್ರಮ ಇತ್ಯಾದಿಗಳೆಲ್ಲ ಕಿರಿಯರ ಅಭಿರುಚಿ, ಆಸಕ್ತಿಗಳಿಗೆ ಅನುಗುಣವಾಗಿಲ್ಲ ದಿರುವುದು ದೊಡ್ಡ ಕೊರತೆಯಾಗಿದೆ. ಮಕ್ಕಳಲ್ಲಿ ಉತ್ಸಾಹ ಮೂಡಿಸು ವಂತಹ, ಆಸಕ್ತಿ ಹೆಚ್ಚಿಸುವಂತಹ ವಾತಾವರಣ ಮತ್ತು ಪಠ್ಯಕ್ರಮ ಗಳಿದ್ದರೆ ಕಿರಿಯರು ಸಹಜವಾಗಿಯೇ ಶಾಲೆಯ ಬಗ್ಗೆ ಆಕರ್ಷಿತರಾಗುತ್ತಾರೆ. ಹಾಗಾಗುವಂತೆ ಶಿಕ್ಷಕರೂ, ಶಿಕ್ಷಣತಜ್ಞರೂ, ರಕ್ಷಕರೂ, ಶಿಕ್ಷಣಾಧಿಕಾರಿ ಗಳೂ ಮನಃಪೂರ್ವಕವಾಗಿ ಶ್ರಮಿಸಬೇಕು. ಆಗ ಮಾತ್ರ ಶಿಕ್ಷಣದ ಸದು ದ್ದೇಶ ಸಫಲವಾದೀತು, ಸಾರ್ಥಕವೆನಿಸೀತು.

ಮಹಿಳೆ ಮತ್ತು ಕ್ರೀಡೆ

— ಮನೋರಮಾ ಎಂ. ಭಟ್

"ಕ್ರೀಡಾಸಕ್ತ ಮಹಿಳೆಯರ ಬಗ್ಗೆ ಕೇಳುತ್ತೇವೆ, ಓದುತ್ತೇವೆ, ಮರೆತು ಬಿಡುತ್ತೇವೆ. "ಅವರಿಗೇನು? ನಮ್ಮ ಹಾಗಲ್ಲ..." ಅನ್ನುತ್ತೇವೆ. ನಿಯಮಿತವಾದ ಆಸಕ್ತಿಗಳಿಂದ, ಯೋಗ, ಕ್ರೀಡೆ ಇತ್ಯಾದಿ ದೈಹಿಕ ಚಟುವಟಿಕೆಗಳಿಂದ ಆರೋಗ್ಯಭಾಗ್ಯ ನಮ್ಮದಾಗುತ್ತದೆ. ಹಿತಕರವಾದ ಅಭ್ಯಾಸಗಳಿಂದ ಸಾಮಾಜಿಕ ಸ್ವಾಸ್ಥ್ಯವೂ ಹೆಚ್ಚುತ್ತದೆ."

—ಸಂ.

ಬದುಕು ಬರಡಾಗದಂತೆ, ಜೀವನವು ಯಾಂತ್ರಿಕವಾಗದಂತೆ, ನಮ್ಮನ್ನು ನೋಡಿಕೊಳ್ಳುವುದು ನಮ್ಮ ಹವ್ಯಾಸಗಳು. ಆದರೆ ನಮ್ಮ ಜೀವನದ ಉದ್ದಕ್ಕೂ ನಮ್ಮ ಜೊತೆಗೆ ಉಳಿಯಲು ನಾವು ಎಂಥಾ ಹವ್ಯಾಸಗಳನ್ನು ನೆಚ್ಚಿಕೊಳ್ಳೋಣ? ಸಂಗೀತ ಕಲಿಯೋಣವೇ? ಚಿತ್ರಗಾರರಾಗೋಣವೇ? ಹೊಲಿಗೆ, ಕಸೂತಿ, ರಂಗೋಲಿ ಯಾವುದರಲ್ಲಾದರೂ ನಮಗೆ ಆಸಕ್ತಿ ಅಭಿ ರುಚಿಗಳು ಜನ್ಮತಃ ಬರಬೇಕು. ಹಾಗಿದ್ದರೆ ಮಾತ್ರ ಆ ಅಭಿರುಚಿ ಚಿರಕಾಲ ಉಳಿದೀತು. ಯಾರಿಗೂ ಯಾವುದನ್ನೂ ಒತ್ತಾಯದಿಂದ ಹೇರಲು ಸಾಧ್ಯ ವಾಗಲಾರದು. ತಾಯಿಗೆ ಇದ್ದ ಆಸಕ್ತಿಯು ಮಗಳಿಗೂ ಬರಬೇಕು ಎಂದರಾ ದೀತೇ? ನಮ್ಮ ಮಕ್ಕಳನ್ನು ಒತ್ತಾಯಿಸಿ ನಾವು ಸಂಗೀತವನ್ನು ಕಲಿಸ ಬಹುದು–ಭರತನಾಟ್ಯವನ್ನು ಕಲಿಸಲು ಪ್ರಯತ್ನಿಸಬಹುದು. ಆದರೆ ನಮ್ಮ ಪ್ರಯತ್ನವು ಸಫಲವಾಗಬೇಕಲ್ಲಾ? ಅದಕ್ಕೂ ಅಡೆತಡೆಗಳು ಬರಬಹುದು. ಉದಾಹರಣೆಗಾಗಿ ನಿಮ್ಮ ಮಗಳೊಬ್ಬಳು ಭರತನಾಟ್ಯ ಕಲಾವಿದೆಯಾದಳು ಎಂದಿಟ್ಟುಕೊಳ್ಳಿ. ಕಲಿತ ವಿದ್ಯೆಯನ್ನು ಆಕೆ, ಒಂದೋ ಇತರರಿಗೆ ಹೇಳಿ ಕೊಟ್ಟು ತನ್ನಲ್ಲಿದ್ದ ಕಲಾವಂತಿಕೆಯನ್ನು ಜೀವಂತವಾಗಿ ಇಟ್ಟುಕೊಳ್ಳಬೇಕು. ಇಲ್ಲವಾದರೆ ಆಕೆ ಸಾಕಷ್ಟು ಪ್ರದರ್ಶನಗಳನ್ನು ಕೊಡಬೇಕು. ಭರತನಾಟ್ಯ ಕಲಾವಿದೆಗೆ, ಮುಂದಿನ ಆಕೆಯ ವೈವಾಹಿಕ ಜೀವನದಲ್ಲಿ ಭರತನಾಟ್ಯಕ್ಕೆ

ಪ್ರೋತ್ಸಾಹ ಸಿಗುತ್ತದೆ ಎನ್ನುವ ನಂಬಿಕೆ ಇದೆಯೋ? ಎಷ್ಟೋ ಹೆಣ್ಣು ಮಕ್ಕಳು ತಮ್ಮ ಕಲಿಯುವಿಕೆ ಒಂದು ಹಂತಕ್ಕೆ ಬಂದು ಮುಟ್ಟಿದ ಮೇಲೆ ಅದನ್ನು ನಿಲ್ಲಿಸಿದ್ದುಂಟು!

ಶಾಸ್ತ್ರೀಯ ಸಂಗೀತವನ್ನು ಕಲಿತ ನನ್ನ ಹತ್ತಿರದ ಬಂಧು ವೆಂಕಟೇಶ್ವರಿಗೆ, ಸಂಗೀತವೆಂದರೆ ಏನೆಂದು ತಿಳಿಯದ, ಹಾಡುವಿಕೆಯನ್ನು ಕೇಳಲು ಕೂಡಾ ಮನವಿಲ್ಲದ ಹುಡುಗನೊಬ್ಬನು ಪತಿಯಾಗಿ ಸಿಕ್ಕಿದ್ದ! ಪಾಪ, ಈಗ ಇಲ್ಲವಾದ ಆಕೆ, ತನ್ನ ಕೊನೆಯ ಉಸಿರಿನ ತನಕವೂ "ಹಾಡಬೇಕು. ಮನ ತಣಿಯುವ ತನಕ ಹಾಡಬೇಕು" ಎಂದೇ ಕೊರಗುತ್ತ ಸತ್ತಿದ್ದಳು! ನಮ್ಮ ಜೀವನದ ಆಗು ಹೋಗುಗಳು ಬಹಳ ವಿಚಿತ್ರ ವಾದದ್ದು! ಹುಡುಗಿಯರಲ್ಲಿದ್ದ ಪ್ರತಿಭೆಯನ್ನು ಹೆತ್ತವರು ಗುರುತಿಸಿ, ಪ್ರೋತ್ಸಾಹಿಸಿದರೆ ಸಾಕೇ? ಆಕೆಯನ್ನು ವಿವಾಹವಾಗಿ, ಆಕೆಯ ಜೀವನ ಸಂಗಾತಿಯಾಗುವವನ ಹೊಣೆಗಾರಿಕೆ ಇಂಥಾ ಸಂದರ್ಭಗಳಲ್ಲಿ ಬಹಳ ದೊಡ್ಡದು ಅಲ್ಲವೇ?

1954ರಲ್ಲಿ ಮಂಗಳೂರಲ್ಲಿ ಹುಟ್ಟಿ ಇಲ್ಲಿನ ಶಾಲಾಕಾಲೇಜುಗಳಲ್ಲಿ ವಿದ್ಯಾಭ್ಯಾಸವನ್ನು ಪಡೆದ, 1965ರಿಂದ ಸುಮಾರು 15 ವರ್ಷಗಳಷ್ಟು ಕಾಲ ಕರ್ನಾಟಕ ರಾಜ್ಯದ ಅತ್ಲೆಟ್ ಕ್ಷೇತ್ರದಲ್ಲಿ ಅರಳಿದ ಶ್ರೀಮತಿ ಸುಮನಾ ಶ್ರೀಕಾಂತ್ ಬಗ್ಗೆ ಬರೆಯಲು ನನಗೆ ತುಂಬಾ ಸಂತೋಷವೆನಿಸುತ್ತದೆ. ಶ್ರೀಮತಿ ಸುಮನಾ ಶ್ರೀಕಾಂತ್ ಮಾಜಿ ಹೈಜಂಪ್ ಚಾಂಪಿಯನ್! ತನ್ನ ಹತ್ತನೆಯ ವರ್ಷದಿಂದಲೇ ಎತ್ತರ ಜಿಗಿತದಲ್ಲಿ ಅಭ್ಯಾಸ ಆರಂಭಿಸಿದ ಸುಮನಾ 1969ರಲ್ಲಿ ರಾಜ್ಯ ಅತ್ಲೆಟ್ ಕೂಟದಲ್ಲಿ ನಡೆದ ಹೈಜಂಪ್ ಸ್ಪರ್ಧೆಯಲ್ಲಿ 1.43 ಮೀಟರ್‌ಗಳಷ್ಟು ಎತ್ತರ ಜಿಗಿದು, ಹೊಸ ದಾಖಲೆಯನ್ನು ಸ್ಥಾಪಿಸಿದ ಕೀರ್ತಿ ಪಡೆದರು. ಮುಂದೆ ಅಂತರರಾಷ್ಟ್ರೀಯ ಕ್ರೀಡಾಕೂಟದಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು. ಅಲ್ಲದೆ ಶ್ರೀಲಂಕಾದಲ್ಲಿ ನಡೆದ ಕ್ರೀಡಾಕೂಟದಲ್ಲಿ ಬೆಂಗಳೂರಿನ ಸಿ. ಪಿ. ಎಮ್. ಕ್ಲಬ್ಬನ್ನು ಪ್ರತಿನಿಧಿಸಿ ಹೈಜಂಪ್‌ನಲ್ಲಿ ಪ್ರಥಮ ಸ್ಥಾನವನ್ನು ಪಡೆದರು. ಬಹುಶಃ ಇದನ್ನು ಮಂಗಳೂರಿನ ಕ್ರೀಡಾಭಿಮಾನಿಗಳು ಇನ್ನೂ ಮರೆತಿರಲಾರರು!

ಹೆಣ್ಣು ಮಕ್ಕಳಿಗೆ ಎಳೆವೆಯಲ್ಲಿ ಇದ್ದ ಆಸಕ್ತಿಯನ್ನು ಹೆತ್ತವರು ಗುರುತಿಸಿ–ಬೆಳೆಸಿದರೂ–ವಿವಾಹವಾದ ನಂತರ ಪತಿಯ ಕುಟುಂಬಕ್ಕೆ ಸೇರಿದಾಗ ಅಲ್ಲಿ ಆಕೆಗೆ ತಕ್ಕ ಪ್ರೋತ್ಸಾಹ ಸಿಕ್ಕಿದರೆ ಮಾತ್ರ ಆಕೆಯ ಅಭಿರುಚಿಗಳು ಉಳಿಯುವುದು ಸಾಧ್ಯವಾಗುತ್ತದೆ. ಅದರಲ್ಲೂ ಕ್ರೀಡಾಸಕ್ತಿ ಉಳಿದ ಕಲೆಗಳಂತೆ ಸುಲಭವಲ್ಲವಲ್ಲ!

ಈಗ ಸುಮನಾ ವಿದ್ಯಾರ್ಥಿಗಳಿಗೆ ಸ್ಕೇಟಿಂಗ್ ಕಲಿಸುತ್ತಿದ್ದಾರೆ. ಸೈಂಟ್ ಅಲೋಸಿಯಸ್ ಹೈಸ್ಕೂಲ್, ಮೌಂಟ್ ಕಾರ್ಮೆಲ್ ಶಾಲೆ, ಮತ್ತು ಮಂಗಳೂರಿನ ಕೀಪ್ ಫಿಟ್ ಹೆಲ್ತ್ ಕ್ಲಬ್ಬಿನಲ್ಲೂ ಆಸಕ್ತರಿಗೆ ಸ್ಕೇಟಿಂಗ್ ಕಲಿಸುತ್ತಿದ್ದಾರೆ. ಸ್ಕೇಟಿಂಗ್ ಇತ್ತೀಚೆಗಿನ ದಿನಗಳಲ್ಲಿ ಪ್ರಪಂಚದ ಎಲ್ಲಾ ಕ್ರೀಡಾಸಕ್ತರನ್ನೂ ಸೆಳೆದ ಕ್ರೀಡೆಯಾಗಿದೆ. ಈ ಕ್ರೀಡೆಯಲ್ಲಿ ಮನಸ್ಸಿಗೆ ಬಹಳ ಆನಂದ ಸಿಗುವುದಲ್ಲದೆ, ದೇಹದ ಅಂಗಾಂಗಗಳಿಗೆ ಸರಿ ಪ್ರಮಾಣದ ವ್ಯಾಯಾಮವೂ ಸಿಗುತ್ತದೆ. ಕಾಲಿಗೆ ಗಾಲಿಗಳಿರುವ ಸ್ಕೇಟರ್ಸ್‌ಗಳನ್ನು ಕಟ್ಟಿಕೊಂಡು ತನ್ನ ಶರೀರದ ಇಡೀ ಸಮತೋಲನವನ್ನು ಕಾಲಿನಿಂದಲೇ ಹಿಡಿದುಕೊಂಡು ಸಾಗುವ ಈ ಕ್ರೀಡೆ ನೋಡಲು ಬಹಳ ಆಕರ್ಷಕವಾಗಿರುತ್ತದೆ.

ನಮ್ಮ ಶಾರೀರಿಕ ಅಂದಚೆಂದ ಆರೋಗ್ಯ ಉಳಿಯಬೇಕಾದರೆ ಸಮತೂಕದ ಆಹಾರ–ವಿಶ್ರಾಂತಿ ಅಗತ್ಯ ನಿಜ. ಆದರೆ ಇವುಗಳ ಜೊತೆಗೆ ವ್ಯಾಯಾಮವೂ ತೀರಾ ಅಗತ್ಯವೆಂದು ಎಷ್ಟೋ ವಿದ್ಯಾವಂತ ಮಹಿಳೆಯರಿಗೂ ತಿಳಿದಿಲ್ಲ. ಸೌಂದರ್ಯ ಮತ್ತು ಆರೋಗ್ಯ ಪ್ರಜ್ಞೆಯುಳ್ಳ ಮಹಿಳೆಯರು ತಮ್ಮ ದೇಹ ಸೌಂದರ್ಯವನ್ನು ಕಾಪಾಡಿಕೊಳ್ಳುವ ಒಲವು ಇರುವ ತನಕ ಹಿತ ಮಿತವಾಗಿ ವ್ಯಾಯಾಮವನ್ನು ಮಾಡುತ್ತಿದ್ದರೂ ಒಮ್ಮೆಂದೊಮ್ಮೆ ಮಾಡುತ್ತಿದ್ದ ವ್ಯಾಯಾಮವನ್ನು ಬಿಟ್ಟುಬಿಟ್ಟರೆ ವಯಸ್ಸಾದಾಗ ಅಡ್ಡಾದಿಡ್ಡಿ ಬೆಳೆದು ಬಿಡುತ್ತಾರೆ. ಸ್ಥೂಲಕಾಯವು ಹೆಣ್ಣಿನ ಜೀವನದಲ್ಲಿ ಒಮ್ಮೊಮ್ಮೆ ಅವಿಭಾಜ್ಯ ಅಂಗವೆನ್ನಬಹುದು. ಇದಕ್ಕೆ ಕಾರಣ ಬಸಿರು, ಬಾಣಂತನಗಳು. ಗೃಹಿಣಿಯ ಜೀವನದ ಈ ಸಂದರ್ಭಗಳಲ್ಲಿ ನಮ್ಮ ಆಹಾರ ಸೇವನಾಕ್ರಮವು

ನಾವು ಸ್ಥೂಲಕಾಯರಾಗುವಂತೆ ಮಾಡುತ್ತಿತ್ತು! ಆದರೆ ಇತ್ತೀಚೆಗಿನ ಹೆಣ್ಣುಮಕ್ಕಳು ಹೆಚ್ಚು ಪ್ರಜ್ಞಾವಂತರಾಗುತ್ತಿದ್ದಾರೆ. ಒಂದಲ್ಲ ಒಂದು ರೀತಿಯಿಂದ ತಮ್ಮ ದೇಹಕ್ಕೆ ವ್ಯಾಯಾಮದ ಅಗತ್ಯ ಇದೆ ಎಂಬುದನ್ನು ಅರಿತುಕೊಂಡು ಕ್ರೀಡೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಿರುವುದು ತುಂಬಾ ಸಂತೋಷದ ಸಂಗತಿಯಾಗಿದೆ. ಗೃಹಿಣಿಯರ ಜೀವನ ಯಾಂತ್ರಿಕವಾಗದಂತೆ ತಮ್ಮ ಬಿಡು ಹೊತ್ತನ್ನು ಸಂತೋಷವಾಗಿ ಕಳೆಯಲು ಸಾಧ್ಯವಾಗುವಂತಹ ಹವ್ಯಾಸಗಳನ್ನು ಬೆಳೆಸಿಕೊಳ್ಳುವುದು ಅಗತ್ಯ. ದೇಹಾರೋಗ್ಯವನ್ನು ಕಾಪಾಡಿಕೊಂಡು ಬರಲು, ವ್ಯಾಯಾಮವೂ ಕೂಡಾ ಅತ್ಯಂತ ಅಗತ್ಯವಾಗಿರುವುದರಿಂದ ಮಹಿಳೆಯರು ತಮ್ಮ ಎಳೆಯ ವಯಸ್ಸಿನಲ್ಲಿ ಇದ್ದ ಕ್ರೀಡಾಸಕ್ತಿಯನ್ನು ಮುಂದೆಯೂ ಉಳಿಸಿಕೊಂಡು ಬೆಳೆಸಿಕೊಳ್ಳುವುದು ಒಳ್ಳೆಯದು ಅಲ್ಲವೇ?

ಮಹಿಳೆ - ಗೃಹ ವೈದ್ಯ

— ಎಸ್. ರೋಹಿಣಿ ಶರ್ಮ

"ಗೃಹಿಣಿ ನಿರ್ವಹಿಸಬೇಕಾದ ಪಾತ್ರ ಒಂದೇ ಎರಡೆ? ಗೃಹವೈದ್ಯದಲ್ಲಿಯೂ ಅಭಿರುಚಿ, ಆಸಕ್ತಿ, ಪರಿಣತಿ ಆಕೆಗಿರಬೇಕು. ಏಕೆಂದರೆ ಹಲವು ಸಂದರ್ಭಗಳಲ್ಲಿ ಈ ಅನಿವಾರ್ಯತೆ ಒದಗಿಯೇ ಬಿಡುತ್ತದೆ. ಗಲಿಬಿಲಿಗೊಳ್ಳದೆ ಕಾರ್ಯಪ್ರವೃತ್ತಳಾಗುವ ಶಕ್ತಿಯನ್ನು ಬೆಳೆಸಿಕೊಳ್ಳಲೇಬೇಕಾಗುತ್ತದೆ. ಗೃಹಸ್ವಾಮಿನಿಯಾದ ಮಹಿಳೆ ಪರಿಸರದಲ್ಲಿರುವ ಸಸ್ಯ ಶ್ಯಾಮಲೆ ಪ್ರಕೃತಿದೇವಿ ಈ ಕಾರ್ಯಕ್ಕೆ ನೆರವಾಗುತ್ತಾಳೆ."

—ಸಂ.

"ಹಿತ್ತಲ ಗಿಡ ಮದ್ದಲ್ಲ" ಎನ್ನುವ ಕಾಲ ಹಿಂದಾಯಿತು. ಈಗ ನಮ್ಮ ಮನೆಯ ಸುತ್ತಲೂ ಕಾಣುವ ನೂರಾರು–ಸಾವಿರಾರು–ಹಿತ್ತಲಗಿಡಗಳಿಂದ ಅನೇಕ ಕಾಯಿಲೆಗಳಿಗೆ ಮದ್ದನ್ನು ನಾವೇ ತಯಾರಿಸಿ ರೋಗವನ್ನು ಹತೋಟಿಯಲ್ಲಿಟ್ಟುಕೊಳ್ಳಬಹುದೆಂಬ ಗುಟ್ಟನ್ನು ಮಾನವ ಅರಿತಿದ್ದಾನೆ. ಅದರಂತೆ ಪ್ರತಿಯೊಬ್ಬ ಮಹಿಳೆಯೂ ತನ್ನ ಮನೆಯಲ್ಲಿಯೇ ಇರುವ, ಅಥವಾ ತನ್ನ ಪರಿಸರದ ಸುತ್ತಮುತ್ತಲೂ ಬೆಳೆದಿರುವ ಹತ್ತಾರು ಸಸ್ಯಗಳಿಂದ ಮನೆಯಲ್ಲಿ ಯಾರಿಗೇ ಕಾಯಿಲೆ ಬರಲಿ ಪ್ರಾಥಮಿಕ ಹಂತದಲ್ಲಿ ಕೆಲವಾರು ಮದ್ದನ್ನಾದರೂ ಅರಿತಿದ್ದರೆ ರೋಗವನ್ನು ಹತೋಟಿಯಲ್ಲಿ ತರಬಹುದು, ಹಾಗೂ ರೋಗ ಬಾರದಂತೆ ಮುನ್ನೆಚ್ಚರಿಕೆಯನ್ನೂ ಮುಂಚಿತವಾಗಿಯೇ ತೆಗೆದುಕೊಳ್ಳಬಹುದು. ಇಂಥ ರೋಗ ತಡೆಗಟ್ಟುವ ಹಾಗೂ ರೋಗವನ್ನು ಗುಣಪಡಿಸಬಲ್ಲ ಹಲವಾರು ಪದಾರ್ಥಗಳು- ಸಸ್ಯಗಳು ನಮಗೆ ಸುಲಭವಾಗಿ ಲಭ್ಯವಾಗುತ್ತವೆ. ಇದನ್ನು ಅರಿತು ಪ್ರಯೋಗಿಸಿ ಪ್ರಯೋಜನ ಪಡೆಯುವ ಜ್ಞಾನ ಮಹಿಳೆಗಿದ್ದರೆ ಎಲ್ಲವೂ ಸುಲಭ ಸಾಧ್ಯ. ನಾವು ಅಡುಗೆಗೆ ಬಳಸುವ ಕೆಲವೊಂದು ಸಂಬಾರ ಪದಾರ್ಥಗಳು, ಸೊಪ್ಪು ತರಕಾರಿಗಳು,

ಹಣ್ಣುಗಳು ಕೆಲವೊಂದು ಕಾಯಿಲೆಗಳನ್ನು ಸುಲಭವಾಗಿ ಹತೋಟಿಯಲ್ಲಿಡ ಬಲ್ಲ ಗುಣವನ್ನು ಪಡೆದಿವೆ ಎಂದರೆ ಖಂಡಿತ ಆಚ್ಚರಿಯಾಗದಿರದು.

ಋತುಮಾನಕ್ಕನುಸಾರವಾಗಿ ಕೆಲವು ಕಾಯಿಲೆಗಳು ಸ್ವಾಭಾವಿಕವಾಗಿ ಮಾನವನನ್ನು ಕಾಡುತ್ತವೆ. ಮಳೆಗಾಲ ಬಂದಾಗ ಆರೋಗ್ಯದ ಸಮತೋಲನ ಏರುಪೇರಾಗಿ ಮಲಬದ್ಧತೆ, ಸಣ್ಣಜ್ವರ, ಗಂಟಲುನೋವು, ಕೆಮ್ಮು ಮುಂತಾದವು ಕಾಡಿದರೆ ಚಳಿಗಾಲದಲ್ಲಿ ಸಂದು ಕೀಲುಗಳ ಹಿಡಿತ, ಮುಖ-ಕೈಕಾಲುಗಳು ಒಡೆದು ಕೆಲವೊಮ್ಮೆ ರಕ್ತವೂ ಒಸರುವ ಸಂಭವ. ಬೇಸಿಗೆ ಬಂತೆಂದರೆ ಧಗೆಯಿಂದಾಗಿ ಮೈಉರಿ, ಕಣ್ಣುರಿ, ಉರಿಮೂತ್ರ, ಬಾಯಾರಿಕೆ ಹೆಚ್ಚುವುದರಿಂದ ದೇಹ ತಂಪಾದ ಆಹಾರವನ್ನು ಅಪೇಕ್ಷಿಸುತ್ತದೆ. ಇದಕ್ಕೆಲ್ಲಾ ಪದವಿ ಪಡೆದ ವೈದ್ಯರ ಹತ್ತಿರ ಹೋದರೆ ಏನೂ ಪ್ರಯೋಜನವಾಗದು. ನಮ್ಮಲ್ಲೇ ಸಿಗುವ ಸುಲಭವೂ ಸರಳವೂ ಆದ ಕೆಲವೊಂದು ಔಷಧಿಗಳನ್ನು ನಾವೇ ತಯಾರಿಸುವುದರಿಂದ ವೈದ್ಯರಾಜನಲ್ಲಿಗೆ ಹೋಗಿ ಹಣ ಪೋಲು ಮಾಡಿ ಕೊನೆಗೂ ವಾಸಿ ಆಗದೆ ಒದ್ದಾಡುವುದು ತಪ್ಪುತ್ತದೆ. ಅನುಕೂಲತೆ ಇರುವವರು (ಸ್ಥಳದ) ಕೆಲವೊಂದು ಸಸ್ಯಗಳನ್ನಾದರೂ ಮನೆ ಮುಂದಿನ ಅಂಗಳದಲ್ಲೆ ಚೆನ್ನಾಗಿ ಬೆಳೆಸಿ ಬಳಸುವುದು ತುಂಬಾ ಫಲಕಾರಿ.

ಸಂಬಾರ ಮದ್ದುಗಳು:–

ಪದಾರ್ಥಗಳಿಗೆ ರುಚಿ ಬರಲು, ಬಣ್ಣ ಹೆಚ್ಚಿಸಲು ಸಂಬಾರ ಪದಾರ್ಥಗಳನ್ನು ಬಳಸುತ್ತೇವೆ. ಕೆಲವೊಮ್ಮೆ ಈ ಸಂಬಾರ ಪದಾರ್ಥಗಳು ಜೀವವನ್ನೂ ಉಳಿಸಬಲ್ಲವು.

ಅರಿಶಿನ:–

ಆರ್ಯಾವರ್ತದಲ್ಲಿ ಅರಿಶಿನವನ್ನರಿಯದ ಜನರಿಲ್ಲ, ಬಳಸದ ಮನೆಯಿಲ್ಲ. ಮಹಿಳೆಗೆ ಅರಿಶಿನ ಕುಂಕುಮವೆಂಬ ಸೌಭಾಗ್ಯ ಚಿಹ್ನೆಗಳು ಅಮೂಲ್ಯವಾಗಿವೆ. ಕಾಳಿದಾಸನು ತನ್ನ ಕಾವ್ಯದಲ್ಲಿ ಅರಿಶಿನವನ್ನು ಸ್ತ್ರೀಯರು ದಿನಾ ಮುಖಕ್ಕೆ ಹಚ್ಚಿಕೊಳ್ಳುವುದರಿಂದ ಬೇಡವಾದ ಕೂದಲನ್ನು ತಡೆಯಬಹುದೆಂದಿದ್ದಾನೆ. ಮಟುಗಳಿಗೆ, ಮದುಮಕ್ಕಳಿಗೆ ಶುಭಕಾರ್ಯದಲ್ಲಿ ಅರಿಶಿನದ ಬಟ್ಟೆಯನ್ನು ಕಡ್ಡಾಯವಾಗಿ ತೊಡುವ ಶಾಸ್ತ್ರಮಾಡಿರುವುದು ನಂಜು ತಾಗದಿರಲೆಂದು.

ಹರಿದ್ರಾ, ರಜನಿ, ನಿಶಾ ಮುಂತಾದವು ಅರಿಶಿನಕ್ಕಿರುವ ಇನ್ನಿತರ ಹೆಸರುಗಳು. ಹಸಿಗೆಡ್ಡೆ, ಒಣಕೊಂಬು, ಪುಡಿಯಾಗಿಯೂ ಬಳಸಬಹುದು.

ನೆಗಡಿ, ಕೆಮ್ಮು, ಗಂಟಲು ನೋವಾದಾಗ ಬಿಸಿ ಹಾಲಿಗೆ ಒಂದು ಚಿಟಿಕೆ ಅರಿಶಿನಪುಡಿ, ½ಚಮಚ ಮೆಣಸಿನಕಾಳು ಪುಡಿಮಾಡಿ ಬೆರೆಸಿ ಕುಡಿಯುವು ದರಿಂದ ಶೀತ, ನೆಗಡಿ, ಕೆಮ್ಮು ದೂರವಾಗುವುದು. ಅರಿಶಿನ ಪುಡಿಯ ಹೊಗೆ ಸೇವಿಸಿದರೂ ಇದೇ ಪರಿಣಾಮವಾಗುವುದು. ಅರಿಶಿನಪುಡಿ, ಬೇವಿನ ಪುಡಿ ಯನ್ನು ಎಳ್ಳೆಣ್ಣೆಯೊಡನೆ ಕೂಡಿಸಿ ಮುಲಾಮು ತಯಾರಿಸಿ ಉಪಯೋಗಿಸಿ ದರೆ ಚರ್ಮರೋಗ-ಹುಣ್ಣು ವಾಸಿಯಾಯುವುದು.

ಅರಿಶಿನದ ನಯವಾದ ಪುಡಿ, ಗಂಧವನ್ನು ಸಮ ಪ್ರಮಾಣದಲ್ಲಿ ಪೇಸ್ಟ್ ತಯಾರಿಸಿ ಇಡೀ ಶರೀರಕ್ಕೆ ಹಚ್ಚಿಕೊಂಡರೆ ಚರ್ಮರೋಗಗಳು ಬರುವು ದಿಲ್ಲ. ಮುಖದಲ್ಲಿನ ಜಿಡ್ಡು ದೂರವಾಗಿ ಮೊಡವೆಗಳು ಕಡಿಮೆಯಾಗುತ್ತವೆ.

ಬೇರನ್ನು ಒಂದು ಚಮಚ ಜೇನಿನಲ್ಲಿ ತೇಯ್ದು ನೆಕ್ಕಿಸಿದರೆ ಹಾಸಿಗೆ ಯಲ್ಲಿ ಮೂತ್ರ ಮಾಡುವ ಅಭ್ಯಾಸದ ಮಕ್ಕಳಿಗೆ ಗುಣ ತೋರುವುದು.

ಓಮ ಕಾಳು :–

ಕೊತ್ತುಂಬರಿ ಜಾತಿಗೆ ಸೇರಿದ "ಓಮ" ಸುವಾಸನಾಯುಕ್ತವಾದ, ಬೀಜವನ್ನು ಹೊಂದಿದ ಗಿಡ. ಅಜವೋಡ, ಅಯಮೋಡ, ದೀಪ್ಯರ ಮುಂತಾದ ಹೆಸರುಗಳಿಂದ ಕರೆಯಲ್ಪಡುವ ಇದನ್ನು ಬೀಜ ಬಿತ್ತಿ ಬೆಳೆಸ ಬಹುದು.

ಓಮವು ರುಚಿಯಲ್ಲಿ ಕಹಿ, ಪರಿಣಾಮದಲ್ಲಿ ಉಷ್ಣಕಾರಿ. ಕಫ, ಹೊಟ್ಟೆ ನೋವು, ಅಜೀರ್ಣ, ಶೀತ, ವಾಯು ಉಪದ್ರವಗಳಲ್ಲಿ ಬಹಳ ಗುಣಕಾರಿ ಯಾದುದು. ಜಂತು ನಿವಾರಕ, "ಓಮ ವಾಟರ್" ಎನ್ನುವ ಸಿದ್ಧೌಷಧ ಮಕ್ಕಳ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ಅರ್ಧ ಲೋಟ ಕುದಿಯುವ ನೀರಿಗೆ ½ ಚಮಚ ಓಮದ ಪುಡಿ ಹಾಕಿ ಸ್ವಲ್ಪ ಹೊತ್ತು ಬಿಟ್ಟು ನೀರನ್ನು ಶೋಧಿಸಿ ಸಕ್ಕರೆ - ಸ್ವಲ್ಪ ಹಾಲು ಬೆರೆಸಿ ಕುಡಿದರೆ ಅಜೀರ್ಣ ಸಂಬಂಧವಾದ ರೋಗ ದೂರವಾಗುವುದು.

ಒಂದರಿಂದ ಎರಡು ಚಮಚ ಓಮದ ಪುಡಿಗೆ ಸ್ವಲ್ಪ ಅನ್ನದ ಬಿಸಿಗಂಜಿಯನ್ನು ಸೇರಿಸಿ ಚೆನ್ನಾಗಿ ಅರೆದು ವಾಯುವಿನಿಂದಾದ ಕೀಲುನೋವಿಗೆ ಸ್ವಲ್ಪ ಬೆಚ್ಚಗೆ ಇರುವಾಗಲೇ ಹಚ್ಚಿದರೆ ನೋವು ದೂರವಾಗುವುದು.
ಶೀತದಿಂದ ಬರುವ ತಲೆನೋವು ಹಾಗೂ ತಲೆಭಾರಕ್ಕೆ ಈ ಔಷಧಿ ರಾಮಬಾಣ.

ಬಜೆ:-

ಮಕ್ಕಳಿರುವ ಮನೆಯಲ್ಲಿ ಬಜೆ ಇರಲೇಬೇಕು. ಮಕ್ಕಳು ಜನಿಸಿದಾಗಲೇ ಬಜೆ ಬೆಣ್ಣೆ ಸಂಪ್ರದಾಯದಿಂದ ಬೆಳೆದು ಮುಂದೆ ಒಂದಲ್ಲ ಒಂದು ಕಾರಣಕ್ಕೆ ಇದನ್ನು ಬಳಸುತ್ತಲೇ ಬರುತ್ತೇವೆ. "ವಚಾ" ಉಗ್ರಗಂಧ, ಎಂಬ ಹೆಸರಿರುವ ಇದು ಜೌಗುಪ್ರದೇಶದಲ್ಲಿ ಸಮೃದ್ಧವಾಗಿ ಬೆಳೆಯುತ್ತದೆ.

ರುಚಿಯಲ್ಲಿ ಖಾರ-ಕಹಿ, ಬೇರಿನ ಭಾಗ ಉಪಯೋಗಕರ. ಮನೆಯಲ್ಲಿ ಬಜೆ ತುಂಡಿದ್ದರೆ ಒಬ್ಬ ವೈದ್ಯ ಸದಾ ಮನೆಯಲ್ಲಿದ್ದಂತೆ. ಸ್ಮರಣ ಶಕ್ತಿ ಹೆಚ್ಚಿಸುತ್ತದೆ. ತೊದಲು ನಿವಾರಿಸುತ್ತದೆ. ತಲೆ-ಕೀಲು ಹೊಟ್ಟೆ ನೋವಿನಲ್ಲೂ ಇದರ ಉಪಯೋಗ ಬಹಳ.

ಸಾಣೆಕಲ್ಲಿನ ಮೇಲೆ ಬಜೆ ಗಂಧ ತೇಯ್ದು, ಜೇನು ಕೂಡಿಸಿ ಮಕ್ಕಳಿಗೆ ತಿನ್ನಿಸುವುದರಿಂದ ಸ್ಮರಣಶಕ್ತಿ, ಬುದ್ಧಿಶಕ್ತಿ ಹೆಚ್ಚುತ್ತದೆ. ರೋಗನಿರೋಧಕ ಶಕ್ತಿ ಇದಕ್ಕಿದೆ. ತೊದಲು ಮಾತನ್ನು ನಿವಾರಿಸಿ ಸ್ಪಷ್ಟ ಉಚ್ಚಾರಣೆಗೆ ಎಡೆ ಮಾಡಿಕೊಡುತ್ತದೆ. ತಲೆನೋವು, ಶೀತ, ನೆಗಡಿ ಬಂದಾಗ ಬಜೆ ಗಂಧವನ್ನು ಬಿಸಿ ನೀರು ಅಥವಾ ಹಾಲಿನಲ್ಲಿ ಅರೆದು ಬೆಚ್ಚಗೆ ಮಾಡಿ ಹಣೆ ಪಟ್ಟಿ ಹಾಕಿದರೆ ತಲೆನೋವು ಶೀತ ನೆಗಡಿ ದೂರವಾಗುವುದು.

ಹಿತ್ತಲ ಗಿಡಗಳಿಂದ ವೈದ್ಯಕೀಯ

ದೊಡ್ಡ ಪತ್ರೆ:-

ಇದು ಸಂಬಾರಸೊಪ್ಪು, ದೊಡ್ಡಿ ಪತ್ರೆ ಎಂಬ ಹೆಸರುಗಳಿಂದ ಕರೆಯಲ್ಪಡುತ್ತದೆ. ಈ ಸಸ್ಯ ಸುಮಾರು ಎರಡು ಅಡಿ ಎತ್ತರಕ್ಕೆ ಬೆಳೆಯುವ ಪೊದೆಯಂತಹ ಸಣ್ಣ ಗಿಡ. ಇದಕ್ಕೆ ಆಯುರ್ವೇದದಲ್ಲಿ "ಪರ್ಣಯು

ವಾಸಿ" ಎಂದು ಕರೆಯುತ್ತಾರೆ. ಇದು ಜೀರ್ಣಕಾರಿ, ಕೆಮ್ಮು, ಶೀತ, ನೆಗಡಿ, ಅಲರ್ಜಿ, ಪಿತ್ತಗಂಧೆ, ಹುಳು, ಕೀಟ ಕಡಿತಕ್ಕೆ ಅತ್ಯುತ್ತಮ ಔಷಧ ಸಸ್ಯ.

ಇದರ ಬೇರಿನ ರಸವನ್ನು ತೆಂಗಿನ ಎಣ್ಣೆ ಜೊತೆ ಬೆರೆಸಿ ಕಣ್ಣಿಗೆ ಹಚ್ಚುವುದರಿಂದ ಕಣ್ಣುರೋಗಗಳಿಗೆ ಉಪಶಮನ. ಬೇರಿನ ರಸಕ್ಕೆ ಸಕ್ಕರೆ ಕೂಡಿಸಿ ಕೊಟ್ಟರೆ ಮಲಭೇದಿ ನಿವಾರಣೆಯಾಗುವುದು. ಇದರ ಅಗಲವಾದ ಎಲೆಯನ್ನು ಕೆಂಡದ ಮೇಲಿಟ್ಟು ಬಾಡಿಸಿ ರಸವನ್ನು ಹಣೆಗೆ ಹಚ್ಚುವುದರಿಂದ ತಲೆಭಾರ-ಶೂಲೆ ದೂರವಾಗುವುದು. ಸ್ವಲ್ಪ ಬೆಚ್ಚಗಿನ ರಸವನ್ನು ಕಿವಿಗೆ ಬಿಟ್ಟರೆ ಶೀತದಿಂದಾಗುವ ಕಿವಿನೋವು ಮಾಯವಾಗುವುದು. ಮಕ್ಕಳಿಗೆ ಶೀತದಿಂದಾಗಿ ಕಫ ಕಟ್ಟಿದ್ದರೆ ಎಲೆ ಬೆಚ್ಚಗೆ ಮಾಡಿ ಎದೆಯ ಮೇಲೆ ಶಾಖ ಕೊಡುವುದರಿಂದ ಕಫ ಸಡಿಲವಾಗಿ ಉಸಿರಾಟ ಸರಾಗವಾಗುವುದು.

ಪಿತ್ತಗಂಧೆಯಾದಾಗ ಜೀರಿಗೆ ಸೇರಿಸಿ ತಂಬಳಿ, ಗೊಜ್ಜು ಮಾಡಿಕೊಂಡು ಆಹಾರ ಸೇವಿಸಿದರೆ ಪಿತ್ತಗಂಧೆ ದೂರವಾಗುವುದು.

ತುಳಸಿ:-

ಪ್ರತಿಯೊಬ್ಬ ಹಿಂದೂವಿನ ಮನೆಯ ಮುಂಭಾಗದಲ್ಲಿ ಶೋಭಿಸುತ್ತಾ ಪೂಜಿಸಲ್ಪಡುವ ಸಸ್ಯ ತುಳಸಿ. ಆಯುರ್ವೇದದಲ್ಲಿ ಇದನ್ನು ಕ್ರಿಮಿನಾಶಕ, ಸರ್ವರೋಗಾಂತಕ, ವಾಯುಶೋಧಕ, ಎಂಬುದಾಗಿ ಉಲ್ಲೇಖಿಸಿದೆ. ಇದರಲ್ಲಿ ರಾಸಾಯನಿಕ ತೈಲವಿರುವುದರಿಂದ ಎಲೆಯ ರಸವು ಕ್ರಿಮಿನಾಶಕ, ಕೀಟನಾಶಕವುಳ್ಳದ್ದಾಗಿದೆ.

ಕುಡಿಯುವ ನೀರಿಗೆ 5-6 ತುಳಸಿ ಕುಡಿ ಹಾಕಿದರೆ ನೀರು ಶುದ್ಧೀಕರಣವಾಗುವುದು.

ತುಳಸಿವನ ಬೆಳೆಸಿದರೆ ಸೊಳ್ಳೆ ನಾಶವಾಗುವುದು. ಎಲೆಯ ರಸಕ್ಕೆ ಶುಂಠಿ ಚೂರ್ಣ ಬೆರೆಸಿ ಕುಡಿದರೆ ಹೊಟ್ಟೆ ಶೂಲೆ ಗುಣವಾಗುವುದು. ಎಲೆಯನ್ನು ಬಾಯಲ್ಲಿ ಅಗಿದರೆ ಬಾಯಿಹುಣ್ಣು ಬಾರದು. ತುಳಸಿ ಎಲೆ, ಕಪ್ಪು

ಮೆಣಸಿನಕಾಳು ಅರೆದು ಹಸುವಿನ ತುಪ್ಪದೊಡನೆ ಪ್ರತಿದಿನ ಸೇವಿಸಿದರೆ ಮಲೇರಿಯಾ ಹಾಗೂ ವಾತರೋಗ ನಿವಾರಣೆಯಾಗುವುದು.

ಚಿಕ್ಕಮಕ್ಕಳಿಗೆ ಸರಿಯಾಗಿ ಭೇದಿಯಾಗದಿದ್ದರೆ ತುಳಸಿ ರಸವನ್ನು ಬೆಚ್ಚಗೆ ಮಾಡಿ ಕುಡಿಸಬೇಕು. ಬೆವರು ಸಾಲೆ, ಮೊಡವೆಗೆ ಪ್ರತಿ ದಿನ ರಸ ಹಚ್ಚಿದರೆ ಗುಣ ಕಾಣುವುದು.

ಹಣ್ಣುಗಳಿಂದಾಗುವ ಪ್ರಯೋಜನ

ಬಾಳೆ:- ಬಾಳೆ ಎಲೆ, ಬಾಳೆದಿಂಡು, ಬಾಳೆಹೂ, ಗೆಡ್ಡೆ ಪ್ರತಿಯೊಂದೂ ಉಪಯೋಗಕರ. ಆಹಾರವಾಗಿ, ಔಷಧಿಯಾಗಿ, ಆರ್ಥಿಕವಾಗಿ ಬಾಳೆ ಬಳಕೆಯಾಗುತ್ತಿದೆ. ಬಾಳೆಹಣ್ಣಿನಲ್ಲಿ ರಸ ಬಾಳೆ ಎಲ್ಲಕ್ಕಿಂತಲೂ ಹೆಚ್ಚು ಶ್ರೇಷ್ಠ.

ಮೂಲವ್ಯಾಧಿಯಿಂದ ಬಳಲುವವರು ಪ್ರತಿದಿನ 1 ಬಾಳೆಹಣ್ಣಿನ ಜೊತೆ ಒಂದು ಏಲಕ್ಕಿ ತಿಂದರೆ ತಪ್ಪದೆ ನಿಯಂತ್ರಣಕ್ಕೆ ಬರುತ್ತದೆ.

ಉಷ್ಣಭೇದಿ, ರಕ್ತಭೇದಿಗೆ 1 ಲೋಟ ಟೀ ಜೊತೆ ಬಾಳೆ ಹಣ್ಣು ಹಾಕಿ ಕುಡಿದರೆ ಭೇದಿ ಹತೋಟಿಗೆ ಬರುವುದು.

ಸ್ತ್ರೀಯರಿಗೆ ಮುಖ್ಯವಾಗಿ ಕಾಡುವ ಅತಿಸ್ರಾವಕ್ಕೆ ಬಾಳೆಹೂವಿನ ಪಲ್ಯ ಪರಿಣಾಮಕಾರಿ.

ಪ್ರತಿದಿನ ಖಾಲಿ ಹೊಟ್ಟೆಯಲ್ಲಿ ಬಾಳೆದಿಂಡಿನ ರಸ ತಪ್ಪದೆ ಸೇವಿಸಿದರೆ ಮೂತ್ರಕೋಶದ ಕಲ್ಲುಕರಗಿ ಮೂತ್ರಕಟ್ಟು ಕಡಿಮೆಯಾಗುವುದು.

ಬಾಳೆದಿಂಡಿನ ಸಾಸಿವೆ ಮಾಡಿ ಊಟ ಮಾಡಿದರೆ ಜೀರ್ಣಶಕ್ತಿ ಹೆಚ್ಚುತ್ತವೆ. ತಿಂದು ಎಸೆಯುವ ಸಿಪ್ಪೆಯನ್ನು ಚೆನ್ನಾಗಿ ಒಣಗಿಸಿ ಪುಡಿಮಾಡಿ ಕೊಬ್ಬರಿ ಎಣ್ಣೆ ಜೊತ ಬೆರಸಿ ತಲೆಗೆ ಹಚ್ಚಿಕೊಂಡರೆ ಕೂದಲು ಕಪ್ಪಾಗಿ ಸೊಂಪಾಗಿ ಬೆಳೆಯುವುದು,

ನಿಂಬೆ:- 'ಸಿ' ಜೀವಸತ್ವದ ಆಗರ, ನಿಂಬೂಕ, ಜಂಬೀರ, ಇದಕ್ಕಿರುವ ಇತರ ಹೆಸರುಗಳು. ಜೇನುತುಪ್ಪ ನಿಂಬೆರಸ ಸೇರಿಸಿ ಸೇವಿಸುವುದರಿಂದ ರಕ್ತ ವೃದ್ಧಿಯಾಗುತ್ತದೆ. ಖಾಲಿಹೊಟ್ಟೆಯಲ್ಲಿ ನಿಂಬೆರಸ ಜೇನುತುಪ್ಪ ಕುಡಿದರೆ

ಬೊಜ್ಜು ಕರಗುವುದು. 1 ಬಕೆಟ್ ನೀರಿಗೆ 1 ನಿಂಬೆ ರಸ ಬೆರೆಸಿ ತಲೆ ತೊಳೆದರೆ ಕೂದಲಿಗೆ ಹೊಳಪು ಬರುವುದು.

ಮುಖಚರ್ಮ ಮೃದುವಾಗಲು ಹಾಲಿನ ಕೆನೆಗೆ ನಿಂಬೆರಸ ಬೆರೆಸಿ ಮುಖಕ್ಕೆ ಹಚ್ಚಿ ಬಿಸಿನೀರಿನಲ್ಲಿ ತೊಳೆದರೆ ಮುಖಕಾಂತಿ ಹೆಚ್ಚುವುದು.

ಹಲ್ಲು, ಒಸಡು ಶುದ್ಧಿಗೆ ನಿಂಬೆ, ಉಪ್ಪು ಸೇರಿಸಿ ಹಲ್ಲುತಿಕ್ಕಬೇಕು. ನಿಂಬೆಹಣ್ಣಿನ ಶರಬತ್ತು ಬೇಸಿಗೆಯಲ್ಲಿ ಬಾಯಾರಿಕೆ ನೀಗಬಲ್ಲದು.

ದಾಳಿಂಬೆ:- ಸಿಹಿ-ಹುಳಿ ಸಂಮಿಶ್ರ ರಸಭರಿತ ಹಣ್ಣಾದ ದಾಳಿಂಬೆ ತಿನ್ನಲು ಬಲುರುಚಿ. ದಾಳಿಂಬೆಯ ತೊಗಟೆ, ಬೇರು, ಹೂವು, ಹಣ್ಣು-ಎಲ್ಲಾ ಭಾಗಗಳೂ ಉಪಯೋಗಕರ.

2 ಚಮಚ ದಾಳಿಂಬೆ ಚಕ್ಕೆ ಪುಡಿಯನ್ನು ನಾಲ್ಕುಲೋಟ ನೀರಿಗೆ ಹಾಕಿ ಕುದಿಸಿ ಈ ಕಷಾಯವನ್ನು 3-4 ಬಾರಿ ಸೇವಿಸುವುದರಿಂದ ರಕ್ತಭೇದಿ ತಹಬಂದಿಗೆ ಬರುತ್ತದೆ.

ಹಣ್ಣಿನ ಸಿಪ್ಪೆಯನ್ನು ಚೆನ್ನಾಗಿ ಕುಟ್ಟಿ ಪುಡಿ ಮಾಡಿಕೊಂಡರೆ ಬೇಕೆನಿಸಿದಾಗ ಉಪಯೋಗಿಸಬಹುದು.

ಹಸಿ ಬೇರನ್ನು ಕುಟ್ಟಿ ಕಷಾಯ ಮಾಡಿ ಕುಡಿದರೆ ಜಂತು ಹುಳ ಗಣನೀಯವಾಗಿ ಕಡಿಮೆಯಾಗುತ್ತದೆ.

ದಾಳಿಂಬೆ ಹೂವಿನ ಕಷಾಯ ಬಾಯಿ ದುರ್ಗಂಧ, ಗಂಟಲು ನೋವು, ಬಾಯಿ ಹುಣ್ಣನ್ನು ನಿವಾರಿಸುತ್ತದೆ.

ಜಾಜಿ:- ಮನೆಯಂಗಳಕ್ಕೆ ಮೆರುಗು, ಮಾನಿನಿಯರ ಮುಡಿಗೆ ಚೆಲುವು, ದೇವರ ಪೂಜೆಗೆ ಶ್ರೇಷ್ಠವೂ ಆದ ಜಾಜಿ ಬಲು ಪ್ರಯೋಜನಕಾರಿ.

ಹಲ್ಲುನೋವು – ಬಾಯಿಹುಣ್ಣಿನಿಂದ ಬಳಲುತ್ತಿದ್ದೀರಾ? ಜಾಜಿ ಹೂವನ್ನು ಬಾಯಲ್ಲಿಟ್ಟು ಚೆನ್ನಾಗಿ ಜಗಿಯಿರಿ.

ಗಾಯದಿಂದಾದ ರಕ್ತಸ್ರಾವಕ್ಕೆ ಶುಭ್ರ ವಾದ ಜಾಜಿ ಎಲೆಗಳನ್ನು ಅರೆದು ಗಾಯದ ಜಾಗಕ್ಕೆ ಹಚ್ಚಿ. ಗಾಯ ಬೇಗ ಮಾಯುವುದು.

ಕಾಲೊಡಕು, ಕಾಲುಆಣಿ, ಕೆಸರು ಹುಣ್ಣಾದಾಗ ಸೊಪ್ಪಿನ ರಸ ಅರೆದು ದಿನಕ್ಕೆ 3–4 ಬಾರಿ ಪಟ್ಟು ಹಾಕಿ.

ಗರ್ಭಿಣಿ ಸ್ತ್ರೀಯರಿಗೆ ಜಾಜಿ ಸೊಪ್ಪನ್ನು ಅರೆದು ಆಕಳ ಹಾಲಿನಲ್ಲಿ ವಾರಕ್ಕೊಂದು ದಿನ ಕೊಟ್ಟರೆ "ಚವಿ" ದೋಷ ನಿವಾರಣೆಯಾಗುವುದು.

ಬಿದ್ದಗಾಯ ಬಿರಿದು ಉರಿ ನೋವನ್ನುಂಟು ಮಾಡಿದರೆ ಸೊಪ್ಪಿನ ರಸಕ್ಕೆ ಅರಿಶಿನ, ಎಣ್ಣೆ ಬೆರೆಸಿ ಹಚ್ಚಿ – ಉರಿ ಕಡಿಮೆಯಾಗುತ್ತದೆ. ಗಾಯ ಮಾದು ಕಲೆ ನಿಲ್ಲುವುದಿಲ್ಲ.

"ಗೃಹಿಣಿ ಗೃಹಮುಚ್ಯತೆ" ಎನ್ನುವಂತೆ ಗೃಹಿಣಿಗೆ ಮನೆಯ ಆಗು ಹೋಗು, ಸುಖ ದುಃಖ, ನೋವು–ನಲಿವಿನ ಜೊತೆ, ಸಂಸಾರದ ಆರೋಗ್ಯ ಭಾಗ್ಯವನ್ನೂ ಕಾಪಾಡಿಕೊಂಡು ಹೋಗುವ ಗುರುತರ ಹೊಣೆ ಬಿದ್ದಿರುತ್ತದೆ. ಪ್ರತಿಯೊಬ್ಬ ಮಹಿಳೆಯೂ ಗೃಹವೈದ್ಯವನ್ನರಿತು – ಆಚರಣೆಗೆ ತಂದರೆ ಆರೋಗ್ಯ ತುಂಬಿದ ತುಂಬು ಬದುಕು ಅವರದಾಗುವುದರಲ್ಲಿ ಸಂದೇಹವಿಲ್ಲ.

ಬಾಲ್ಯದಲ್ಲಿನ ಪರಿಸರ

—ವಿದ್ಯಾಲಕ್ಷ್ಮಿ

"ಭವ್ಯ ಸೌಧಕ್ಕೆ ಭದ್ರ ಪಂಚಾಂಗ ಬೇಕು. ಅಂತೆಯೇ ಬಾಲ್ಯದ ಉತ್ತಮ ಪರಿಸರವು ವ್ಯಕ್ತಿಯ ಜೀವನವನ್ನು ರೂಪುಗೊಳಿಸುವ ಸೋಪಾನ. ಅದಕ್ಕಾಗಿ ಎಂತಹ ಪ್ರಯತ್ನ ಸಾಧ್ಯ? ನಮ್ಮ ಎಳೆಯರ ಭವಿಷ್ಯವು ಬಂಗಾರವಾಗಲೆಂದು ಬಯಸುವುದ ರೊಂದಿಗೆ ಅದಕ್ಕಾಗಿ ನಮ್ಮಿಂದ ಸಾಧ್ಯವಿದ್ದುದನ್ನೆಲ್ಲ ಮಾಡಲೇಬೇಕಲ್ಲವ?"

—ಸಂ.

ಮೊಗ್ಗೊಂದು ಅರಳಿ ಸುಂದರ ಪುಷ್ಪವಾಗಿ ಪರಿಮಳ ಚೆಲ್ಲಲು ಸುತ್ತಲಿನ ಉತ್ತಮ ವಾತಾವರಣ, ಗಾಳಿ, ನೀರು, ಆರೈಕೆ ಇತ್ಯಾದಿ ಅತ್ಯವಶ್ಯ. ಮುಗ್ಧ ಕಂದಮ್ಮಗಳೂ ಹೂಗಳಂತೆಯೇ. ಶಿಶುವೊಂದು ಬೆಳೆದು ವ್ಯಕ್ತಿಯಾಗುವುದೆಂದರೆ ಮೊಗ್ಗು ಹೂವಾಗಿ ಅರಳಿದಂತೆಯೇ. ಮಾನವನ ಜೀವನದಲ್ಲಿ, ಆತನ ವ್ಯಕ್ತಿತ್ವ, ಸ್ವಭಾವ, ಸ್ಥಾನಮಾನಗಳೆಲ್ಲಾ ಆತನು ಬಾಲ್ಯವನ್ನು ಕಳೆದ ರೀತಿಯ ಪರಿಣಾಮವನ್ನು ಖಂಡಿತ ಪ್ರತಿಬಿಂಬಿಸುತ್ತವೆ. 'ಬೆಳೆಯ ಗುಣ ಮೊಳಕೆಯಲ್ಲಿ' ಎಂಬ ಗಾದೆ ಮಾತಿನಂತೆ ಬಾಲ್ಯದಲ್ಲಿ ಕಲಿತ ಶಿಸ್ತು, ಸಂಯಮ, ಉತ್ತಮ ನೀತಿ, ನಿಯತ್ತುಗಳು ಬಾಳಿನುದ್ದಕ್ಕೂ ದಾರಿದೀಪವಾಗುತ್ತವೆ. ಇದರೊಂದಿಗೇ ಬಾಲ್ಯಕಾಲದಲ್ಲಿ ಸುತ್ತಮುತ್ತಲೂ ಕಂಡು ಅನುಭವಿಸಿದ ಪರಿಸರವೂ ಅಷ್ಟೇ ಮುಖ್ಯವಾಗಿರುತ್ತದೆ.

ಮಗುವು ಪ್ರತಿಯೊಂದು ವಿಷಯದಲ್ಲೂ ಬಹಳ ಕುತೂಹಲಿಯಾಗಿ ಪರಿಸರಕ್ಕೆ ಪ್ರತಿಕ್ಷಣವೂ ಸ್ಪಂದಿಸುತ್ತಿರುತ್ತದೆ. ತನ್ನ ತಂದೆ, ತಾಯಿ, ಅಣ್ಣ, ಅಕ್ಕ, ಬಂಧುಬಳಗ, ನೆರೆಹೊರೆಯ ಒಡನಾಡಿಗಳು ಇವರನ್ನೆಲ್ಲ ಅನುಕರಿಸುತ್ತ ಬೆಳೆಯುತ್ತದೆ. ಗಿಡ, ಮರ, ಬಳ್ಳಿ, ಹೂ, ಹಣ್ಣು, ಹಾರುವ ಹಕ್ಕಿ, ಓಡುವ ಪ್ರಾಣಿ ಇವುಗಳನ್ನೆಲ್ಲ ಕೌತುಕದಿಂದ ನೋಡಿ ಸೋಜಿಗ

ದೊಂದಿಗೆ ಸಂತಸ ಪಡುತ್ತದೆ. ಉತ್ತಮ ಪರಿಸರದಲ್ಲಿದ್ದು ಮುಕ್ತ ವಾತಾವರಣದಲ್ಲಿ ಬೆಳೆಯುವ ಅವಕಾಶ ಪಡೆದ ಮಕ್ಕಳು ನಿಜಕ್ಕೂ ಭಾಗ್ಯವಂತರು.

ಆದರೆ ಈಗ.... ಪರಿಸರ ಮಾಲಿನ್ಯ, ಈ ಬಗ್ಗೆ ಸಾಕಷ್ಟು ಕೇಳುತ್ತೇವೆ, ಓದುತ್ತೇವೆ, ನೋಡುತ್ತೇವೆ. ಪಟ್ಟಣವಾಸಿಗಳ ಪಾಲಿಗಂತೂ ವಾಹನ, ಕಾರ್ಖಾನೆ, ಬೃಹತ್ ಸ್ಥಾವರಗಳು ಉಗುಳುವ ಹೊಗೆ, ಧೂಳು, ಚರಂಡಿಗಳಿಂದ ಹೊಮ್ಮುವ ದುರ್ನಾತ, ರಕ್ತಹೀರುವ ಸೊಳ್ಳೆ ಸಹವಾಸ ದಿನನಿತ್ಯದ ಪಾಡು. ಇವುಗಳ ನಡುವೆ ಸ್ವಚ್ಛ ಹವೆಯ ಸೇವನೆಯೂ ಕನಸಿನ ಮಾತೇ ಸರಿ. ಮಕ್ಕಳು ಶಾಲೆ, ಹೋಂವರ್ಕ್, ಟ್ಯೂಶನ್‌ಗಳನ್ನು ಮುಗಿಸಿ ಟಿ. ವಿ.ಯ ಮುಂದೆ ಕುಳಿತು ಜಾಹೀರಾತು ಪ್ರಪಂಚದಲ್ಲಿ ಮುಳುಗಿ ಸಂತೋಷ ಅನುಭವಿಸುವುದನ್ನು ಕಲಿತುದರಿಂದ ಬೇರೆ ಯಾವುದರ ಅರಿವು ಅವರಿಗೆ ಬೇಡ. ಚಿಕ್ಕಪುಟ್ಟ ಮಕ್ಕಳ ಬಾಯಲ್ಲೂ ಗರ್ಭನಿರೋಧಕ ಗೋಲಿಗಳ, ಕುಟುಂಬ ಯೋಜನೆಯ ಜಾಹೀರಾತುಗಳ ಹೆಸರುಗಳೆಲ್ಲಾ ಲೀಲಾಜಾಲವಾಗಿ ಹೊರಬರುವುದನ್ನು ಕೇಳುವಾಗ ಎಷ್ಟೊಂದು ಮುಜುಗರ! ಹದಿಹರೆಯದ ಹುಡುಗ ಸ್ಟೈಲಾಗಿ ಸಿಗರೇಟು ಸೇದುವುದು, "ಐ ಲವ್‌ಯೂ" ಹಾಡುವುದು, ಪ್ರಾಥಮಿಕ ತರಗತಿಯ ಮಕ್ಕಳು "ಜಾತಿ ಧರ್ಮ"ದ ಮಾತನಾಡುವುದು ಇದಕ್ಕೆಲ್ಲ ಯಾರು ಹೊಣೆ? ಎನಿಸುತ್ತದೆ. ಹಚ್ಚ ಹಸಿರಿನ ಕಾಡೆಲ್ಲಾ ಕಡಿದು, ಸಿಮೆಂಟಿನ ಕಟ್ಟಡಗಳ ಕಾಡೇ ಬೆಳೆದು ಗಿಜಿಗುಟ್ಟುವ ಜನ ಸಮೂಹದ ಪಟ್ಟಣಗಳಲ್ಲಿ ಪುಟ್ಟದೊಂದು ಗೂಡಿನಂತಹ ಮನೆಯಲ್ಲಿ ಬೆಳೆಯುತ್ತಿರುವ ಎಳೆಯರಿಗೆ ಪ್ರಕೃತಿ ನೀಡುವ ಸುಂದರ ಪರಿಸರ, ಪ್ರಾಣಿ, ಪಕ್ಷಿವರ್ಗ 'ಜೂ'ಗಳಲ್ಲಿ ಇಲ್ಲವೇ ಚಿತ್ರಪಟಗಳಲ್ಲಿ ಮಾತ್ರ ನೋಡಲು ಸಾಧ್ಯ.

ಈ ದಿಸೆಯಲ್ಲಿ ಹಳ್ಳಿಯ ಮಕ್ಕಳು ಹೆಚ್ಚು ಪುಣ್ಯವಂತರು. ಹಸಿರು ಬನ, ಹರಿಯುವ ನದಿ, ಜೀವಂತ ಖಗ ಮೃಗಗಳನ್ನು ನೋಡುತ್ತಾ ಪ್ರಕೃತಿಯೊಂದಿಗೇ ಒಡನಾಡುತ್ತಾರೆ. ಮಳೆಗಾಲದಲ್ಲಿ ಉಕ್ಕಿ ಹರಿವ ಹೊಳೆ ಹಳ್ಳ, ತುಂಬಿ ನಿಂತ ಕೆರೆಕೊಳ್ಳ, ವಟಗುಟ್ಟುವ ಕಪ್ಪೆ, ಚೀರಾಡುವ ಜೀರುಂಡೆ, ಈಜಾಡುವ ಮೀನು, ಚಳಿಗಾಲದಲ್ಲಿ ಗದಗುಟ್ಟಿಸುವ ಚಳಿ, ಮುತ್ತಿನ ಮಾಲೆಯಂತಹ ಮಂಜಿನ ಹನಿ, ವಸಂತಕಾಲ ಬಂದಾಗ ಹಕ್ಕಿಗಳ ಇಂಚರ,

ಕೋಗಿಲೆಯಗಾನ, ಸುಡುಬಿಸಿಲಿನ ಮಧ್ಯಾಹ್ನದಲ್ಲಿ ಮನೆಯಂಗಳದ ಮಾವಿನ ಮರ ಬೀಸುವ ತಂಪು ಗಾಳಿ, ಅದರೊಂದಿಗೆ ಜೀಕುವ ಜೋಕಾಲಿ, ಆಹಾ, ಯಾವುದೇ ಕೃತಕತೆಯ ಸೋಂಕಿಲ್ಲದೆ ಆಡಿ, ಹಾಡಿ, ಕುಣಿದು, ಕುಪ್ಪಳಿಸಿ ಕಳೆಯುವ ಆ ಬಾಲ್ಯ ಎಷ್ಟೊಂದು ಮಧುರ! ಜೊತೆಗೆ ತುಂಬು ವಾತ್ಸಲ್ಯ ತೋರುವ ಅಜ್ಜ, ಅಜ್ಜಿ, ಮಾವ, ಅತ್ತೆ, ದೊಡ್ಡಪ್ಪ, ಚಿಕ್ಕಪ್ಪ ಇವರೆಲ್ಲರ ಮಾರ್ಗದರ್ಶನ, ಹಿತವಚನ,... ಇವೆಲ್ಲ ಸುಂದರ ಭವಿಷ್ಯಕ್ಕೆ ಪೂರಕ. ಆದರೆ ಆಧುನಿಕತೆಯ ಈ ಯುಗದಲ್ಲಿ ಎಷ್ಟು ಮಕ್ಕಳಿಗೆ ಈ ಭಾಗ್ಯ ದೊರೆಯಬಹುದು?

ಏನಿದ್ದರೂ ಬೆಳೆಯುತ್ತಿರುವ ಎಳೆಮನಸ್ಸುಗಳನ್ನು ಸಾಧ್ಯವಾದಷ್ಟು ತಿಳಿಯಾಗಿ, ಸ್ವಚ್ಛವಾಗಿ ರೂಪುಗೊಳಿಸುವುದು ನಮ್ಮ ಕರ್ತವ್ಯ. ನೀತಿ ಬೋಧಕ ಕತೆ, ಹಾಡುಗಳನ್ನು ಕಲಿಸುವುದು, ಉತ್ತಮ ಪುಸ್ತಕಗಳನ್ನು ಓದಲು ಒಡಗಿಸುವುದು, ದೂರದರ್ಶನದ ಉಪಯುಕ್ತ ಕಾರ್ಯಕ್ರಮಗಳನ್ನು ಮಾತ್ರ ನೋಡುವ ಅಭ್ಯಾಸ ಮಾಡಿಸುವುದು, ಕ್ರೀಡೆ, ಕಲೆ, ವ್ಯಾಯಾಮ ಗಳಲ್ಲಿ ಆಸಕ್ತಿ ಮೂಡಿಸುವುದು, ಸಣ್ಣ, ದೊಡ್ಡ ಪ್ರವಾಸಗಳಿಗೆ ಕರೆದೊಯ್ಯು ವುದು, ಒಳ್ಳೆಯ ಒಡನಾಟ ಬೆಳೆಸಲು ಪ್ರೋತ್ಸಾಹಿಸುವುದು ಇವೆಲ್ಲ ಮಕ್ಕಳ ಮನೋವಿಕಸನಕ್ಕೆ ಸಹಕಾರಿಯಾಗುತ್ತವೆ. ಸಾಧ್ಯವಿರುವ ಸಂದರ್ಭಗಳ ಲ್ಲೆಲ್ಲ ಒಳ್ಳೆಯ ವಿಚಾರಗಳನ್ನು ಘೋಷಣೆಗೆ ಸೀಮಿತಗೊಳಿಸದೆ ರಚನಾತ್ಮಕ ವಾಗಿ ಕಾರ್ಯವೆಸಗುವ ಅವಕಾಶ ಕಲ್ಪಿಸಬೇಕು. ಉದಾ:- ಗಿಡನೆಡುವುದು, ಪರಿಸರ ಸ್ವಚ್ಛಗೊಳಿಸುವುದು, ಪ್ರಾಣಿ ದಯೆ, ಸಹಕಾರ ಬುದ್ಧಿ, ಸಾಹಸ ಪ್ರವೃತ್ತಿ, ಇತ್ಯಾದಿ. ನಮ್ಮ ಮುಂದಿನ ಪೀಳಿಗೆ ನಮ್ಮನ್ನು ಶಪಿಸುವಂತಾಗ ಬಾರದಲ್ಲವೆ? ನಮ್ಮ ಮಕ್ಕಳ ಬಾಳು ಬಂಗಾರವಾಗಲೆಂದು ಎಲ್ಲರೂ ಬಯಸುತ್ತೇವೆ. ಅದರ ಭದ್ರ ಬುನಾದಿಗಾಗಿ ಬಾಲ್ಯದಲ್ಲಿ ಸುಂದರ ಹಂದರವು ರೂಪುಗೊಳ್ಳುವತಂಹ ಪರಿಸರ ಕಲ್ಪಿಸಿಕೊಡುವುದು ನಮ್ಮೆಲ್ಲರ ಕರ್ತವ್ಯ ತಾನೆ?

ಕಾರಂತರನ್ನು ಕಂಡದ್ದು

—ಇಂದಿರಾ ಹಾಲಂಬಿ

"ಯಾರು ಎಷ್ಟೆಂದು ಬಣ್ಣಿಸಿದರೂ ಕುರುಡರು ಆನೆಯನ್ನು ಕಂಡಂತೆ ಡಾ। ಶಿವರಾಮ ಕಾರಂತರ ಬಣ್ಣನೆ ಮಾಡಲು ಸಾಧ್ಯ ಆದುದರಿಂದ ಮನಸ್ಸೆಂಬ ಕನ್ನಡಿಗೆ ಒಂದಿಷ್ಟು ಹಿಗ್ಗುವ ಗುಣ ಕೊಟ್ಟು ಕಾದಂಬರೀ ಲೋಕದ ಆಗಸದಲ್ಲಿ ಅಲ್ಲಲ್ಲಿ ತೇಲಿ ಬಂದು ಕಾರಂತರ ಭವ್ಯ ವ್ಯಕ್ತಿತ್ವವನ್ನು ಕಣ್ಣಮುಂದೆ ಹಿಡಿದಿಟ್ಟುಕೊಂಡ ಕೆಲವೇ ಗಳಿಗೆಗಳು ಚಿರನೆನಪಾಗುವಂತೆ, ಚಲಿಸಿಹೋಗದಂತೆ ಮಾಡಬಾರದೇಕೆ?.... ಎಂದೆಣಿಸಿದಾಗ ಮೂಡಿದ ಲೇಖನವಿದು."

—ಸಂ.

ನಾನು ಆರನೇ ತರಗತಿಯಲ್ಲಿ ಕಲಿಯುತ್ತಿದ್ದಾಗ... ಸುಮಾರು 1945-46ನೇ ಇಸವಿಯಲ್ಲಿ ಕಾರಂತರ ಸಣ್ಣ ಕತೆಗಳೆರಡನ್ನು ಓದಿದ ನೆನಪು ಈಗಲೂ ಇದೆ. ಒಂದು ಕತೆ 'ಹಾವು' ಇನ್ನೊಂದು 'ಹಸಿವು'. ಅದರಲ್ಲಿ 'ಹಾವು' ಎನ್ನುವ ಕತೆ ಆಗಿನ ನನ್ನ ಮನಸ್ಥಿತಿಗೆ ತುಂಬ ಹಿಡಿಸಿತು. ಆಗ ಅದರಲ್ಲಿ ನಾನು ಅರ್ಥಮಾಡಿಕೊಂಡ ವಿಷಯವೆಂದರೆ ತೋಟವನ್ನು ಚೆನ್ನಾಗಿ ಎಚ್ಚರಿಕೆಯಿಂದ ಬೆಳೆಸಿದಾಗ ಹಸಿರು ನಳನಳಿಸಿ ಸಂತೋಷವನ್ನುಂಟು ಮಾಡಿದ್ದು, ತೋಟದ ಕಡೆ ನಿರ್ಲಕ್ಷ್ಯ ತಾಳಿ ದೂರ ಹೋದಾಗ ಅಲ್ಲೆಲ್ಲಾ ಮುಳ್ಳು ಕಂಟಿ ಬೆಳೆದು ಕೊನೆಗೆ ಹೆಜ್ಜೆಯಿರಿಸಲೂ ಕಷ್ಟಸಾಧ್ಯವಾದುದಲ್ಲದೆ ಹಾವು ತಲೆಯೆತ್ತಿ ಕಚ್ಚಲು ಮುಂದಾದದ್ದು ಇಷ್ಟೆ! ನಾನು ಕೂಡಾ ಆಗ ಮನೆಯ ಬಳಿ ಪುಟ್ಟ ಹೂತೋಟ ಬೆಳೆಸುವ ಹುರುಪಿನಲ್ಲಿದ್ದುದರಿಂದ ಈ ಕತೆ ಬಹಳ ಹಿಡಿಸಿತ್ತು. ಆದರೆ ಕತೆಯ ವಸ್ತು, ಅದು ಸಂಕೇತಿಸುವ ಅರ್ಥ ಅಷ್ಟು ಮಾತ್ರ ಆಗಿರಲಾರದು ಎಂದು ಈಗ ಅನಿಸುತ್ತಿದೆ. ಅದೇ ವರ್ಷ ಬೇಸಿಗೆಯಲ್ಲಿ ಉಡುಪಿಯಲ್ಲಿ ಯಾವುದೋ ನಾಟಕ ಕಂಪೆನಿ ಬಂದಿದ್ದಾಗ "ಕಾರಂತರು ಅಲ್ಲೇನೋ ಸಿದ್ಧತೆ ಮಾಡಿ ಕೊಡ್ತಾ ಇದ್ದಾರೆ" ಎಂದು ನನ್ನ ತಂದೆಯವರು ಹೇಳಿದ್ದನ್ನು ಕೇಳಿ ನಾವು ಕೆಲವು ಶಾಲಾ ಬಾಲಕಿಯರು

ಇಣುಕಲು ಹೋದದ್ದು ನೆನಪು. ಆದರೆ ಅಲ್ಲಿ ನಾವು ಹೋದಾಗ ಬಣ್ಣದ ಪರದೆ ಮಾತ್ರ ಕಂಡು ಬಂದುದರಿಂದ ನಿರಾಶೆಯೇ ಆಯಿತು.

ನಾನು ಎಂಟನೇ ತರಗತಿ ಮುಗಿಸುತ್ತಿದ್ದಾಗ ಕಾರಂತರ 'ಮರಳಿ ಮಣ್ಣಿಗೆ' 'ಚೋಮನ ದುಡಿ' 'ಬೆಟ್ಟದ ಜೀವ' ಕಾದಂಬರಿಗಳನ್ನೋದಿದೆ. 'ಮರಳಿ ಮಣ್ಣಿಗೆ' ಬೇರೆ ಬೇರೆ ಭಾಗಗಳಾಗಿ ದೊರಕಿತ್ತು. ಆ ವಯಸ್ಸಿನಲ್ಲಿ 'ಚೋಮನ ದುಡಿ' ಓದಿದಾಗ ಚೋಮನ ಮೇಲೆ ಕರುಣೆ, ಅವನ ಮಗಳ ಮೇಲೆ ಜುಗುಪ್ಸೆ, ಕ್ರೋಧ ಉಂಟಾಗಿದ್ದವು. 'ಬೆಟ್ಟದ ಜೀವ'ದ ಗೋಪಾಲಯ್ಯನವರ ಮೇಲೆ ಗೌರವ ಭಾವನೆ ಉದಯಿಸಿದರೆ 'ಮರಳಿ ಮಣ್ಣಿಗೆ' ನನ್ನ ಎಲ್ಲ ವಿಧದ ಭಾವನೆಗಳನ್ನು, ಆಲೋಚನೆಗಳನ್ನು ಬಡಿದೆಬ್ಬಿಸಿ ಸಂಪೂರ್ಣವಾಗಿ ಆ ಬರವಣಿಗೆಗೆ ಶರಣಾಗಿಸಿತು. 'ಸರಸಮ್ಮನ ಸಮಾಧಿ' ಮಾತ್ರ ಆಗ ಅರ್ಥ ಮಾಡಿಕೊಳ್ಳಲಾಗಲಿಲ್ಲ.

'ಮರಳಿ ಮಣ್ಣಿಗೆ'ಯ ರಾಮೈತಾಳರನ್ನು, ಸರಸೋತಿ, ಪಾರೋತಿಯನ್ನು, ಲಚ್ಚನನ್ನು, ನಾಗವೇಣಿಯನ್ನು ಎಂದಿಗಾದರೂ ಮರೆಯಲು ಸಾಧ್ಯವೇ? ಆ ಮೇಲಿನ ಈ ಹಲವು ವರ್ಷಗಳಲ್ಲಿ ಇದೇ ಕಾದಂಬರಿಯನ್ನು ಮತ್ತೆ ಕೆಲವು ಬಾರಿ ನಾನು ಓದಿದ್ದೇನೆ. ಆ ಸಮುದ್ರ ಕರಾವಳಿಯ ಬಣ್ಣನೆ, ಜನರ ವರ್ತನೆ, ಜಾತ್ರೆಗಳು, ಮದುವೆಗಳು, ಹಪ್ಪಳ, ಸಂಡಿಗೆ, ಮಳೆಗಾಲದ ಅಬ್ಬರ, ಬೇಸಾಯದ ಬವಣೆ, ಪರಸ್ಪರ ಒಲವು, ಮುನಿಸು, ರೋಷ, ದ್ವೇಷ, ಮತ್ಸರ, ಮಮಕಾರ ಇವನ್ನೆಲ್ಲ ನಾವೇ ಆ ಲೋಕದೊಳಹೊಕ್ಕು ಅನುಭವಿಸುತ್ತಿರುವಂತೆ, ಆ ಲೋಕದ ಸೃಷ್ಟಿಕರ್ತನಾಗಿ ಕಾರಂತರು ನಮ್ಮ ಕಣ್ಣೆದುರು ತುಂಬುತ್ತಾರೆ. ಕಾದಂಬರಿಯ ಆ ಪಾತ್ರಗಳು ಈಗಲೂ ಅಲ್ಲೇ ಆ ನೆಲದಲ್ಲಿ ಆಡಿ, ಓಡಿ, ಮಾತನಾಡಿಕೊಂಡಿರುತ್ತಾರೆಂಬ ಕಲ್ಪನೆ ಓದುಗರಲ್ಲಿ ಉಂಟು ಮಾಡಿದ್ದು ಕಾರಂತರ ಈ ಬೃಹತ್ ಕಾದಂಬರಿ. ಇದರೊಂದಿಗೇ ಅವರ ಬೃಹತ್ ವ್ಯಕ್ತಿತ್ವವನ್ನು ಕಲ್ಪಿಸಲು ಸ್ವಲ್ಪವೇ ಕಲ್ಪನಾಶಕ್ತಿ ಸಾಕಾಗುತ್ತದೆ. 'ಮರಳಿ ಮಣ್ಣಿಗೆ' ಕಂಡ ಕಣ್ಣು ಕಾರಂತರನ್ನು ಕಂಡಂತೆ ಧನ್ಯತಾ ಭಾವ ತಾಳುತ್ತದೆ.

ಮುಂದೆ ಕೆಲವು ವರ್ಷಗಳ ಬಳಿಕ ನಾನು ಹಳ್ಳಿಯೂರು ಒಂದರಲ್ಲಿ ಶಾಲಾ ಶಿಕ್ಷಕಿಯಾದೆ. ಆಗ ಕಾರಂತರು ಚಿಕ್ಕ ಮಕ್ಕಳಿಗಾಗಿ ಬರೆದ ಸುಂದರವಾದ ಚಿತ್ರಸಹಿತ ಹೊತ್ತಗೆಗಳು, ವಿಜ್ಞಾನ ವಿಷಯದ ಪುಸ್ತಕಗಳು, 'ಕಿಸಾಗೋತಮಿ'ಯಂಥ ನಾಟಕ, ರೂಪಕಗಳು ಅಪರೂಪಕ್ಕಾದರೂ ನಮಗೆ ನೋಡಲು ದೊರೆತು ಕಾರಂತರ ಬಹುರೂಪಿ ಪ್ರತಿಭೆಯನ್ನು ಮನದಲ್ಲಿ ಅಚ್ಚೊತ್ತಿಸಿದವು.

ಆಗಲೇ ಅವರ ಕಾದಂಬರಿ 'ಮುಗಿದ ಯುದ್ಧ' ಓದಿದೆ. ಅಧ್ಯಾಪಕ ಜೀವನದಲ್ಲಿ ಕಥಾನಾಯಕನ ತನ್ಮಯತೆ, ಅವನ ಏಳು ಬೀಳುಗಳು ಕೊನೆಯಲ್ಲಿ ಜೀವಚ್ಛವದಂತಾದ ನಿರ್ಲಿಪ್ತತೆ ಮನಸೂರೆಗೊಂಡವು. ಆಗ ನಾನು ಕಾರಂತರ ಕಾದಂಬರಿಗಳ ಕುರಿತು ಬೇರೆ ಯಾರಾದರೂ ವಿದ್ಯಾವಂತರೊಡನೆ ಮಾತನಾಡಿದಾಗ ಕೆಲವರಿಂದ ಬರುತ್ತಿದ್ದ ಉತ್ತರ ವಿಚಿತ್ರವಾಗಿತ್ತು. "ಕಾರಂತರ ಕಾದಂಬರಿಗಳಲ್ಲಿ ಬರೀ ವರ್ಣನೆಗಳೇ ಇರುತ್ತವೆ. ಕಾಡು, ಗುಡ್ಡ, ನದಿ, ಜಲಪಾತ, ನೆಲ, ಆಕಾಶ, ಪಕ್ಷಿ, ಪ್ರಾಣಿ ಇದನ್ನೇ ಬಣ್ಣಿಸುವುದರಲ್ಲಿ ಕತೆ ಏನೂ ಮುಂದುವರಿಯುವುದಿಲ್ಲ." ಎಂಬ ಮಾತು. ಇಂಥವರ ಓದಿನ ಅಭಿರುಚಿ ಯಾವ ರೀತಿಯದೆಂಬುದು ಕೆಲವಂಶ ಆಗಲೇ ಅರ್ಥವಾಗಿದ್ದರೆ ಕಾರಂತರ ಆ ರೀತಿಯ ಪ್ರಕೃತಿ ವರ್ಣನೆಗೆ ಕಾರಣ ಅವರಿಗಿರುವ ಮೇರೆಯಿಲ್ಲದ ಪರಿಸರ ಪ್ರೇಮವೇ ಇರಬೇಕು ಎಂದು ಈಗ ಮನವರಿಕೆಯಾಗುತ್ತಿದೆ.

ಈ ನಡುವೆ ಉಡುಪಿಯ ಯಕ್ಷಗಾನ ಕೇಂದ್ರದಲ್ಲಿ ಶಿಕ್ಷಣ ನೀಡುವುದಕ್ಕಾಗಿ ಕಾರಂತರೇ ಬರುತ್ತಿದ್ದಾರೆ, ಭಾಗವತರಿಗೆ ರಾಗಗಳನ್ನು ತಿದ್ದಿ ತಿದ್ದಿ ಹೇಳಿ ಕೊಡುತ್ತಾರೆ, ನೃತ್ಯಕ್ಕೆ ತಾವೇ ಗೆಜ್ಜೆ ಕಟ್ಟಿ ಕುಣಿದು ತೋರಿಸುತ್ತಾರೆ ಎಂಬುದನ್ನೆಲ್ಲ ಕೇಳಿ ಅವರನ್ನು ಕಾಣಬೇಕೆಂಬ ಆಸೆಯಿಂದ ಅತ್ತ ಹೋದಾಗಲೂ ನಮ್ಮಾಸೆ ಫಲಿಸಲಿಲ್ಲ.

ಕುಂದಾಪುರ ತಾಲೂಕಿನ ಹಳ್ಳಿಮೂಲೆಯ ಕೆಲವು ಶಾಲೆಗಳಲ್ಲಿ ಬಹಳ ವಿಜೃಂಭಣೆಯಿಂದ ವಾರ್ಷಿಕೋತ್ಸವಗಳು ಆದಾಗ ಅಧ್ಯಕ್ಷ ಸ್ಥಾನಕ್ಕೆ ಕಾರಂತರನ್ನು ಕರೆಸಬೇಕು ಎಂದು ಎಷ್ಟೋ ಮಂದಿಯ ಅಭಿಪ್ರಾಯವಾದರೆ ಕೆಲವರ ಜಬರ್ದಿನ ಉತ್ತರ ಹೀಗೆ ಬರುತ್ತಿತ್ತು. "ಯಾಕೆ? ... ಅವರನ್ನು

ಕರೆಸಿ ಅವರ ಬಾಯಿಂದ ಬೈಸಿಕೊಂಬುದಕ್ಕಾ? ಸ್ಟೇಜಿನ ಮೇಲೇ ಸರೀ ಹೇಳಿ ಬಿಡ್ತ್ರ.... ಚೂರೂ ಬಾಕಿ ಬಿಡೂದಿಲ್ಲೆ..." ಎಂದು. ನಿಜ, ಕಾಯಿಲೆ ಹಿಡಿದವನಿಗೆ ಶಸ್ತ್ರ ಚಿಕಿತ್ಸೆ ಎಷ್ಟು ಅವಶ್ಯ ಎಂಬುದನ್ನು ತಜ್ಞ ವೈದ್ಯರು ತೀರ್ಮಾನಿಸಬೇಕು. ಅಂತೆಯೇ ಮನಸ್ಸಿನ ಜಡತೆಗೆ ಔಷಧ ಎಲ್ಲಿ, ಎಷ್ಟು, ಏನೆಂಬುದನ್ನು ಕಾರಂತರು ತಿಳಿದಂತೆ ಎಲ್ಲರಿಗೂ ತಿಳಿಯುವ ಯೋಗ್ಯತೆ ಹೇಗೆ ಬಂದೀತು? ಆಷಾಢಭೂತಿತನ, ಪರಸ್ಪರ ಮುಖಸ್ತುತಿ ಇವುಗಳೇ ಪ್ರಧಾನವಾಗಿರುವಾಗ ಬೈಗಳಿನ ಪ್ರಯೋಜನ ಅರ್ಥವಾಗುವಷ್ಟರಲ್ಲಿ ಕಾಲ ಮೀರಿರುತ್ತದೆ, ಅಲ್ಲವೆ?

ಪುಟ್ಟ ಮಕ್ಕಳ ಶಿಕ್ಷಣದ ಬಗ್ಗೆ ಕಾರಂತರ ಕಾಳಜಿ ಎಲ್ಲರಿಗೂ ಗೊತ್ತು. ಈಗಿನ ಪ್ರಾಥಮಿಕ ಶಿಕ್ಷಣ ಪದ್ಧತಿ ಶಿಕ್ಷೆ ಎಂಬುದನ್ನು ಅರ್ಥಮಾಡಿಕೊಂಡು ಮನನೊಂದವರಲ್ಲಿ ಅವರೇ ಮೊದಲಿಗರು. ಮಗುವಿನಂತಹ ನಿರ್ಮಲ ಹೃದಯ, ಸದಾ ಜಾಗೃತ ಸ್ವಭಾವದ ಕುತೂಹಲಿ ಕಾರಂತರಲ್ಲದೆ ಈ ವಯಸ್ಸಿನಲ್ಲೂ ಹೀಗಿರಲು ಮತ್ತಾರಿಗೆ ಸಾಧ್ಯ? ಕಡಲ ಕರೆಯ ಭಾರ್ಗವ ನೆಂದು ಕರೆಯಲ್ಪಟ್ಟ ಧೀಮಂತ, ಸತ್ಯನಿಷ್ಠರಾದ ಜ್ಞಾನನಿಧಿ ಕಾರಂತರ ಕೌಟುಂಬಿಕ ಜೀವನವನ್ನು ವಿಧಿ–ಕಾರಂತರು ನಂಬದೇ ಇರುವ ವಿಧಿ–ಸುಖ ವಾಗಿರಲು ಬಿಡಲಿಲ್ಲವೆಂದರೆ ಅಪಚಾರವಾಗಲಿಕ್ಕಿಲ್ಲವೆಂದು ತಿಳಿಯುತ್ತೇನೆ.

ಕಾರಂತರು ಪಡೆದ ಪ್ರಶಸ್ತಿ, ಬಿರುದು, ಸನ್ಮಾನಗಳು ಒಂದೇ ಎರಡೆ? ಅವರನ್ನೇ ಅರಸಿಕೊಂಡು ಬಂದ ಅಂತಹ ಅಲಂಕಾರಗಳಿಗೆ ಅವರು ಸಂಪೂರ್ಣ ಅಲಿಪ್ತರು ಎಂದ ಮೇಲೆ ಆ ಎಲ್ಲ ಸನ್ಮಾನ, ಪದವಿ, ಪ್ರತಿಷ್ಠೆಗಳಿ ಗಿಂತ ಅವರೇ ಎಷ್ಟೋ ಪಾಲು ಹೆಚ್ಚು ಶ್ರೇಷ್ಠರು.

ಪದ್ಮಭೂಷಣ, ಜ್ಞಾನ ಪೀಠ ಸಂಮಾನಿತ, ಡಾ. ಶಿವರಾಮ ಕಾರಂತ ರನ್ನು–ಮಕ್ಕಳೆಲ್ಲರ ಅಕ್ಕರೆಯ ಕಾರಂತಜ್ಜನನ್ನು ಐದಾರು ವರ್ಷಗಳ ಹಿಂದೊಮ್ಮೆ ಉಡುಪಿಯಲ್ಲಿ ಹತ್ತಿರದಿಂದ ಕಂಡು ಅವರ ಭಾಷಣ ಕೇಳಿ ಪುಲಕಿತಳಾಗಿದ್ದೆ. ಆದರೆ ನಾನೇ ಸ್ವತಃ ಅವರ ಬಳಿ ಹೋಗಿ ನೇರವಾಗಿ ಅವರೊಡನೆ ಸಂಭಾಷಿಸುವ ಒಂದು ಸಂದರ್ಭ ದೊರಕೀತೆಂದು ಅಂದು ಕೊಂಡಿರಲಿಲ್ಲ.

ಕೆಲವು ತಿಂಗಳುಗಳ ಹಿಂದೆ ಕೋಟ ಪದವಿ ಪೂರ್ವ ಕಾಲೇಜಿನ ಒಂದು ಕಾರ್ಯಕ್ರಮಕ್ಕಾಗಿ ಹೊರಟಿದ್ದಾಗ ಎಷ್ಟೋ ಸಲ ಅಂದುಕೊಂಡಂತೆಯೇ 'ಸುಹಾಸ' ಎಂಬ ಮನೆ, ಅಲ್ಲಿರಬಹುದಾದ- ಕೆಲವೊಮ್ಮೆ ಅಲ್ಲಿರದೇ ಇರುವ- ಆ ಮಹಾನ್ ಚಿಂತಕನ ಸಂದರ್ಶನದ ಬಗ್ಗೆ ಕನವರಿಸಿಕೊಂಡೆ. ಇಂತಹ ಕನವರಿಕೆ ಹಿಂದೆ ಅದೆಷ್ಟೋ ಬಾರಿ ವಿಫಲವಾಗಿತ್ತು. ಆದರೆ ಈ ಸಲ! ಮಧ್ಯಾಹ್ನ ಎರಡು ಗಂಟೆಯ ಹೊತ್ತಿಗೆ ರಿಕ್ಷಾದಲ್ಲಿ ಹೋಗಿ ಗೇಟು ತೆರೆದು ಬಾಗಿಲ ಬಳಿ ಬಂದಾಗ ಎದುರಾದ ನಾಯಿಯಿಂದ ಮತ್ತೆ ಹೆಜ್ಜೆ ಹಿಂಜರಿಕೆ. ಅಷ್ಟರಲ್ಲಿ ಓರ್ವ ಹದಿಹರೆಯದವ ಹೊರಬಂದು ವಿಚಾರಿಸಿದ. "ಏನು?" ಎಂದು.

"ಕಾರಂತರು ಇದ್ದಾರಾ?"

"ಹೌದು"

"ನೋಡಲು ಸಿಗ್ತಾರಾ?... ವಿಶ್ರಾಂತಿ ಪಡೆಯುತ್ತಿದ್ದಾರಾ?...."

"ಇಲ್ಲ... ಹೇಳ್ತೇನೆ..."

ಮಹಡಿಯೇರಿ ಮೇಲೆ ಹೋದ ಆತ. ಕ್ಷಣ ಬಿಟ್ಟು ಶ್ವೇತ ವಸನ ಧಾರಿಯಾಗಿ ಸಗ್ಗದಿಂದ ಧರೆಗಿಳಿದು ಬಂದಂತೆ ನನ್ನ ಕಣ್ಣಿಗೆ ಕಂಡ ಕಾರಂತರು ಮೆಟ್ಟಲಿಳಿದು ಬಂದು ನನ್ನ ವಂದನೆ ಸ್ವೀಕರಿಸಿ ಹತ್ತಿರದ ಆಸನದಲ್ಲೇ ತಾನೂ ಕುಳಿತು, ನನ್ನನ್ನು ಮೊದಲೇ ಕುಳ್ಳಿರಲು ಹೇಳಿ ಹತ್ತು ನಿಮಿಷ ಗಳಷ್ಟು ಕಾಲ ಆತ್ಮೀಯವಾಗಿ ಮಾತನಾಡಿದರು. ನಾನು ಕೃತಾರ್ಥತೆಯಿಂದ ಬಾಗಿ ವಂದಿಸಿ ಹೊರಡುತ್ತಿರುವಾಗ ಸ್ವಲ್ಪ ತಡೆಯಲು ಹೇಳಿ ಮತ್ತೊಮ್ಮೆ ಮಹಡಿ ಏರಿ ಹೋಗಿ ಎರಡು ಪುಸ್ತಕಗಳನ್ನು ತಂದು ತನ್ನ ಹಸ್ತಾಕ್ಷರ ದೊಂದಿಗೆ ನನಗಿತ್ತರು. 'ಗೆದ್ದ ದೊಡ್ಡಸ್ತಿಕೆ' ಕಾದಂಬರಿ ಹಾಗೂ ನಾನು ಕನ್ನಡ ಶಿಕ್ಷಕಿಯೆಂದು ಗುರುತಿಸಿದ್ದಕ್ಕೆ 'ಸಿರಿಗನ್ನಡ ಅರ್ಥಕೋಶ' ಇವೇ ಆ ಪುಸ್ತಕಗಳು.

ಇಂತಹ ನಮ್ಮ ಕಾರಂತರು ತೊಂಬತ್ತು ಮೀರಿದಂತೆ ನೂರನ್ನೂ ದಾಟಿ ಮತ್ತೂ ಹಲವು ಹತ್ತು ಕಾಲ ಬಾಳಿ ಕನ್ನಡ ನಾಡನ್ನು ಬೆಳಗಿಸಲಿ ಎಂಬುದೇ ಎಲ್ಲರ ಮನದಾಳದ ಹಾರೈಕೆ.

ವಿವಿಧ ವಿಷಯಗಳು

—'ಗಿರಿವಾಸಿನಿ'

"ಕಾಲ ಬದಲಾಗಿದೆ, ಮೌಲ್ಯಗಳು ಏರುಪೇರಾಗಿವೆ. ಆದರೂ ಸುಖ, ದುಃಖ, ಅಳು, ನಗು, ನೋವು, ನಲಿವುಗಳೆಂಬ ಮಾನವ ಸಹಜ ಗುಣಗಳು ಬದಲಾಗುವುದಿಲ್ಲವಷ್ಟೆ? ನೋವನ್ನು ಕಳೆದು, ನಲಿವನ್ನು ಹೆಚ್ಚಿಸುವ ಸದ್ಗುಣಗಳು ಎಲ್ಲರಲ್ಲೂ ಬೆಳೆದು ಬರಲೆಂದು ಹಾರೈಸುತ್ತಾ ಅದಕ್ಕಾಗಿ ಯಥಾಶಕ್ತಿ ಯತ್ನಿಸಬೇಕಾಗಿದೆ.

—ಸಂ.

ವೈವಿಧ್ಯಮಯ ವಿಶಾಲ ಪ್ರಪಂಚದ ಕಿರಿಯ ಪ್ರದೇಶವೊಂದರಲ್ಲಿ ಜೀವಿಸುವ ಸಾಮಾನ್ಯ ವ್ಯಕ್ತಿ ಕೂಡಾ ತನ್ನ ಅರಿವಿಗೆ ಬರುವ ಅನೇಕ ವಿಷಯಗಳ ಕುರಿತು ಅಭಿಪ್ರಾಯ ವ್ಯಕ್ತಪಡಿಸಲು ಅರ್ಹತೆ ಹೊಂದಿರುವುದರಲ್ಲಿ ಅನುಮಾನವಿಲ್ಲ. ಹಿಂದಿನ, ಇಂದಿನ, ಮುಂದಿನ ವಿಷಯಗಳ, ಘಟನೆಗಳ, ಆಗುಹೋಗುಗಳ ಬಗ್ಗೆ ಮನಸ್ಸು ಯೋಚಿಸುತ್ತಲೇ ಇರುತ್ತದೆ; ತನ್ನದೇ ಆದ ವೇಗದಲ್ಲಿ, ತನ್ನದೇ ಆದ ಮಿತಿ ಹೊಂದಿದ ಮಟ್ಟದಲ್ಲಿ. ಮನೋವೇಗಕ್ಕೆ ಸರಿಯಾಗಿ ಮಾತಿನ ವೇಗವಿಲ್ಲ ಪುಣ್ಯಕ್ಕೆ. ಬರೆಹದ ವೇಗ, ಪ್ರಕಟಣೆಯ ಮಿತಿ ಮತ್ತೂ ಕಿರಿದು. ಮಾತಿನಲ್ಲೇನೋ ಮಹಿಳೆಯರು ಮುಂದೆನಿಸಿದರೂ ಕಾರ್ಯದಲ್ಲಿ, ಧೈರ್ಯದಲ್ಲಿ ಹಿಂದುಳಿದವರೆಂಬ ಹಣೆಪಟ್ಟಿ ಹೊತ್ತದ್ದನ್ನು ಇಳಿಸಿಕೊಳ್ಳಲು ಈಗೀಗ ಪ್ರಯತ್ನಿಸುತ್ತಾ ಜಯ ಗಳಿಸುತ್ತಿದ್ದಾರೆಂಬುದು ನಿರ್ವಿವಾದ ಮತ್ತು ನ್ಯಾಯೋಚಿತ. ಮಹಿಳೆಯರನ್ನು ಜೀವಚ್ಛವದಂತೆ ನಡೆಸಿಕೊಂಡ ಕಾಲದಿಂದ ಈಗಿನ ಸಮಾನತೆಯ ಯುಗಧರ್ಮಕ್ಕೆ ಮಾರ್ಪಾಡು ಹೊಂದುವಂತಾದದ್ದು ಸಾಮಾನ್ಯ ಸಾಧನೆಯಲ್ಲ. ಒಂದು ರೀತಿಯಿಂದ ಯೋಚಿಸಿದರೆ ಮಹಿಳೆಯರಿಗೆ ಉದ್ಯೋಗ ಮೀಸಲಾತಿಯನ್ನು ಕಡ್ಡಾಯಗೊಳಿಸಬೇಕಿತ್ತು; ಎಂದಿನಿಂದಲೂ ದಮನಕ್ಕೊಳಗಾದವರೆಂಬ ಕಾರಣಕ್ಕಾಗಿ. ಆದರೆ ಬಹುಶಃ ಇದನ್ನು ಅನೇಕ ಮಹಿಳೆಯರೇ ಇಷ್ಟ

ಪಡುವುದಿಲ್ಲವೆನಿಸುತ್ತದೆ. ಮೀಸಲಾತಿಗಿಂತ [ಜಾತ್ಯಾಧರಿತ ಸೇರಿ] ಸಮಾನತೆಯ ವ್ಯವಹಾರವೇ ಎಲ್ಲ ದೃಷ್ಟಿಯಲ್ಲೂ ಗೌರವಾರ್ಹ ನಿಜ. ಹೀಗಿದ್ದರೆ ಸ್ಪರ್ಧಾತ್ಮಕ ಮನೋಭಾವದೊಂದಿಗೆ ಪ್ರಗತಿಗೆ ಅವಕಾಶವಿರುತ್ತದೆ.

ಕೆಲವೇ ದಶಕಗಳ ಹಿಂದೆ ಶಾಲೆಯಲ್ಲಿ ತರಗತಿಯ ಮೂವತ್ತು ಮಕ್ಕಳಲ್ಲಿ ಕೇವಲ ಆರೇಳು ಮಂದಿ ಹುಡುಗಿಯರು ಇರುತ್ತಿದ್ದರು. ಇಂದು ನಾಲ್ವತ್ತು ಮಕ್ಕಳಿರುವಲ್ಲಿ ಇಪ್ಪತ್ತಕ್ಕಿಂತ ಹೆಚ್ಚು ಹುಡುಗಿಯರೇ ಇರುತ್ತಾರೆ. ಆಶ್ಚರ್ಯವೆಂಬಂತೆ ಹೆಚ್ಚಿನ ತರಗತಿಗಳಲ್ಲಿ ವಿದ್ಯಾರ್ಥಿನಿಯರೇ ಕಲಿಯುವಿಕೆಯಲ್ಲಿ ಪ್ರಥಮ, ದ್ವಿತೀಯ ಸ್ಥಾನ ಗಳಿಸುತ್ತಾರೆ. ಹೆತ್ತವರೂ ಕೂಡಾ ಹೆಚ್ಚಿನ ಸಂದರ್ಭಗಳಲ್ಲಿ ಹೆಣ್ಣು ಯಾ ಗಂಡು ಮಕ್ಕಳೆಂದು ಭೇದ ಭಾವದ ವರ್ತನೆ ತೋರುವುದಿಲ್ಲ-ಕೆಲವು ವಿಶೇಷ ಘಟನೆ, ಕೆಲವೇ ಪ್ರದೇಶದ ಆಚರಣೆಗಳನ್ನು ಹೊರತುಪಡಿಸಿ ಎಂಬುದನ್ನು ಇಲ್ಲಿ ಸೇರಿಸಬೇಕಾಗಿದೆ.

ದೇಶಕ್ಕೆ ಸ್ವಾತಂತ್ರ್ಯ ದೊರೆತ ಕಾಲದಲ್ಲಿ ನಾಲ್ವತ್ತು ಕೋಟಿಯೊಳಗೇ ಇದ್ದ ಜನಸಂಖ್ಯೆ ಈಗ ಎಂಭತ್ತೈದು ಕೋಟಿಯಾಗಿರುವುದು ಪ್ರಗತಿಗೆ ಮಾರಕವಾಗಿದೆ. ಆದರ ನಿಯಂತ್ರಣಕ್ಕೆ ನಾನಾ ಮಾರ್ಗಗಳನ್ನು ಭರದಿಂದ ಪ್ರಚಾರಗೊಳಿಸಲಾಗುತ್ತಿದೆ. ವೈದ್ಯಕೀಯ ಮತ್ತು ವಿಜ್ಞಾನದ ಹೊಸ ಹೊಸ ಆವಿಷ್ಕಾರ ವರವೋ ಅಥವಾ ಶಾಪವೋ ಎಂಬ ಜಿಜ್ಞಾಸೆ ಆಗಾಗ ಕೆಲವು ಬುದ್ಧಿಜೀವಿಗಳನ್ನು ಕಾಡುತ್ತಿದ್ದು ಅವರ ಪ್ರತಿಕ್ರಿಯೆಗಳು ಕೆಲವೊಮ್ಮೆ ಸಾಮಾನ್ಯ ಜನತೆಯನ್ನು ಕಂಗೆಡಿಸುತ್ತವೆ.

ಬಹಳ ಹಿಂದೆ ಓದಿದ ಒಂದು ಕತೆಯಲ್ಲಿ ಇದ್ದಂತೆ ಆಗ ಅಪರೂಪವಾಗಿದ್ದ ಕುಟುಂಬಯೋಜನೆಗೊಳಪಟ್ಟ ಒಬ್ಬಾಕೆ ತಾನೇನೋ ಮಾಡಬಾರದ ಪಾಪಕಾರ್ಯ ಮಾಡಿಬಿಟ್ಟೆ ಅದರ ಪರಿಣಾಮವಾಗಿ ತನ್ನ ಮೂವರು ಮಕ್ಕಳಲ್ಲಿ ಇಬ್ಬರಿಗೆ ಜ್ವರ ವಿಪರೀತವಾಗಿದ್ದು ತನಗೆ ಪ್ರಾಯಶ್ಚಿತ್ತವಾಗುತ್ತಾ ಇದೆ ಎಂದು ಕಂಗಾಲಾಗಿದ್ದಳು. ಆ ತಾಯಿ ಎಲ್ಲಿ? ರಾಜಾರೋಷವಾಗಿ ಕಾನೂನು ಬದ್ಧವಾಗಿರುವ ಗರ್ಭಪಾತಕ್ಕೆ ಮತ್ತೆ ಮತ್ತೆ ಹೊರಟು ನಿಲ್ಲುವ ಆಧುನಿಕ ಮಹಿಳೆಯೆಲ್ಲಿ? ಕಾಲಕ್ಕೆ ತಕ್ಕ ಬದಲಾವಣೆ ಮತ್ತು ಮನೋಧರ್ಮ. ಹನ್ನೆರಡರ ಹರೆಯದಲ್ಲಿ ವಿವಾಹಿತಳಾಗಿ ಬಸಿರು, ಬಾಣಂತನ

ಗಳಲ್ಲೇ ಬಾಳು ಮುಗಿಸಿ ಅನಿವಾರ್ಯತೆಯಿಂದ ಪ್ರಾಣಕ್ಕೆರವಾಗುತ್ತಿದ್ದ ಅಂದಿನ ಹೆಣ್ಣೇ ಪುಣ್ಯವಂತಳೆನ್ನಲು ಈಗಿನವರಿಗೇನೂ ಹುಚ್ಚು ಹಿಡಿದಿಲ್ಲ ಎಂಬುದನ್ನು ಒಪ್ಪಿಕೊಳ್ಳಲೇಬೇಕು. ಮತ್ತೊಂದು ಕತೆ ಓದಿದ್ದೆ. ತನ್ನ ಸ್ನಾನದ ಮನೆಯ ಗೋಡೆಯಲ್ಲಿ ಒಂದು ಬೆರಳು ತೂರುವಷ್ಟು ಕಿಂಡಿಯಿತ್ತೆಂದು ಮತ್ತೆ ಗೊತ್ತಾಗಿ ತಾನು ಅಲ್ಲಿಂದ ಹೊರಗಿನದೆಲ್ಲವನ್ನೂ ಕಂಡಂತೆ ಹೊರಗಿನಿಂದ ಯಾರಾದರೂ ದೃಷ್ಟಿಹಾಯಿಸಿರಬಹುದೆಂದು ಹೆದರಿ ಅತ್ತು ಅತ್ತು ಸುಸ್ತಾಗಿ ಆಫೀಸಿಗೆ ಹೋಗಿದ್ದ ಗಂಡನನ್ನು ಬರಮಾಡಿಸಿ ಕೊನೆಗೆ ಅವನಿಂದ ಪ್ರಾತ್ಯಕ್ಷಿಕೆ ಮಾಡಿಸಿ ಹಾಗೆ ನೋಡಲು ಸಾಧ್ಯವಿಲ್ಲವೆಂಬುದನ್ನು ಅರಿತದ್ದರಿಂದ ಮಾತ್ರ ಹುಚ್ಚಿಯಾಗದೆ ಉಳಿದದ್ದು. ಈಗ.... ಕ್ಯಾಬರೆ ಯುಗದಲ್ಲಿ....? ಅಂಥ ಕತೆಗಳಿಗೆ ಪೂರ್ಣ ವಿರಾಮ ಬೇಕು ತಾನೆ?

ಆದರೂ ನಮ್ಮ ಸಂಸ್ಕೃತಿ ದೊಡ್ಡದು. ವಿಶಾಲ ವಟವೃಕ್ಷದಂತಿರುವ ಇದರಡಿಯಲ್ಲಿ ಎಲ್ಲ ತರಹದ ಮಂದಿಯೂ ಸೇರಿರುತ್ತಾರೆ. ಇಂದಿನ ಸುಧಾರಣಾ ಯುಗದಲ್ಲಂತೂ ಸರ್ವಾಲಂಕಾರಭೂಷಿತೆಯರಾದ ವಿಧವೆಯರೂ ಇರುತ್ತಾರೆ; "ಬಳೆ, ಕುಂಕುಮ ನಮಗೇಕೆ ಬೇಕು? ಇದು ದಾಸ್ಯದ ಸಂಕೇತ" ಎಂದು ಕಳಚಿ ಬಿಡುವ ಸಧವೆಯರೂ ಇರುತ್ತಾರೆ. ಈ ಕಾಲಕ್ಕೆ, ಅವರವರ ಅಭಿಪ್ರಾಯಕ್ಕೆ ಎಲ್ಲವೂ ಸರಿ.

ಹಿಂದೆ ನಮ್ಮಜ್ಜಿ ಕಾಲದಲ್ಲಿ ಎಲ್ಲಾ ಬ್ರಾಹ್ಮಣರ ಮನೆಗಳಲ್ಲೂ ಮಡಿ ಜೋರು. ದನ, ಬೆಕ್ಕುಗಳನ್ನು ಮುಟ್ಟಿಸಿಕೊಳ್ಳಬಹುದಾದರೂ ಬ್ರಾಹ್ಮಣರಲ್ಲದವರನ್ನು ಮುಟ್ಟಿಸಿಕೊಳ್ಳಬಾರದು. ಶಾಲೆಗೆ ಹೋಗಿ ಬಂದವರು ತಮ್ಮ ಆ ಬಟ್ಟೆಗಳನ್ನೆಲ್ಲ ಬೇರೆಯಾಗಿ ಇರಿಸಿ ಬಟ್ಟೆ ಬದಲಿಸಲೇಬೇಕು. ಶಾಲೆಯ ಬಟ್ಟೆಗೂ ಅಸ್ಪೃಶ್ಯತೆ. ದೇವಾಲಯಗಳಲ್ಲಿ ಕೆಳ ಜಾತಿಯವರಿಗೆ ಪ್ರವೇಶವಿಲ್ಲವಾದುದರಿಂದ ಅವರು ಎಷ್ಟೋ ದೂರದಲ್ಲಿ ಕಾದು ನಿಂತು ಯಾರಾದರೂ ತಮ್ಮ ಹಣ್ಣು ಕಾಯಿಗಳನ್ನು ದೇವರಿಗೆ ಒಪ್ಪಿಸಿ ಪ್ರಸಾದ ತಂದು ಕೊಡಿರೆಂದು ಕಾಡಿ ಬೇಡಬೇಕು. ಛೇ! ಇದು ಮಾನವೀಯ

ಧರ್ಮವಲ್ಲ, ಕಲ್ಲಿನ ಪ್ರಾಕಾರದೊಳಗೆ ದೇವರು ಕಟ್ಟಿಹಾಕಲ್ಪಟ್ಟಿಲ್ಲ ಎಂಬು ದನ್ನು ವಿದ್ಯಾವಂತರೆಲ್ಲ ಈಗ ಅರ್ಥಮಾಡಿಕೊಳ್ಳುತ್ತಾರೆ. ಆದರೆ.... ಆಗ? ಹೆಚ್ಚೇಕೆ?.... ಕೆಲವೇ ವರ್ಷಗಳ ಹಿಂದೆ ದಲಿತ ಅಧ್ಯಾಪಕರ ತರಗತಿಗಳಲ್ಲಿ ತಮ್ಮ ಮಕ್ಕಳನ್ನು ಕುಳ್ಳಿರಲು ಬಿಡದೆ ತರಗತಿಯಾಚೆ ಕುಳಿತು ಬರೆಯಿರೆಂದು ಅಪ್ಪಣೆ ಮಾಡಿದ್ದ ಮಡಿವಂತ ಹೆತ್ತವರು ನನಗೆ ಗೊತ್ತು. ಅಂತೆಯೇ "ಅಯ್ಯೋ .. ವಿಧವೆಗೆ ಪ್ರಸಾದವಾಗಿ ಹೂ, ಕುಂಕುಮ ಕೊಟ್ಟದ್ದೇ?.... ಛೇ!.... ತಪ್ಪು ಮಾಡಿದೆ!" ಎನ್ನುತ್ತಿದ್ದ ವಿದ್ಯಾವಂತರೂ ಗೊತ್ತು.

ಎಲ್ಲ ಸಮಸ್ಯೆಗಳಿಗೂ ಪರಿಹಾರ ದೊರಕಿಸುವ ಶಕ್ತಿ ಜ್ಞಾನಮಾರ್ಗ ದಿಂದ ಮಾತ್ರ ದೊರೆಯುತ್ತದೆ. ಜ್ಞಾನಕ್ಕೆ ಮೊದಲ ಸೋಪಾನ ಶಾಲಾ ಶಿಕ್ಷಣ. ಶಿಕ್ಷಣವು ಜೀವನ ಶಿಕ್ಷಣವಾಗಿ ಪರಿವರ್ತಿತವಾಗಬೇಕು. ಉದ್ಯೋ ಗಕ್ಕಾಗಿ ಶಿಕ್ಷಣವಲ್ಲ, ಸಾವು ಬದುಕಿನ ನಡುವಿನ ಅವಧಿ ಸಾರ್ಥಕಗೊಳಿಸಿ ಕೊಳ್ಳುವ ಜೀವನ ಶಿಕ್ಷಣ ಬೇಕು. ಸಾಮಾನ್ಯ ಜ್ಞಾನ [ನೀತಿ ಶಿಕ್ಷಣ ಸೇರಿ] ಪಡೆದ ನಂತರ ವೃತ್ತಿ ಮೂಲವಾದ ಪರಿಣತಿಗಳು ಮನುಷ್ಯನನ್ನು ಸ್ವಾವ ಲಂಬಿಯಾಗಿಸಲು ಸಹಕರಿಸುವ ರೀತಿಯಲ್ಲಿ ಹೆಚ್ಚಿನ ಶಿಕ್ಷಣದ ರೂಪದಲ್ಲಿ ಲಭ್ಯವಾಗುವಂತಿರಬೇಕು; ಅವರವರ ಆಸಕ್ತಿಗೆ ಸರಿಯಾಗಿ ಆಯಾಯಾ ವಿಷಯಗಳಲ್ಲಿ ಮುಂದುವರಿಯುವಂತೆ. ಸ್ತ್ರೀ, ಪುರುಷರೆಂಬ, ಬಡವ, ಬಲ್ಲಿದರೆಂಬ, ಆ ಜಾತಿ, ಈ ಧರ್ಮ ಎಂಬ ಭೇದವಿಲ್ಲದಂತೆ ಅರ್ಹತೆಗೆ ಸರಿಯಾದ ಅವಕಾಶ ಒದಗುತ್ತಿರಬೇಕು. ಲಕ್ಷರೂಪಾಯಿ ಲಂಚಕೊಟ್ಟು ಉದ್ಯೋಗ ಪಡೆದಾತ ಲಂಚಕ್ಕೆ ಅಲ್ಲಿಂದಲೇ ಬೀಜಾರ್ಪಣೆ ಮಾಡುತ್ತಾನೆ. ಅರ್ಹತೆ ಕಡಿಮೆ ಇದ್ದು ಮೀಸಲಾತಿಯ ಬಲದಿಂದ ನೌಕರಿಗೆ ಸೇರಿದವನು ಕೆಲಸ ಮಾಡದಿರುವುದೂ ತನ್ನ ಅರ್ಹತೆ ಎಂದು ತಿಳಿಯುತ್ತಾನೆ. ಈ ಮಾತುಗಳಿಗೆ ಎಷ್ಟೋ ಸಂದರ್ಭಗಳಲ್ಲಿ ದೃಷ್ಟಾಂತ ದೊರೆಯುತ್ತಿದೆ.

ಅಂತೆಯೇ ಅತಿ ಆಧುನಿಕತೆಯ ಬಲದಿಂದ ಸುಖಸಂಪತ್ತನ್ನು ಮಾತ್ರ ಅರಸಲು ಹೊರಟ ಮಾನವ ಆತ್ಮ ಸಂತೃಪ್ತಿಯಿಂದ ವಂಚಿತನಾಗುತ್ತಾ ನೆಂಬುದು ಸತ್ಯವಾದ ಮಾತು.

ನಮ್ಮ ಪ್ರಜಾಪ್ರಭುತ್ವದಲ್ಲಿ "ಎಲ್ಲರೂ ಸಮಾನರು. ಆದರೂ ಕೆಲವರು ಹೆಚ್ಚು ಸಮಾನರು" ಎಂಬ ಜಾಣ ನುಡಿ ಜಾಗ ಪಡೆದಿದೆ. ಇದು ಅಳಿಸಿ ಹೋಗಬೇಕು. ಉತ್ತಮ ಜೀವನ ಮಾರ್ಗ ಕ್ರಮಿಸುತ್ತಾ ಎಲ್ಲರಿಗೂ ಒಳಿತನ್ನುಂಟು ಮಾಡುವ ಮಾನವೀಯ ಮೌಲ್ಯಗಳು ಬೆಳೆದು ಬಂದರೆ ಮಾತ್ರ ಎಲ್ಲರಿಗೂ ಕ್ಷೇಮ; ಇದರಿಂದಲೇ ಸುಸಂಸ್ಕೃತಿಯ ಮುನ್ನಡೆ; ನಾಡಿನ ಏಳಿಗೆ.

ಹಿನ್ನುಡಿ

1980ರಲ್ಲಿ ಪ್ರಾರಂಭವಾದ ಸಂದೀಪ ಸಾಹಿತ್ಯ ಈಗ ತನ್ನ 25ನೇ ಕೃತಿಯಾಗಿ 'ಚಿತ್ರವೃತ್ತ' ಎಂಬ 25 ಪ್ರಬಂಧಗಳ ಸಂಕಲನವನ್ನು ಹೊರ ತಂದಿದೆ. ಈ ಸಾಹಸಕ್ಕಾಗಿ ಸಂಪಾದಕಿಯಾದ ಶ್ರೀಮತಿ ಇಂದಿರಾ ಹಾಲಂಬಿ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸಲೇ ಬೇಕು. ಈಗಿನ ದಿನಗಳಲ್ಲಿ ಪುಸ್ತಕ ಪ್ರಕಟಣೆ – ಮಾರಾಟ ನಿಜವಾಗಿ ಬಹು ಕಷ್ಟದ ನಷ್ಟದ ಕೆಲಸ. ವರ್ಷದಲ್ಲಿ ನಾಲ್ಕು ಬಾರಿ, ನಿಗದಿತ ಸಮಯಕ್ಕೆ, ಸದಭಿರುಚಿಯ ಮಹಿಳಾ ಕೃತಿಗಳನ್ನು ಮಾತ್ರ ಪ್ರಕಟಿಸುವುದೆಂದರೆ ಸಾಮಾನ್ಯ ಸಂಗತಿಯಲ್ಲ. ನನಗೆ ತಿಳಿದಂತೆ ಜಿಲ್ಲೆಯ ಏಕೈಕ ಮಹಿಳಾ ಪ್ರಕಾಶಕಿ ಶ್ರೀಮತಿ ಇಂದಿರಾ ಹಾಲಂಬಿ. ದೊರೆಯಬೇಕಾದಷ್ಟು ಪ್ರೋತ್ಸಾಹ ದೊರೆಯದಿದ್ದರೂ ಹತಾಶರಾಗದೆ ಛಲ ಮತ್ತು ಉತ್ಸಾಹದಿಂದ ಸದ್ದುಗದ್ದಲವಿಲ್ಲದೆ ತಮ್ಮಷ್ಟಕ್ಕೆ ಸಾಹಿತ್ಯ ಸೇವೆ ಮಾಡುತ್ತಾ ಬಂದಿದ್ದಾರೆ. ಅವರಿಗೆ ಯಶಸ್ಸು ದೊರೆಯಲಿ, ಜನತೆ ಅವರನ್ನು ಗುರುತಿಸುವಂತಾಗಲಿ ಎಂಬುದು ನನ್ನ ಹಾರೈಕೆ.

'ಚಿತ್ರವೃತ್ತ' ಮಹಿಳೆಯ ವಿವಿಧ ಸಮಸ್ಯೆಗಳನ್ನು ಕುರಿತು ಮಹಿಳೆಯರೇ ನಡೆಸಿರುವ ಚಿಂತನೆಗಳ ಸಂಗ್ರಹ. ಪ್ರಸಿದ್ಧ, ಪ್ರಬುದ್ಧ ಹಾಗೂ ಹೊಸ ಲೇಖಕಿಯರು ಇದರಲ್ಲಿ ಭಾಗಿಗಳಾಗಿದ್ದಾರೆ. ಕೇಂದ್ರ ಬಿಂದು ಮಹಿಳೆಯೇ ಆಗಿದ್ದರೂ ಒಂದೆರಡು ಬೇರೆ ಲೇಖನಗಳೂ ಸೇರಿವೆ. 'ಕರೆಂಟು ಪುರಾಣ'ದಂತಹ ಲಘು ಬರಹವೂ ಸೇರಿರುವುದು ಪ್ರಾಯಶಃ 25ರ ಸಂಖ್ಯೆಯನ್ನು ಪೂರ್ಣಗೊಳಿಸುವುದಕ್ಕಾಗಿ ಎಂದು ಕಾಣುತ್ತದೆ. ಹೆಣ್ಣು ಮಗು, ಗೃಹಿಣಿ, ಪತ್ನಿ, ತಾಯಿ ಮುಂತಾದ ಬೇರೆ ಬೇರೆ ಸಂಬಂಧಗಳ ನೆಲೆಯಲ್ಲಿ, ದುಡಿಯುವ ಮಹಿಳೆ, ಗ್ರಾಮೀಣ ಮಹಿಳೆ, ವಿದ್ಯಾವಂತ, ಅವಿದ್ಯಾವಂತ ಮಹಿಳೆ ಮುಂತಾದ ಬೇರೆ ಬೇರೆ ಸಾಮಾಜಿಕ ಸ್ತರಗಳಲ್ಲಿ ಹೆಣ್ಣು ಎದುರಿಸುತ್ತಿರುವ ಸಮಸ್ಯೆ, ಶೋಷಣೆಗಳ ಬಗ್ಗೆ ವಿಚಾರಪೂರ್ಣ, ಅಧ್ಯಯನ ಯೋಗ್ಯ ಲೇಖನಗಳು 'ಚಿತ್ರವೃತ್ತ'ದಲ್ಲಿ ಮೂಡಿ ಬಂದಿವೆ. ಧರ್ಮ – ಸಾಹಿತ್ಯ – ಸಂಸ್ಕೃತಿ ಇವುಗಳ ಏಳಿಗೆಯಲ್ಲಿ ಮಹಿಳೆಯ

ಪಾತ್ರವೇನು? ಅವಳ ಕೊಡುಗೆ ಏನು? ಎಂಬುದನ್ನು ಚರ್ಚಿಸುವ ಗಂಭೀರ ಬರಹಗಳು ಗಮನಾರ್ಹ.

ಒಟ್ಟಿನಲ್ಲಿ ಇಂದಿನ ತುರ್ತು ಅಗತ್ಯವಾದ ಮಹಿಳಾ ಅಧ್ಯಯನಕ್ಕೆ ಇದೊಂದು ಪುಟ್ಟ ಕಾಣಿಕೆ ಸೇರ್ಪಡೆಯಾಗಿರುವುದು ಸಂತೋಷದ ಸಂಗತಿ. ಇಂತಹ ಪ್ರಯತ್ನಗಳು ಇನ್ನಷ್ಟು ನಡೆಯಲಿ.

ಲೀಲಾವತಿ ಎಸ್. ರಾವ್
ಗೋವಿಂದದಾಸ ಕಾಲೇಜು, ಸುರತ್ಕಲ್